# ಬೆಂಗಳೂರಿನ ಟ್ರಾಫಿಕ್ ಜಾಂ ರಸ್ತೆಗಳಿಗೆ ಟ್ರೀಟ್ಮೆಂಟ್

## 13,000 ಕೋಟಿ ರೂ. ವೆಚ್ಚದ 16 ಎಲಿವೇಟೆಡ್ ಕಾರಿಡಾರ್‌ಗಳ ನಿರ್ಮಾಣದ ಪೂರ್ವ ತಯಾರಿ ನಡೆಸುತ್ತಿದೆ

• **ಉದಯವಾಹಿನಿ, ಬೆಂಗಳೂರು**

ಮಹಾನಗರವನ್ನು ತೀವ್ರವಾಗಿ ಕಾಡುತ್ತಿರುವ ಸಂಚಾರ ದಟ್ಟಣೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಮುಂದಾಗಿರುವ ಬಿಬಿಎಂಪಿಯು, 16 ಎಲಿವೇಟೆಡ್ ಕಾರಿಡಾರ್‌ಗಳ ಮೇಲ್ಸೇತುವೆ ನಿರ್ಮಾಣಕ್ಕೆ ಪೂರ್ವತಯಾರಿ ಮಾಡಿಕೊಳ್ಳುತ್ತಿದೆ. ಅಂದಾಜು 13 ಸಾವಿರ ಕೋಟಿ ರೂ. ವೆಚ್ಚದ ಯೋಜನೆ ಅನುಷ್ಠಾನ ಸಂಬಂಧ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿಕೊಡುವ ಕಾರ್ಯದ ಗುತ್ತಿಗೆಯನ್ನು ಮೂರು ಸಂಸ್ಥೆಗಳಿಗೆ ವಹಿಸಿದೆ. ರಾಜಧಾನಿಯ ಉತ್ತರ-ದಕ್ಷಿಣ ಕಾರಿಡಾರ್‌ನ ಹೆಬ್ಬಾಳದ ಎಸ್ಟೀಮ್ ಮಾಲ್ ಜಂಕ್ಷನ್‌ನಿಂದ ಸಿಲ್ಕ್‌ಬೋರ್ಡ್ ಜಂಕ್ಷನ್ ವರೆಗೆ 17,780.13 ಕೋಟಿ ರೂ. ವೆಚ್ಚದಲ್ಲಿ 16.745 ಕಿ.ಮೀ. ಉದ್ದದ ಅವಳಿ ಸುರಂಗ ಮಾರ್ಗ ನಿರ್ಮಾಣಕ್ಕೆ ಸರಕಾರ ಅನುಮೋದನೆ ನೀಡಿದ್ದು, ಟೆಂಡರ್ ಆಹ್ವಾನಿಸಲು ಸಿದ್ಧತೆ ನಡೆಸಲಾಗಿದೆ. ಈ ಬೆನ್ನಲ್ಲೇ ಪ್ರಮುಖ ರಸ್ತೆಗಳಲ್ಲಿ ವಾಹನ ಸಂಚಾರ ಸುಗಮಗೊಳಿಸಲು ಮೇಲ್ಸೇತುವೆ, ಅಂಡರ್ ಪಾಸ್‌ಗಳ ನಿರ್ಮಾಣ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಿದ್ಧತೆ ನಡೆಸಲಾಗಿದೆ.

**ದಟ್ಟಣೆಯಲ್ಲಿ ನಗರಕ್ಕೆ 2ನೇ ಸ್ಥಾನ:** ಬಿಬಿಎಂಪಿಯು 741 ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ಸುಮಾರು 12,878 ಕಿ.ಮೀ. ಉದ್ದದ ರಸ್ತೆ ಜಾಲವಿದೆ. ಅಂದಾಜಿನ ಪ್ರಕಾರ, ನಗರದ ಜನಸಂಖ್ಯೆ 1.40 ಕೋಟಿ ದಾಟಿದೆ. ಜನಸಂಖ್ಯೆ


ಉದಯವಾಹಿನಿ ಚಿತ್ರ

ಹೆಚ್ಚಳ ಮತ್ತು ಆರ್ಥಿಕ ಅಭಿವೃದ್ಧಿಯಿಂದಾಗಿ ವಾಹನಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದ್ದು, ಇದರಿಂದ ಹಾಲಿ ರಸ್ತೆಗಳು ಹಾಗೂ ಮೂಲಭೂತ ಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದೆ. ವರದಿಯೊಂದರ ಪ್ರಕಾರ, ಬೆಂಗಳೂರು ನಗರವು ವಿಶ್ವದಲ್ಲೇ ವಾಹನ ದಟ್ಟಣೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಇದು ಸಾರ್ವಜನಿಕರ ನಿತ್ಯದ ಬದುಕಿಗೆ ಸವಾಲೊಡ್ಡುತ್ತಿದೆ.

ಸಿಲಿಕಾನ್ ಸಿಟಿಯಲ್ಲಿ ಸುಮಾರು 1.20 ಕೋಟಿಗಿಂತ ಹೆಚ್ಚು ವಾಹನಗಳಿವೆ. ಇದಲ್ಲದೆ, ಸುತ್ತಮುತ್ತಲ ಜಿಲ್ಲೆಗಳು ಹಾಗೂ ರಾಜ್ಯಗಳಿಂದ ನಿತ್ಯ ಲಕ್ಷಾಂತರ ವಾಹನಗಳು ಬಂದು ಹೋಗುತ್ತವೆ. ಹೀಗಾಗಿ, ಗಂಟೆಗೆ 10-12 ಕಿ.ಮೀ. ದೂರವಷ್ಟೇ ಕ್ರಮಿಸಲು ಸಾಧ್ಯವಾಗುತ್ತಿದೆ. ಪರಿಣಾಮ, ನಗರದ ಜನರು ದಿನದ ಬಹುಪಾಲು ಸಮಯವನ್ನು ರಸ್ತೆಯಲ್ಲೇ ಕಳೆಯುತ್ತಿದ್ದು, ಸಂಚಾರ ದಟ್ಟಣೆಯಿಂದ ನರಕಯಾತನೆ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸುರಂಗ ರಸ್ತೆ, ಎಲಿವೇಟೆಡ್ ಕಾರಿಡಾರ್‌ನಂತಹ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

**ಪ್ರತಿ ಕಿ.ಮೀ.ಗೆ 120 ಕೋಟಿ ರೂ.:** ನಗರದ ಕೋಣನ ಕುಂಟೆ ಕ್ರಾಸ್ ಮೂಲಕ ಕನಕಪುರ ಕಡೆಯಿಂದ ಬನಶಂಕರಿ ಕಡೆಗೆ ಮೇಲ್ಸೇತುವೆ/ಅಂಡರ್‌ಪಾಸ್, ಕನಕಪುರ ರಸ್ತೆಯ ರಘುವನಹಳ್ಳಿಯಲ್ಲಿನ ಅಡ್ಯಾರ್ ಆನಂದಭವನ ಬಳಿ ಮೇಲ್ಸೇತುವೆ ಹಾಗೂ ಮಾರೇನಹಳ್ಳಿ ಮುಖ್ಯರಸ್ತೆಯ ರಾಗಿಗುಡ್ಡದ 7ನೇ ಮುಖ್ಯ ಜಂಕ್ಷನ್‌ನಿಂದ ಪೈಪ್‌ಲೈನ್ ರಸ್ತೆ ಮಾರ್ಗವಾಗಿ ಕನಕಪುರ ರಸ್ತೆಯ ನೈಸ್ ರಸ್ತೆವರೆಗೆ ಎಲಿವೇಟೆಡ್ ಕಾರಿಡಾರ್ ನಿರ್ಮಾಣಕ್ಕೆ ಡಿಪಿಆರ್ ಸಿದ್ಧಪಡಿಸಿಕೊಡಲು ಜ.24ರಂದು ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್‌ನ ತಾಂತ್ರಿಕ ಬಿಡ್‌ನಲ್ಲಿ ಮೂರು ಸಂಸ್ಥೆಗಳು ಅರ್ಹಗೊಂಡಿದ್ದವು.

ಈ ಪೈಕಿ ನಾಗೇಶ್ ಕನ್ಸಲ್ಟೆಂಟ್ ಅವರು 2.36 ಕೋಟಿ ರೂ. ನಮೂದಿಸಿ ಕನಿಷ್ಠ ಬಿಡ್‌ದಾರರಾಗಿದ್ದರು. ಹೀಗಾಗಿ, ರಸ್ತೆಗಳಲ್ಲಿ ಮೇಲ್ಸೇತುವೆ, ಎಲಿವೇಟೆಡ್ ಕಾರಿಡಾರ್ ನಿರ್ಮಾಣಕ್ಕೆ ಡಿಪಿಆರ್ ಸಿದ್ಧಪಡಿಸಿಕೊಡಲು 2.36 ಕೋಟಿ ರೂ.ಗಳ ಟೆಂಡರ್ ಮೊತ್ತಕ್ಕೆ ಬಿಬಿಎಂಪಿ ಅನುಮೋದನೆ ನೀಡಿದೆ. 12.20 ಕಿ.ಮೀ. ಉದ್ದದ ಎಲಿವೇಟೆಡ್ ಕಾರಿಡಾರ್, ಅಂಡರ್‌ಪಾಸ್ ಅಥವಾ ಮೇಲ್ಸೇತುವೆ ನಿರ್ಮಾಣಕ್ಕೆ ಪ್ರತಿ ಕಿ.ಮೀ.ಗೆ 120 ಕೋಟಿ ರೂ. ವೆಚ್ಚ ಅಂದಾಜಿಸಲಾಗಿದೆ. ಅದರಂತೆ 1464 ಕೋಟಿ ರೂ. ವೆಚ್ಚವಾಗಬಹುದೆಂದು ನಿರೀಕ್ಷಿಸಲಾಗಿದೆ.

### ಡಿಪಿಆರ್‌ಗೆ 24 ಕೋಟಿ ರೂ. ವೆಚ್ಚ

**ಬೆಂಗಳೂರು ಸಮಗ್ರ ಸಂಚಾರ ನಿರ್ವಹಣೆ ಯೋಜನೆಯಡಿ 13 ಸಾವಿರ ಕೋಟಿ ರೂ. ವೆಚ್ಚದಲ್ಲಿ 16 ಎಲಿವೇಟೆಡ್ ಕಾರಿಡಾರ್‌ಗಳ ನಿರ್ಮಾಣಕ್ಕೆ ಪಾಲಿಕೆಯು ಮುಂದಡಿ ಇಟ್ಟಿದೆ. ಹೊಸದಿಲ್ಲಿ ಮೂಲಕ ಆಲ್ಟಿನೋಕ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿದ್ದ ಕಾರ್ಯಸಾಧ್ಯತಾ ವರದಿ ಆಧರಿಸಿ, 16 ಎಲಿವೇಟೆಡ್ ಕಾರಿಡಾರ್‌ಗಳ ನಿರ್ಮಾಣಕ್ಕೆ ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ. ಡಿಪಿಆರ್ ಸಿದ್ಧಪಡಿಸಿಕೊಡುವ ಕಾರ್ಯವನ್ನು ಇನ್ಫ್ರಾ ಸಪೋರ್ಟ್ ಎಂಜನಿಯರಿಂಗ್ ಕನ್ಸಲ್ಟೆಂಟ್ ಪ್ರೈ.ಲಿ, ಸಿದ್ಧಿ ಶಕ್ತಿ ಪ್ರಾಜೆಕ್ಟ್ಸ್, ನಾಗೇಶ್ ಕನ್ಸಲ್ಟೆಂಟ್ ಎಂಬ ಸಂಸ್ಥೆಗಳಿಗೆ ಗುತ್ತಿಗೆಗೆ ನೀಡಲಾಗಿದೆ. ಈ ಸಂಸ್ಥೆಗಳು ಮೂರು ತಿಂಗಳಲ್ಲಿ ಡಿಪಿಆರ್ ಸಲ್ಲಿಸಲಿವೆ. ಆನಂತರ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಟೆಂಡರ್ ಕರೆಯಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಒಟ್ಟು 24 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ.**

# ದಾಸ ವರ್ಷಿಣಿ ಗಾಯನ

• **ಉದಯವಾಹಿನಿ, ಬೆಂಗಳೂರು**

ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀ ಪಾದಂಗಳವರ ಆದೇಶದಂತೆ




ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ಯರ ನೇತೃತ್ವದಲ್ಲಿ ಜೂನ್ 12, ಗುರುವಾರ ಸಂಜೆ 7-00 ಗಂಟೆಗೆ ಕು|| ನಿರೀಕ್ಷಾ ಮಂಜುನಾಥ್ ರವರಿಂದ ದಾಸ ವರ್ಷಿಣಿ ಗಾಯನ ಕಾರ್ಯಕ್ರಮ.

ಕೀ-ಬೋರ್ಡ್: ಶ್ರೀ ಅಮಿತ್ ಶರ್ಮಾ, ತಬಲಾ: ಶ್ರೀ ಸರ್ವೋತ್ತಮ. ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಬೆಂಗಳೂರು

# ಶ್ರೀಕ್ಷೇತ್ರ ಮೇಲುಕೋಟೆ ವೈಭವ ಕೃತಿ ಲೋಕಾರ್ಪಣೆ

• **ಉದಯವಾಹಿನಿ, ಬೆಂಗಳೂರು**

ವಿಜಯನಗರ ಆದಿಚುಂಚನಗಿರಿ ಶಾಖಾ ಮಠದಲ್ಲಿ 10/06/2025 ರಂದು ಆದಿಚುಂಚನಗಿರಿ ಮಹಾ ಸಂಸ್ಥಾನದ ಪೀಠಾಧ್ಯಕ್ಷರು ಜಗದ್ಗುರು ಶ್ರೀ ಶ್ರೀ ಶ್ರೀ ನಿರ್ಮಲಾನಂದ ಸ್ವಾಮೀಜಿಯವರು ರತ್ನದೀಪ ಪ್ರಕಾಶನದ ಮೂಲಕ ಲೇಖಕರಾದ ಚನ್ನೇಗೌಡ ಉಜ್ಜನಿ ಚಲುವಯ್ಯರವರು ರಚಿಸದ ಶ್ರೀ ಕ್ಷೇತ್ರ ಮೇಲುಕೋಟೆ ವೈಭವ ಎಂಬ ಕೃತಿಯನ್ನು ತಮ್ಮ ಅಮೃತಹಸ್ತದಿಂದ ಬಿಡುಗಡೆ ಮಾಡಿದರು. ಹೆಸರಾಂತ ಸಾಹಿತಿ ಎ. ಜಿ. ರತ್ನ ಕಾಳೇಗೌಡರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಶ್ರೀ



ಶ್ರೀ ನಿರ್ಮಲಾನಂದ ಸ್ವಾಮೀಜಿಗಳು ಶ್ರೀ ಕ್ಷೇತ್ರ ಮೇಲುಕೋಟೆಯ ಶ್ರೀ ಚಲುವನಾರಾಯಣ ಸ್ವಾಮಿ ಶ್ರೀ ತಿರುನಾರಾಯಣ ಸ್ವಾಮಿ, ಶ್ರೀ ಯೋಗನರ ಸಿಂಹಸ್ವಾಮಿಯು ನೆಲೆಸಿರುವ ಕ್ಷೇತ್ರದ ಇತಿಹಾಸ ಮಹಿಮೆ, ಈ ಪುಣ್ಯ ಕ್ಷೇತ್ರದಲ್ಲಿ ನಡೆಯುವ ಲೋಕಪ್ರಸಿದ್ಧಿ ಪಡೆದಿರುವ ವೈರುಮುಡಿ ಉತ್ಸವ ಹಾಗೂ ಇನ್ನೂ ಹಲವು ಉತ್ಸವಗಳ ಮಹಿಮೆಗಳು, ವರನಂದಿ ಚರಿತ್ರೆ, ಸುರಚಿತನ ಕಥೆ, ಹಬ್ಬದ ಆಚರಣೆಗಳು, ಮಠಗಳು, ದಾಸೋಹ ವಿದ್ಯಾಸಂಸ್ಥೆಗಳು, ಸಂಸ್ಕೃತ ಮಹಾವಿದ್ಯಾನಿಲಯ, ಕಲ್ಯಾಣಿ ತೀರ್ಥದ ಮಹಿಮೆ, ಕವಿ ಪುತಿನರವರು ಉಜ್ಜನಿಯ ಪಾಳೇಗಾರರು ಮರೆಬಿದ್ದ ಕಥೆ, ಹೀಗೆ ಇನ್ನೂ ಹಲವಾರು ಉತ್ತಮ ಮಾಹಿತಿಗಳ ಸಂಪೂರ್ಣ ಚಿತ್ರಣವನ್ನು ಮೇಲ್ಕಂಡ ಗಣ್ಯರು ಸವಿಸ್ತಾರವಾಗಿ ತಿಳಿಸಿಕೊಟ್ಟರು. ಜೊತೆಗೆ ಈ ಕಾರ್ಯಕ್ರಮದಲ್ಲಿ ಹಲವು ಗುರುಹಿರಿಯರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# 100 ಕೋಟಿ ರೂ. ಮೌಲ್ಯದ 92 ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡ ಇಡಿ

• **ಉದಯವಾಹಿನಿ, ಬೆಂಗಳೂರು**

ಸಿದ್ದರಾಮಯ್ಯ ಅವರನ್ನು ಮೊದಲ ಆರೋಪಿಯನ್ನಾಗಿ ಹೆಸರಿಸಲಾಗಿರುವ ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಜಾರಿ ನಿರ್ದೇಶನಾಲಯ (ಇಡಿ) 2002ರ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿಯಲ್ಲಿ ಸುಮಾರು 100 ಕೋಟಿ ರೂ. ಮೌಲ್ಯದ 92 ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆಯೂ ರಿಯಲ್ ಎಸ್ಟೇಟ್ ಉದ್ಯಮಿಗಳು ಮತ್ತು ಅಧಿಕಾರಿಗಳಿಗೆ ಸೇರಿದ ರೂ.300 ಕೋಟಿ ಮೌಲ್ಯದ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು. ಈವರೆಗೂ ಮುಟ್ಟುಗೋಲು ಹಾಕಿಕೊಂಡಿರುವ ಆಸ್ತಿ ಮೌಲ್ಯ ಸುಮಾರು 400 ಕೋಟಿ ರೂಪಾಯಿ ಎಂದು ಇಡಿ ಬಿಡುಗಡೆ ಮಾಡಿದ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ. ಮುಟ್ಟುಗೋಲು ಹಾಕಿಕೊಂಡ ಆಸ್ತಿಗಳನ್ನು ವಸತಿ ಸಹಕಾರಿ ಸಂಘ ಮತ್ತು ಮುಡಾ ಅಧಿಕಾರಿಗಳು ಸೇರಿದಂತೆ ಪ್ರಭಾವಿ ವ್ಯಕ್ತಿಗಳಿಗೆ ಹತ್ತಿರದ ಬೇನಾಮಿ ವ್ಯಕ್ತಿಗಳ ಹೆಸರಿನಲ್ಲಿ ನೋಂದಾಯಿಸಲಾಗಿದೆ ಎಂದು ಇ.ಡಿ ಹೇಳಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇತರರ ವಿರುದ್ಧ ಮೈಸೂರಿನ ಲೋಕಾಯುಕ್ತ ಪೊಲೀಸರು ದಾಖಲಿಸಿದ ಎಫ್‌ಐಆರ್ ಆಧಾರದ ಮೇಲೆ ಜಾರಿ ನಿರ್ದೇಶನಾಲಯ ತನಿಖೆಯನ್ನು ಪ್ರಾರಂಭಿಸಿದೆ ಎಂದು ಇಡಿ ತಿಳಿಸಿದೆ.

# ಸಿಎಂ -ಡಿಸಿಎಂ ದೆಹಲಿಗೇಕೆ ಹೋಗಿದ್ದಾರೆ ಗೊತ್ತಿಲ್ಲ: ಸಚಿವ ಡಾ.ಜಿ.ಪರಮೇಶ್ವರ್


• **ಉದಯವಾಹಿನಿ, ಬೆಂಗಳೂರು**

ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೆಹಲಿಗೆ ಭೇಟಿ ಉದ್ದೇಶ ನನಗೆ ತಿಳಿದಿಲ್ಲ ಎಂದು ಗೃಹ ಸಚಿವ ಜಿ. ಪರಮೇಶ್ವರ್ ಅವರು ಮಂಗಳವಾರ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಹಾಗೂ ಡಿಸಿಎಂ ದೆಹಲಿಗೆ ಭೇಟಿ ನೀಡಿದ್ದು, ಈ ಭೇಟಿ ಉದ್ದೇಶ ನನಗೆ ತಿಳಿದಿಲ್ಲ. ಬೆಂಗಳೂರು ಕಾಲ್ತುಳಿತ ಘಟನೆ ಬಗ್ಗೆ ಹೈಕಮಾಂಡ್‌'ಗೆ ಮಾಹಿತಿ ನೀಡಲು ಹೋಗಿರಬಹುದು. ಪಕ್ಷದ ಹೈಕಮಾಂಡ್ ನನಗೆ ಕರೆ ಮಾಡಿಲ್ಲ. ಅವರಿಂದ ಕರೆ ಬಂದಿದ್ದರೆ ನಾನೂ ಕೂಡ ಹೋಗುತ್ತಿದ್ದ ಎಂದು ಹೇಳಿದರು. ಬೆಂಗಳೂರು ಕಾಲ್ತುಳಿತ ದುರಂತ ಕುರಿತು ನಿನ್ನೆ ಸಭೆ ನಡೆಸಲಾಗಿತ್ತು. ನ್ಯಾಯಾಲಯಕ್ಕೆ ಸರ್ಕಾರ ವರದಿ ಸಲ್ಲಿಸಬೇಕಿದ್ದು, ಸರ್ಕಾರದ ಪರವಾಗಿ ಯಾವೆಲ್ಲಾ ಮಾಹಿತಿ ನೀಡಬೇಕೆಂಬುದನ್ನು ಚರ್ಚಿಸಲಾಗಿದೆ ಎಂದು ತಿಳಿಸಿದರು. ಏತನ್ಮಧ್ಯೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ತೆರಳಿದ್ದು, ದೆಹಲಿಯಲ್ಲಿ ತಂಗಿರುವ ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರೊಂದಿಗೆ ಹೈಕಮಾಂಡ್ ಭೇಟಿಗೆ ತೆರಳಿದ್ದಾರೆಂದು ವರದಿಗಳು ತಿಳಿಸಿವೆ.

# ನುಡಿ ನಮನ ಕಾರ್ಯಕ್ರಮ

• **ಉದಯವಾಹಿನಿ, ಕೆಂಗೇರಿ ಉಪನಗರ**

ಖ್ಯಾತ ಕವಿ ಸಾಹಿತಿ ಹೆಚ್. ಎಸ್ ವೆಂಕಟೇಶಮೂರ್ತಿ ಅವರಿಗೆ ನುಡಿ ನಮನ ಕಾರ್ಯಕ್ರಮವನ್ನು ಇದೇ ತಿಂಗಳ 15ರ ಭಾನುವಾರ ಬೆಳಗ್ಗೆ 10 ಗಂಟೆಗೆ ಕೆಂಗೇರಿ ಉಪನಗರದ ಶೇಷಾದ್ರಿಪುರಂ ಕಾಲೇಜು ಸಭಾಂಗಣದಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು ಆಶ್ರಯದಲ್ಲಿ ಆಯೋಜಿಸಲಾಗಿದೆ. ಖ್ಯಾತ ಕವಿ ಡಾ. ಬಿ.ಆರ್. ಲಕ್ಷ್ಮಣರಾವ್ ನುಡಿ ನಮನ ಸಲ್ಲಿಸಲಿದ್ದಾರೆ. ಪ್ರಜಾವಾಣಿ ಸಂಪಾದಕ ರವೀಂದ್ರ ಭಟ್, ಖ್ಯಾತ ರಂಗಕರ್ಮಿ ಶ್ರೀನಿವಾಸ




ಜಿ .ಕಪ್ಪಣ್ಣ, ಪ್ರಾಧ್ಯಾಪಕಿ, ಲೇಖಕಿ ಡಾ: ವತ್ಸಲ ಮೋಹನ್ ಎಚ್‌ಎಸ್ ವಿ ಕುರಿತು ಮಾತನಾಡಲಿದ್ದಾರೆ ಯಶವಂತಪುರ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಸುಧೀಂದ್ರ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಎಂ ಪ್ರಕಾಶಮೂರ್ತಿ ಡಾ. ಜೈರಾಮ್ ಡಾ. ಮಂಜುನಾಥ್ ಡಾ, ವೆಂಕಟಸ್ವಾಮಿ, ಡಾ, ವಿನಯ್ ಪಾಲ್ಗೊಳ್ಳಲಿದ್ದಾರೆ.

ಖ್ಯಾತ ಸಂಗೀತಗಾರರಾದ ಶ್ರೀಮತಿ ಸಂಗೀತ ಕಟ್ಟಿ ಅವರಿಂದ ಗಾಯನ ನಡೆಯಲಿದೆ ಹೆಚ್‌ಎಸ್‌ವಿ ರಚಿಸಿದ ಗೀತೆಗಳ ಗಾಯನವನ್ನ ಖ್ಯಾತ ಅಂತರಾಷ್ಟ್ರೀಯ ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು, ಸ್ಥಳಿಯ ಕಲಾವಿದರಾದ ವೀರೇಶ್, ರವಿ ಇಗ್ಗಲೂರು, ಸೇರಿದಂತೆ ಹಲವರು ಗಾಯನ ನಡೆಸಿಕೊಡಲಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುಧೀಂದ್ರ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಕಾಲ್ತುಳಿತ ಪ್ರಕರಣ: ನೋಟಿಸ್ ಜಾರಿಗೆ ಸಿಐಡಿ ಸಿದ್ಧತೆ

• **ಉದಯವಾಹಿನಿ, ಬೆಂಗಳೂರು**

ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ತಂಡವು ವಿಜಯೋತ್ಸವದ ಆಯೋಜಕರಿಗೆ ನೋಟಿಸ್ ಜಾರಿ ಮಾಡಲು ಸಿದ್ಧತೆ ನಡೆಸಿದೆ. ಆರ್‌ಸಿಬಿ ಮ್ಯಾನೇಜ್‌ಮೆಂಟ್, ಡಿಎನ್‌ಎ ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಹಾಗೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ)ಯ ವಿರುದ್ಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸಿಐಡಿ ಎಸ್‌ಪಿ ಶುಭನ್ವಿತಾ ಅವರ ನೇತೃತ್ವದ ತಂಡವು ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿದೆ. ಪ್ರಕರಣದ ಸಂಬಂಧ ಆರ್‌ಸಿಬಿ, ಕೆಎಸ್‌ಸಿಎ ಮತ್ತು ಡಿಎನ್‌ಎ ಪದಾಧಿಕಾರಿಗಳಿಗೆ ಶೀಘ್ರದಲ್ಲಿಯೇ ನೋಟಿಸ್ ನೀಡಿ ವಿಚಾರಣೆ ನಡೆಸಲು ಸಿದ್ಧತೆ ನಡೆದಿದೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಬಂಧಿತ ಆರೋಪಿಗಳಾದ ನಿಖಿಲ್ ಸೋಸಲೆ, ಸುನೀಲ್ ಮ್ಯಾಥ್, ಕಿರಣ್ ಮತ್ತು ಸುಮಂತ್ ಅವರು


ಉದಯವಾಹಿನಿ ಚಿತ್ರ

ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದುಕೊಳ್ಳಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದರು. ವಿಜಯೋತ್ಸವ ಆಯೋಜನೆ ಸಂದರ್ಭದಲ್ಲಿ ಅಂಬುಲೆನ್ಸ್ ಇರಲಿಲ್ಲ. ಪ್ರಥಮ ಚಿಕಿತ್ಸೆಗೂ ಯಾವುದೇ ವ್ಯವಸ್ಥೆ ಮಾಡಿಕೊಂಡಿರಲಿಲ್ಲ. ಅಗ್ನಿಶಾಮಕ ದಳದ ಸಿಬ್ಬಂದಿಯೂ ಸ್ಥಳದಲ್ಲಿ ಇರಲಿಲ್ಲ ಎಂದು ಗಾಯಾಳುಗಳು ಹಾಗೂ ಮೃತಪಟ್ಟವರ ಕುಟುಂಬದ ಸದಸ್ಯರು ಆರೋಪಿಸಿದ್ದಾರೆ. 11 ಮಂದಿಯ ಕುಟುಂಬದ ಸದಸ್ಯರಿಂದ ಹೇಳಿಕೆ ದಾಖಲಿಸಲು ಪ್ರತಿ ಕುಟುಂಬಕ್ಕೆ ಪ್ರತ್ಯೇಕ ಸಮಯ ನಿಗದಿ ಪಡಿಸಲಾಗಿದೆ. ಸಂಬಂಧಿಸಿದವರಿಗೆ ಮಾಹಿತಿಯನ್ನೂ ನೀಡಲಾಗಿದೆ' ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

### ಹೇಳಿಕೆ ದಾಖಲಿಸಿಕೊಳ್ಳಲು ಸಿದ್ಧತೆ

**ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ನೇತೃತ್ವದಲ್ಲಿ ಮ್ಯಾಜಿಸ್ಟೀರಿಯಲ್ ತನಿಖೆಯೂ ನಡೆಯುತ್ತಿದ್ದು, ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಲು ಜೂನ್ 11, 13 ಮತ್ತು 17ರಂದು ಸಂತ್ರಸ್ಥರು ಹಾಗೂ ಅವರ ಕುಟುಂಬ ಸದಸ್ಯರಿಂದ ಹೇಳಿಕೆ ದಾಖಲಿಸಿಕೊಳ್ಳಲು ದಿನಾಂಕ ನಿಗದಿ ಪಡಿಸಲಾಗಿದೆ. ಜಗದೀಶ್ ಅವರು ಕ್ರೀಡಾಂಗಣಕ್ಕೆ ಭೇಟಿ ನೀಡಿ ಮಾಹಿತಿ ಕಲೆಹಾಕಿದ್ದರು. ಕಾಲ್ತುಳಿತ ಸಂಭವಿಸಿದ ಜಾಗಗಳನ್ನು ಪರಿಶೀಲನೆ ನಡೆಸಿದ್ದರು.**

# ಪಬ್ ಹೊರಗೆ 2 ಗುಂಪುಗಳ ನಡುವೆ ಮಾರಾಮಾರಿ: ಮೂವರ ಬಂಧನ

• **ಉದಯವಾಹಿನಿ, ಬೆಂಗಳೂರು**

ಪಬ್ ಎದುರು ಯುವತಿಯ ವಿಚಾರಕ್ಕೆ 2 ಗುಂಪುಗಳ ನಡೆದಿದ್ದ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಕೋರಮಂಗಲ ಠಾಣೆ ಪೊಲೀಸರು ಬಂಧನಕ್ಕೊಳಪಡಿಸಿದ್ದಾರೆ. ಜೂನ್ 7ರಂದು ಮಧ್ಯರಾತ್ರಿ 1ರ ಸುಮಾರಿಗೆ ಕೋರಮಂಗಲದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಪಬ್ ಹೊರಗೆ 2 ಗುಂಪುಗಳ ಮಧ್ಯೆ ಗಲಾಟೆ ನಡೆದಿತ್ತು. ಒಂದು ಗುಂಪಿನ ಸದಸ್ಯರು, ಯುವತಿಯನ್ನು ಮಾತನಾಡಿಸಲು ಯತ್ನಿಸಿದ್ದರು. ಆಕೆಯ ಸ್ನೇಹಿತರು ಎದುರಾಳಿ ಗುಂಪಿನೊಂದಿಗೆ ವಾಗ್ವಾದ ನಡೆಸಿದ್ದರು. ಈ ಜಗಳ ವಿಕೋಪಕ್ಕೆ ತಿರುಗಿ



ಹಲ್ಲೆ, ಕಲ್ಲು ತೂರಾಟ ನಡೆದಿತ್ತು. ಹಲ್ಲೆ ನಡೆಸುತ್ತಿರುವ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಆ ದೃಶ್ಯವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ದೃಶ್ಯಾವಳಿ ಆಧರಿಸಿ ಪೊಲೀಸರು ಇದೀಗ ಮೂವರು ಆರೋಪಿಗಳನ್ನು ಬಂಧನಕ್ಕೊಳಪಡಿಸಿದ್ದಾರೆ. ಬಂಧಿತ ಮೂವರಲ್ಲಿ ಇಬ್ಬರು ಕೇರಳದವರಾಗಿದ್ದು, ಓರ್ವ ಚಿಕ್ಕಮಗಳೂರು ಮೂಲದವನು ಎಂದು ತಿಳಿದುಬಂದಿದೆ. ಇನ್ನು ಹಲ್ಲೆಗೊಳಗಾಗಿದ್ದ ಮೂವರು ಕೂಡ ಕೇರಳದವರೇ ಆಗಿದ್ದು, ಒಂದೇ ಫ್ಲಾಟ್‌ನಲ್ಲಿ ಒಟ್ಟಿಗೆ ವಾಸವಿದ್ದಾರೆನ್ನಲಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವಿಡಿಯೋವನ್ನು ಪರಿಶೀಲಿಸಲಾಗಿದ್ದು, ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಡಿಸಿಪಿ (ಆಗ್ನೇಯ) ಸಾರಾ ಫಾತಿಮಾ ಅವರು ಹೇಳಿದ್ದಾರೆ.

# ಜೆ.ಸಿ.ರಸ್ತೆಯಲ್ಲಿ ಆಮೆಗತಿಯ ವೈಟ್‌ಟಾಪಿಂಗ್ ಕಾಮಗಾರಿ

• **ಉದಯವಾಹಿನಿ, ಬೆಂಗಳೂರು**

ಮಿನರ್ವ ವೃತ್ತದಿಂದ ಪುರಭವನದವರೆಗಿನ ವ್ಯಾಪಾರ, ಕಲಾ ಕೇಂದ್ರಗಳ ತಾಣವಾದ ಜೆ.ಸಿ. ರಸ್ತೆಯಲ್ಲಿ ನಡೆಯುತ್ತಿರುವ ಆಮೆಗತಿಯ ವೈಟ್‌ಟಾಪಿಂಗ್ ಕಾಮಗಾರಿಗೆ ಎಂಟು ತಿಂಗಳಾದರೂ ಮುಕ್ತಿ ಸಿಕ್ಕಿಲ್ಲ. ಇದರಿಂದ ಕಲಾಕೇಂದ್ರಗಳ ಚಟುವಟಿಕೆಗೆ ಅಡ್ಡಿಯಾಗಿದೆ. ಕಾರ್ಯಕ್ರಮಗಳಿಗೆ ವೀಕ್ಷಕರ ಸಂಖ್ಯೆಯಲ್ಲೂ ಕುಸಿತವಾಗಿದೆ.

ಸುಮಾರು 1.3 ಕಿ.ಮೀ. ಉದ್ದದ ರಸ್ತೆಯಲ್ಲಿ ಕಳೆದ ನವೆಂಬರ್ ತಿಂಗಳಿಂದ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದೆ. ಆದರೆ ಈವರೆಗೆ ಪೂರ್ಣಗೊಂಡಿಲ್ಲ. ಒಳಚರಂಡಿ ಕೊಳವೆ ಹಾಗೂ ಆಪ್ಟಿಕಲ್ ಫೈಬರ್ ಕೇಬಲ್ ಅಳವಡಿಕೆ ಕಾಮಗಾರಿ ನಡೆಯುತ್ತಿದ್ದು, ಇಡೀ ರಸ್ತೆ ಧೂಳುಮಯವಾಗಿರುತ್ತದೆ. ಎರಡೂ ಬದಿಯ ಕಟ್ಟಡಗಳು ಧೂಳಿನಲ್ಲೇ ಮಿಂದೆದ್ದಿವೆ. ಪ್ರತಿಷ್ಠಿತ ಕಲಾಮಂದಿರಗಳಾದ ರವೀಂದ್ರ ಕಲಾಕ್ಷೇತ್ರ, ಎಡಿಎ ರಂಗಮಂದಿರ, ಟೌನ್‌ಹಾಲ್, ನಯನ ಸಭಾಂಗಣಗಳಿಗೂ ಧೂಳಿನ ಸಮಸ್ಯೆ ಹೆಚ್ಚು ತಟ್ಟಿದೆ. ಎಷ್ಟು ಬಾರಿ ಸ್ವಚ್ಛಗೊಳಿಸಿದರೂ ಸ್ವಲ್ಪ ಹೊತ್ತಿಗೇ ಕಟ್ಟಡಗಳ ಒಳಗೂ, ಹೊರಗೂ ಧೂಳು ತುಂಬಿಕೊಳ್ಳುತ್ತಿದೆ.

ಹೀಗಾಗಿ, ಕಲಾ ಮಂದಿರಗಳ ಕಾರ್ಯಕ್ರಮಗಳಿಗೆ ಬರುವ ವೀಕ್ಷಕರ ಸಂಖ್ಯೆಯಲ್ಲಿ ಶೇ. 20-25ರಷ್ಟು ಕುಸಿತವಾಗಿದೆ.

**ನೀರು ಸಿಂಪಡಿಸದೆ ಕಾಮಗಾರಿ:** ವಾಹನ ಮತ್ತು ಜನನಿಬಿಡ ರಸ್ತೆಯಲ್ಲಿ ಇಂತಹ


ಉದಯವಾಹಿನಿ ಚಿತ್ರ

### ವ್ಯಾಪಾರಕ್ಕೆ ಹೊಡೆತ

**ಜೆ.ಸಿ. ರಸ್ತೆ ಆಟೊಮೊಬೈಲ್ ಸಂಬಂಧಿತ ಮಳಿಗೆಗಳಿಗೆ ಹೆಸರುವಾಸಿ. ವಾಹನ ದುರಸ್ತಿ, ಆಲ್ಟ್ರೇಷನ್‌ಗೆ ಸಂಬಂಧಿಸಿದ ಹಲವು ಮಳಿಗೆಗಳಿವೆ. ಕೃಷಿ, ಗೃಹೋಪಯೋಗಿ ವಸ್ತುಗಳ ಮಾರಾಟ ಮಳಿಗೆಗಳೂ ಇವೆ. ರಸ್ತೆ ಕಾಮಗಾರಿಯಿಂದ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿಲ್ಲ. ಆಮೆಗತಿಯ ರಸ್ತೆ ಕಾಮಗಾರಿ ವ್ಯಾಪಾರ ವಹಿವಾಟಿಗೆ ಭಾರಿ ಹೊಡೆತ ನೀಡಿದೆ, ಎಂದು ಟಯರ್ ವ್ಯಾಪಾರಿ ಶ್ರೀನಿವಾಸ್ ನುಡಿದರು.**

ಕಾಮಗಾರಿಗಳಿಗೆ ನೀರು ಸಿಂಪಡಿಸಬೇಕು. ಆದರೆ, ಹಾಗೆ ಮಾಡದಿರುವುದರಿಂದ ಧೂಳು ಹೆಚ್ಚಿನ ಪ್ರಮಾಣದಲ್ಲಿ ಬಾಧಿಸುತ್ತಿದೆ. ಅಲ್ಲಿನ ಕೆಲಸಗಾರರಿಗೆ ಸಾಕಷ್ಟು ಬಾರಿ ಹೇಳಿದರೂ ನೀರು ಸಿಂಪಡಿಸದೆ ಕೆಲಸ ಮಾಡುತ್ತಿದ್ದಾರೆ.

### ಧೂಳಿನಿಂದ ಅನಾರೋಗ್ಯ

**ಕಚೇರಿಗಳಲ್ಲಿ ಎಸಿ ಹಾಕಲೇಬೇಕು. ಧೂಳು ಹೆಚ್ಚಾದ್ದರಿಂದ ಎಸಿಗಳು ಪದೇ ಪದೆ ಕೆಡುತ್ತಿವೆ. ಆರೋಗ್ಯ ಸಂಬಂಧಿ ಸಮಸ್ಯೆಗಳೂ ಕಾಣಿಸಿಕೊಳ್ಳುತ್ತಿದೆ, ಎಂದು ಕೆನರಾ ಬ್ಯಾಂಕ್‌ನ ಸಿಬ್ಬಂದಿ ಬೇಸರ ವ್ಯಕ್ತಪಡಿಸಿದರು.**

ಧೂಳಿನ ಸಮಸ್ಯೆ ಕಟ್ಟಡಗಳನ್ನು ಮಾತ್ರ ಬಾಧಿಸುತ್ತಿಲ್ಲ,

ಮನುಷ್ಯರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು. ಹೊಸೂರು ರಸ್ತೆ ಮಾರ್ಗವಾಗಿ, ಆರ್.ವಿ. ರಸ್ತೆ, ಬಸಪ್ಪ ವೃತ್ತದ ಮಾರ್ಗವಾಗಿ ಬರುವ ವಾಹನಗಳು ಮಿನರ್ವ ವೃತ್ತದಲ್ಲಿ ಸಂಧಿಸಿಯೇ ಜೆ.ಸಿ. ರಸ್ತೆ ಮಾರ್ಗವಾಗಿ ವಿಧಾನಸೌಧ, ಮೆಜೆಸ್ಟಿಕ್, ಶಿವಾಜಿನಗರ, ಶಾಂತಿನಗರದತ್ತ ಸಾಗಬೇಕು. ಈ ಮಾರ್ಗದಲ್ಲಿ ಪ್ರಯಾಣಿಸುವ ಪ್ರಯಾಣಿಕರು ಧೂಳು ಕುಡಿಯುವುದು ಸಾಮಾನ್ಯವಾಗಿದೆ.

**ರಸ್ತೆಯ ಸ್ಥಿತಿ ಹೀಗಿದೆ.** ಒಳಚರಂಡಿ ಅಳವಡಿಕೆಗಾಗಿ ಅಲ್ಲಲ್ಲಿ ಗುಂಡಿಗಳನ್ನು ತೋಡಿ ಅರೆಬರೆಯಾಗಿ ಮುಚ್ಚಲಾಗಿದೆ. ಹೀಗಾಗಿ ಹೊಂಡಗಳು ಎಲ್ಲೆಡೆ ಕಾಣಸಿಗುತ್ತವೆ ಅಲ್ಲಲ್ಲಿ ಮಣ್ಣುಗುಡ್ಡೆ ರಾಶಿ ಬಿದ್ದಿದೆ. ಇದರ ಜತೆ ಬೃಹತ್ ಸಿಮೆಂಟಿನ ರಿಂಗ್‌ಗಳು, ಪೈಪ್‌ಗಳನ್ನು ಕಾಮಗಾರಿ ಸ್ಥಳದಲ್ಲಿ ತಂದಿರಿಸಲಾಗಿದೆ.

# ವಿದ್ಯುತ್ ಸಂಪರ್ಕ ಪಡೆಯಲು ಗ್ರಾಹಕರ ಪರದಾಟ

• **ಉದಯವಾಹಿನಿ, ಬೆಂಗಳೂರು**

ಕಟ್ಟಡದ ಸ್ವಾಧೀನಾನುಭವ ಪತ್ರ (ಒಸಿ) ಕಡ್ಡಾಯ ಮಾಡಿರುವುದರಿಂದ ಹೊಸ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡುವ ಪ್ರಕ್ರಿಯೆ ಬಹುತೇಕ ಸ್ಥಗಿತಗೊಂಡಿದೆ. ಇದರಿಂದಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ವ್ಯಾಪ್ತಿಯಲ್ಲಿ ಸುಮಾರು 88 ಸಾವಿರ ಗ್ರಾಹಕರು ತಮ್ಮ ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲದೆ ಪರದಾಡುತ್ತಿದ್ದಾರೆ. ಹೊಸ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರವನ್ನು ಕಡ್ಡಾಯಗೊಳಿಸಿದ ಸುಮಾರು ಎರಡು ತಿಂಗಳ ನಂತರ ವಿದ್ಯುತ್ ಸಂಪರ್ಕ ಕಲ್ಪಿಸುವ, ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡುವ ಪ್ರಕ್ರಿಯೆಗಳು ಸ್ಥಗಿತಗೊಂಡಿದ್ದು, ಇದು ಕಟ್ಟಡ ನಿರ್ಮಾಣ ಕ್ಷೇತ್ರದ ಮೇಲೆ ಪರಿಣಾಮ ಬೀರಿದೆ. ಸುಪ್ರೀಂ ಕೋರ್ಟ್ ಆದೇಶ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಕೆಇಆರ್‌ಸಿ ಸೂಚನೆ ಪ್ರಕಾರ ಒಸಿ ನಿಯಮವನ್ನು ಅನುಷ್ಠಾನಗೊಳಿಸಲು ಏಪ್ರಿಲ್ 4ರಂದು ಬೆಸ್ಕಾಂ ಆದೇಶ ಮಾಡಿದೆ. ಈ ಆದೇಶ ಹೊರ ಬೀಳುವ ಮೊದಲು ಅರ್ಜಿ ಸಲ್ಲಿಸಿದವರಿಗೂ ಇದೇ ನಿಯಮ ಅನ್ವಯ ಮಾಡಿರುವುದರಿಂದ ಒಂದೆಡೆ ಗ್ರಾಹಕರು, ಮತ್ತೊಂದೆಡೆ ವಿದ್ಯುತ್ ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಏಪ್ರಿಲ್‌ಗೆ ಮುನ್ನ ಮನೆ ನಿರ್ಮಾಣ ಮಾಡಿ, ಅರ್ಜಿ ಸಲ್ಲಿಸಿದವರಿಗೂ ವಿದ್ಯುತ್ ಸಂಪರ್ಕ ಸಿಗುತ್ತಿಲ್ಲ. ಕೆಲವು ಕಡೆ ಮೀಟರ್ ಹಾಕಿದ್ದರೆ, ಆರ್.ಆರ್ ನಂಬರ್ ಸಿಕ್ಕಿಲ್ಲ. ಕೆಲವರು ತಾತ್ಕಾಲಿಕ ವಿದ್ಯುತ್ ಸಂಪರ್ಕದಲ್ಲೇ ಮನೆ ಪ್ರವೇಶ ಮಾಡಿ, ದುಬಾರಿ ಶುಲ್ಕ ನೀಡುತ್ತಿದ್ದಾರೆ.

ಮನೆ ನಿರ್ಮಾಣದ ಒಪ್ಪಂದದ ಪ್ರಕಾರ, ವಿದ್ಯುತ್ ಸರಬರಾಜು ಮಂಜೂರಾದ ನಂತರವೇ. ಮಾಲೀಕರು ಗುತ್ತಿಗೆದಾರರಿಗೆ ಪೂರ್ಣ ಹಣ ನೀಡುತ್ತಾರೆ. ಗುತ್ತಿಗೆದಾರರು ಕೀ ಹಸ್ತಾಂತರ ಮಾಡುತ್ತಾರೆ. ಈಗ ಅರ್ಜಿಗಳು ಬಾಕಿ ಇರುವುದರಿಂದ, ಮನೆ ನಿರ್ಮಾಣದ ಕೆಲಸಗಳು ಪೂರ್ಣಗೊಂಡಿದ್ದರೂ, ಅನೇಕ ಮಾಲೀಕರು ಬಾಕಿ ಹಣವನ್ನು ತಡೆ ಹಿಡಿದಿದ್ದಾರೆ.

ಈಗ ಮನೆ ಮಾಲೀಕರು ಮತ್ತು ಕಟ್ಟಡ ನಿರ್ಮಾಣ ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ವಿದ್ಯುತ್ ಗುತ್ತಿಗೆದಾರರೊಬ್ಬರು ಪರಿಸ್ಥಿತಿ ವಿವರಿಸಿದರು.

ಸುಪ್ರೀಂ ಕೋರ್ಟ್ ಆದೇಶವನ್ನು ಗೌರವಿಸುತ್ತೇವೆ. ಆದರೆ, ಬೆಸ್ಕಾಂ ಆದೇಶ ಮಾಡಿರುವುದಕ್ಕೂ ಮುನ್ನ ಕಾರ್ಯಾದೇಶ ನೀಡಿರುವ ಮನೆಗಳಿಗಾದರೂ ವಿದ್ಯುತ್ ಸಂಪರ್ಕ ನೀಡಲಿ. ಇಲ್ಲವೇ, ಒಸಿ ಕೊಡುವುದಕ್ಕೆ ಸಮರ್ಪಕ ಮಾರ್ಗಸೂಚಿಗಳನ್ನು ಸರ್ಕಾರ ಹೊರಡಿಸಲಿ ಎಂಬುದು ಅವರ ಒತ್ತಾಯ. ದೊಡ್ಡ ದೊಡ್ಡ ಕಟ್ಟಡಗಳು, ಅಪಾರ್ಟ್‌ಮೆಂಟ್‌ಗಳನ್ನು ಬಿಟ್ಟು, ಆರು ಚದರ ಅಡಿಯಷ್ಟು ನಿವೇಶನದಲ್ಲಿ ನಿರ್ಮಿಸಿಕೊಂಡಿರುವ ಸಣ್ಣ ಸಣ್ಣ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲು ಸರ್ಕಾರ ತಕ್ಷಣ ವ್ಯವಸ್ಥೆ ಮಾಡಬೇಕು' ಎಂದು ಅವರು ಆಗ್ರಹಿಸಿದರು.

**ಕಂದಾಯ ನಿವೇಶನ ಮತ್ತು ನಗರದ ಬಿ ಖಾತಾ ನಿವೇಶನದಲ್ಲಿ ಕಟ್ಟಡ ನಿರ್ಮಾಣಕ್ಕೆ, ಆರಂಭದ ಅನುಮತಿ ಪತ್ರ(ಸಿಸಿ), ನಕ್ಷೆ ಮಂಜೂರಾತಿ ಪತ್ರ ಮತ್ತು ಸ್ವಾಧೀನಾನುಭವ ಪತ್ರ(ಒಸಿ) ಸಿಗುವುದಿಲ್ಲ, ಹೀಗಾಗಿ, ಕಂದಾಯ**



**ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡಲು ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನೂ ಕೊಡುತ್ತಿಲ್ಲ. ಇದರಿಂದ ರಾಜ್ಯದಲ್ಲಿ ನಿರ್ಮಾಣ ಕಾಮಗಾರಿ ಸ್ಥಗಿತಗೊಂಡಿದೆ' ಎಂದು ಕರ್ನಾಟಕ ವಿದ್ಯುತ್ ಗುತ್ತಿಗೆದಾರರ ಸಂಘದ (ಕೆಎಸ್‌ಎಲ್‌ಇಸಿಎ) ಅಧ್ಯಕ್ಷ ಸಿ. ರಮೇಶ್ ಬೇಸರ ವ್ಯಕ್ತಪಡಿಸಿದರು.**

# ಬಡ್ತಿ ನಿಲ್ಲಿಸಿ, ಒಳಮೀಸಲಾತಿ ಜಾರಿ ಮಾಡಲು ಆಗ್ರಹ

## ಅರೆಬೆತ್ತಲೆ ಮೆರವಣಿಗೆ ಮಾಡಿ, ರಸ್ತೆ ತಡೆದು ಪ್ರತಿಭಟನೆ ನಡೆಸಿದ ಹೋರಾಟ ಸಮಿತಿ

• **ಉದಯವಾಹಿನಿ, ಬೆಂಗಳೂರು**

ಒಳಮೀಸಲಾತಿ ಜಾರಿಯಾಗುವವರೆಗೆ ಬಡ್ತಿಯಲ್ಲಿ ಮೀಸಲಾತಿ ನೀಡುವುದನ್ನು ನಿಲ್ಲಿಸಲು ಆದೇಶಿಸಬೇಕು. ಇಲ್ಲದೇ ಇದ್ದರೆ ನಾವು ಜೀವಕ್ಕೆ ಅಪಾಯ ತಂದುಕೊಳ್ಳುವ ಹೋರಾಟಕ್ಕೆ ಇಳಿಯುತ್ತೇವೆ. ಅದಕ್ಕೆ ಸರ್ಕಾರವೇ ಹೊಣೆಯಾಗಲಿದೆ ಎಂದು ಮಾದಿಗ ಒಳಮೀಸಲಾತಿ ಹೋರಾಟ ಸಮಿತಿ ಎಚ್ಚರಿಕೆ ನೀಡಿದೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಮಾದಿಗರ ಕ್ರಾಂತಿಕಾರಿ ಸಂಘರ್ಷ ಹೋರಾಟದಲ್ಲಿ ಪಾಲ್ಗೊಂಡಿದ್ದ ಸಮುದಾಯದ ಮುಖಂಡರು ಈ ಘೋಷಣೆ ಮಾಡಿದರು.

ಹೋರಾಟದ ನೇತೃತ್ವ ವಹಿಸಿರುವ ಬಿ.ಆರ್. ಭಾಸ್ಕರ ಪ್ರಸಾದ್, ಒಳಮೀಸಲಾತಿಗಾಗಿ 98 ದಿನಗಳಿಂದ ಅರೆಬೆತ್ತಲೆ ರಥಯಾತ್ರೆ ಮಾಡಲಾಗುತ್ತಿದೆ. ನಮ್ಮ ಸಮುದಾಯದೊಳಗೇ ಇರುವ ಮನುವಾದಿಗಳು, ಒಳಮೀಸಲಾತಿ ಹೋರಾಟಗಾರರು ಎಂದು ಹೇಳಿಕೊಳ್ಳುತ್ತಿದ್ದವರು, ಸಮುದಾಯದ ರಾಜಕಾರಣಿಗಳೆಲ್ಲ ಸೇರಿ ಈ ಪಾದಯಾತ್ರೆಯನ್ನು ಹತ್ತಿಕ್ಕಲು ಪ್ರಯತ್ನಿಸಿದರು. ಪ್ರಕರಣ ದಾಖಲಿಸಿದರು. ಬಂಧಿಸಿದರು. ಹೋರಾಟ ಮಾಡಿ, ಆದರೆ, ಕಾಂಗ್ರೆಸ್‌ಗೆ ತೊಂದರೆಯಾಗದಂತೆ


ಉದಯವಾಹಿನಿ ಚಿತ್ರ

**98 ದಿನಗಳಿಂದ ಅರೆಬೆತ್ತಲೆ ರಥಯಾತ್ರೆ**

ಮಾಡಿ ಎಂದು ಕೆಲವರು ಸಲಹೆ ನೀಡಿದ್ದರು ಎಂದು ಆರೋಪಿಸಿದರು. ಮಾದಿಗರಿಗೆ ಸಿಗಬೇಕಾದ ಸೌಲಭ್ಯಗಳನ್ನು ಹೊಲೆಯರು ಬಳಸಿಕೊಳ್ಳುತ್ತಿದ್ದಾರೆ ಎಂದು ಸದಾಶಿವ ಆಯೋಗವೇ ಹೇಳಿದೆ. ಆದರೆ, ಮಾದಿಗ, ಹೊಲೆಯ ಎಂದೆಲ್ಲ ಹೇಳಬೇಡಿ. ಹಾಗೆ ಹೇಳಿದರೆ ಒಡಕು ಉಂಟಾಗುತ್ತದೆ. ಎಲ್ಲರೂ ದಲಿತರು ಎಂದು ಹೇಳಬೇಕು ಎಂದು ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದ್ದರು. ಮಹದೇವಪ್ಪ ಮಾದಿಗರ ವಿರೋಧಿ ಎಂದು ಹರಿಹಾಯ್ದರು.

ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ ಮಾತನಾಡಿ, ಪಂಜಾಬ್‌ನಲ್ಲಿ 1975ರಿಂದಲೇ ಒಳಮೀಸಲಾತಿ ಇತ್ತು. ನಮ್ಮನ್ನು ಹೋಮೋ ಜೀನಿಯಸ್ ಎಂದು ಕರೆದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ 2005ರಲ್ಲಿ ನೀಡಿದ ತೀರ್ಪು ನಮಗೆ ಮಾರಕವಾಯಿತು. ಇದನ್ನು ಪಂಜಾಬ್ ಬಿಟ್ಟು ಬೇರೆ ಯಾವ ರಾಜ್ಯ ಸರ್ಕಾರಗಳೂ ಪ್ರಶ್ನಿಸಿಲ್ಲ ಎಂದರು.

ಒಳಮೀಸಲಾತಿಯನ್ನು ಜಾರಿ ಮಾಡುವವರೆಗೆ ಬಡ್ತಿ ಮೀಸಲಾತಿ ನೀಡುವುದಿಲ್ಲ ಎಂದು ಆದೇಶ ಬಾರದೇ ಹೋದರೆ ನಮ್ಮನ್ನು ನಾವೇ ಕೊಂದುಕೊಳ್ಳುತ್ತೇವೆ' ಎಂದು ಹೋರಾಟದ ನಾಯಕರು ಎಚ್ಚರಿಸಿದರು. ಸಂಜೆವರೆಗೆ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಾರದೇ ಇದ್ದಿದ್ದರಿಂದ ಸ್ವಾತಂತ್ರ್ಯ ಉದ್ಯಾನದಿಂದ ರಸ್ತೆಗೆ ಇಳಿದರು. ಪೊಲೀಸರು ಬ್ಯಾರಿಕೇಡ್ ಹಾಕಿ ಪ್ರತಿಭಟನಕಾರರು ಮುಂದಕ್ಕೆ ಹೋಗದಂತೆ ತಡೆದರು. ಐವರು ಮುಖಂಡರು ಮುಖ್ಯಮಂತ್ರಿಯ ನಿವಾಸಕ್ಕೆ ತೆರಳಿ ಮಾತುಕತೆ ನಡೆಸಿದ ಬಳಿಕ ಪ್ರತಿಭಟನೆ ಕೊನೆಗೊಂಡಿತು. ಮುಖಂಡರಾದ ಎಸ್. ಅರುಣ್ ಕುಮಾರ್, ಬಾಳೆಕಾಯಿ ಶ್ರೀನಿವಾಸ್, ಪ್ರಭುರಾಜ್ ಕೊಡ್ಲಿ, ಬಾಲಸ್ವಾಮಿ ಕೊಡ್ಲಿ, ರಾ.ಚಿಂತನ್, ಚೇತನ್ ಅಹಿಂಸಾ ಭಾಗವಹಿಸಿದ್ದರು.

### ವರದಿ ಬಳಿಕ ಒಳಮೀಸಲಾತಿ ಜಾರಿ: ಸಿ.ಎಂ


**ಒಳಮೀಸಲಾತಿ ಜಾರಿ ಮಾಡುವುದಕ್ಕಾಗಿಯೇ ಪರಿಶಿಷ್ಟ ಜಾತಿಯ ಸಮೀಕ್ಷೆ ನಡೆಸಲಾಗುತ್ತಿದೆ. ಅದರ ವರದಿ ಬಂದ ಬಳಿಕ ಒಳಮೀಸಲಾತಿ ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು. ತಮ್ಮನ್ನು ಭೇಟಿ ಮಾಡಿದ ಹೋರಾಟಗಾರರ ನಿಯೋಗದೊಂದಿಗೆ ಮಾತನಾಡಿದ ಅವರು 'ನೀವು ಬೇಡ ಎಂದು ಹೇಳಿದರೂ ಒಳಮೀಸಲಾತಿ ಜಾರಿ ಮಾಡೇ ಮಾಡುತ್ತೇವೆ. ಇದು ನಮ್ಮ ಪಕ್ಷದ ನಮ್ಮ ಸರ್ಕಾರದ ಬದ್ಧತೆ, ನಿಖರ ದತ್ತಾಂಶಕ್ಕಾಗಿ ಕಾಯುತ್ತಿದ್ದೇವೆ' ಎಂದು ತಿಳಿಸಿದರು.**

ತುಮಕೂರಿಗೆ ಬಂಪರ್: ಅರ್ಬನ್ ರೈಲು, ಮೆಟ್ರೋ ಎರಡೂ ಬರಲಿ, ಪರಮೇಶ್ವರ್‌ಗೆ ವಿ ಸೋಮಣ್ಣ ಭರವಸೆ

# ತುಮಕೂರು ಗ್ರೇಟರ್ ಬೆಂಗಳೂರು ವ್ಯಾಪ್ತಿಗೆ ಸೇರುವ ಸಾಧ್ಯತೆ

• ಉದಯವಾಹಿನಿ, ತುಮಕೂರು

ತುಮಕೂರಿಗೆ ಮೆಟ್ರೋ ಯೋಜನೆ ಬಗ್ಗೆ ರಾಜ್ಯ ಸರಕಾರದ ತೀರ್ಮಾನ ಏನಾಗುತ್ತದೆ ಎಂಬುದನ್ನು ನೋಡಿ ಕೇಂದ್ರ ರೈಲ್ವೆ ಖಾತೆ ಸಹಾಯಕ ಸಚಿವ ವಿ.ಸೋಮಣ್ಣ ಅವರೊಂದಿಗೆ ಮಾತನಾಡುತ್ತೇನೆ. ತುಮಕೂರಿಗೆ ಮೆಟ್ರೋ ಅಗತ್ಯ ಇದೆ ಎಂದು ಸೋಮಣ್ಣ ಅವರು ಹೇಳಿದ್ದಾರೆ. ಮೆಟ್ರೋ ಜತೆಗೆ ಸಬ್ ಅರ್ಬನ್ ಯೋಜನೆಯೂ ಆಗಲಿ. ತುಮಕೂರಿಗೆ ಈ ಎರಡೂ ಯೋಜನೆಗಳಾದರೆ ತಪ್ಪಿಲ್ಲ ಎಂದು ಜಿಲ್ಲಾಉಸ್ತುವಾರಿ ಸಚಿವರೂ ಆಗಿರುವ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ.


ಉದಯವಾಹಿನಿ ಚಿತ್ರ

ಬೆಂಗಳೂರಿನ ಸದಾಶಿವನಗರದ ತಮ್ಮ ಗೃಹ ಕಚೇರಿಯಲ್ಲಿ ಡಾ. ಪರಮೇಶ್ವರ್ ಅವರು ವಿ. ಸೋಮಣ್ಣ ಅವರೊಂದಿಗೆ ಜಿಲ್ಲೆಯ ಅಭಿವೃದ್ಧಿ ಕುರಿತಂತೆ ಮಾತುಕತೆ ನಡೆಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಪರಮೇಶ್ವರ್, ತುಮಕೂರಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ವಾಗತ ಕಮಾನು ನಿರ್ಮಿಸುವ ಕುರಿತಂತೆ ವಿ.ಸೋಮಣ್ಣ ಅವರಿಗೆ ಮನವಿ ಮಾಡಿದ್ದೇನೆ. ತುಮಕೂರಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ವಾಗತ ಕಮಾನು ನಿರ್ಮಿಸಲು ಸ್ಮಾರ್ಟ್ ಸಿಟಿಯಿಂದ 5 ಕೋಟಿರೂ. ಒದಗಿಸಿಕೊಂಡಿದ್ದೇವೆ.

**ಬಿಜೆಪಿ ವಿರೋಧ:** ಮೆಟ್ರೋ ಯೋಜನೆಗೆ ವೆಚ್ಚ ಹೆಚ್ಚು ಅಲ್ಲದೆ,ಸಬ್ ಅರ್ಬನ್ ರೈಲು ಪರಿಸರಕ್ಕೂ, ಆರ್ಥಿಕವಾಗಿಯೂ ಲಾಭದಾಯಕ ಎಂದು ಬಿಜೆಪಿ ಸಂಸದರಾದ ಪಿ ಸಿ ಮೋಹನ್ ಸೇರಿದಂತೆ ತೇಜಸ್ವಿ ಸೂರ್ಯ ಮೆಟ್ರೋ ಯೋಜನೆಯನ್ನು ವಿರೋಧ ಮಾಡಿದ್ದರು. ಇದೀಗ ಬಿಜೆಪಿಯ ಕೇಂದ್ರ ಸಚಿವ ವಿ. ಸೋಮಣ್ಣ ಅವರೇ, ಅವರು ಸಂಸದರಾಗಿರುವ ಜಿಲ್ಲೆಗೆ ಎರಡೂ ಸೌಲಭ್ಯ ಇರಲಿ ಎಂದು ಹೇಳಿರುವುದು ಪರಮೇಶ್ವರ್ ಒತ್ತಾಯಕ್ಕೆ ಬಲ ಸಿಕ್ಕಿದಂತಾಗಿದೆ. ಮೆಟ್ರೋ ಯೋಜನೆ, ರೈಲು ಯೋಜನೆಗಳ ಬಗ್ಗೆ ಕೇಂದ್ರ, ಸರ್ಕಾರದಲ್ಲಿಯೂ ಮಾತುಕತೆ ನಡೆಸುವ ಭರವಸೆಯನ್ನು ವಿ ಸೋಮಣ್ಣ ನೀಡಿದ್ದಾರೆ.

ಅಲ್ಲದೆ ಈಗಾಗಲೇ 2025–26 ನೇ ಸಾಲಿನಲ್ಲಿ ತುಮಕೂರಿಗೆ ಹಲವು ರೈಲು ಯೋಜನೆಗಳನ್ನು ಸೋಮಣ್ಣ ಇಲಾಖೆಯಿಂದ ಅನುದಾನ ಒದಗಿಸಿದ್ದಾರೆ. ಬೆಂಗಳೂ ರಿಂದ ಕೆಲವೇ ಕಿ.ಮೀ ದೂರದಲ್ಲಿರುವ ತುಮಕೂರು ಸಹ, ಪರ್ಯಾಯ ನಗರವಾಗಿ ಬೆಳೆಯಲು ಇಲ್ಲಿನ ಸಂಪರ್ಕ ಸುಧಾರಿಕೆ ಸಹಕಾರವಾಗಲಿದೆ.

**ಹೇಮೆ ಕೆನಾಲ್ ವಿಚಾರಕ್ಕೆ ಪ್ರತಿಭಟನೆ ಬೇಡ**

**ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಭಟನೆ ಬೇಡ ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಅವರಿಗೆ ತಿಳಿಸಿದ್ದೇನೆ. ಸಭೆ ಕರೆಯಬೇಕು, ಈ ಬಗ್ಗೆ ನೀರಾವರಿ ಸಚಿವರೊಂದಿಗೆ ಮಾತನಾಡುತ್ತೇನೆ. ಆನಂತರ ಸಭೆ ಕರೆಯುವುದರ ಕುರಿತು ತೀರ್ಮಾನ ತೆಗೆದುಕೊಳ್ಳುತ್ತೇನೆ**

**–ಡಾ. ಪರಮೇಶ್ವರ್**

## ತಾಲ್ಲೂಕು ರೈತ ಸಂಘದಿಂದ ಶ್ರದ್ಧಾಂಜಲಿ ಸಭೆ ಎಂದಿಗೂ ಯಾರ ಬಳಿಯೂ ಕೈ ಚಾಚದ ರೈತರು



ಉದಯವಾಹಿನಿ ಚಿತ್ರ

• ಉದಯವಾಹಿನಿ, ಸೋಮವಾರಪೇಟೆ

ಹೋರಾಟಗಾರರು, ಚಳವಳಿಗಾರರು ಯಾರಿಂದಲೂ ಯಾವುದನ್ನೂ ಬಯಸುವುದಿಲ್ಲ. ರೈತರು ಎಂದಿಗೂ ಯಾರ ಬಳಿಯೂ ಕೈ ಚಾಚುವುದಿಲ್ಲ. ಸ್ವಾಭಿಮಾನಿಗಳಾಗಿರುವ ರೈತರು ಕೇವಲ ಮದುವೆ ಮತ್ತಿತರ ಶುಭಸಮಾರಂಭಗಳು, ಹಬ್ಬ ಹರಿದಿನಗಳು, ವಾರದ ಸಂತೆ ಇಂತಹ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತವಾಗಬಾರದು' ಎಂದು ಕರ್ನಾಟಕ ರಾಜ್ಯ ರೈತ ಸಂಘದ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಹೇಳಿದರು. ರೈತ ಸಂಘದ ಸೋಮವಾರಪೇಟೆ ತಾಲ್ಲೂಕು ಘಟಕದ ಆಶ್ರಯದಲ್ಲಿ ಇಲ್ಲಿನ ಒಕ್ಕಲಿಗರ ಸಮುದಾಯಭವನದ ಶ್ರೀಗಂಧ ಸಭಾಂಗಣದಲ್ಲಿ ಇತ್ತೀಚೆಗೆ ಅಗಲಿದ ರೈತ ಮುಖಂಡರಿಗೆ ಆಯೋಜಿಸಲಾಗಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು. ವರ್ಷಪೂರ್ತಿ ಕೆಲಸಮಾಡುವ ರೈತರ ಶ್ರಮಕ್ಕೆ ಬೆಲೆ ಕಟ್ಟಲಾಗದು. ಸರ್ಕಾರಗಳು ರೈತರ ಸಮಸ್ಯೆಗಳನ್ನು ಪರಿಹರಿಸಬೇಕಾದರೆ ಸಂಘಟಿತ ಹೋರಾಟ ಅಗತ್ಯ..ಪಕ್ಷ ರಾಜಕೀಯವನ್ನು ಕೈಬಿಟ್ಟು ರೈತರ ಏಳಿಗೆಗಾಗಿ ಹೋರಾಟ ರೂಪಿಸಬೇಕು. ಆಗ ಮಾತ್ರ ಪ್ರತಿಫಲ ಪಡೆಯಲು ಸಾಧ್ಯ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ತಾಲ್ಲೂಕು ಘಟಕದ ಅಧ್ಯಕ್ಷ ಕೆ.ಎಂ.ದಿನೇಶ್ ಮಾತನಾಡಿ, 'ಇಂದಿಗೂ ಸಿ ಮತ್ತು ಡಿ ಲ್ಯಾಂಡ್, ಪೌತಿ ಖಾತೆ ಸೇರಿದಂತೆ ರೈತರ ಸಮಸ್ಯೆಗಳನ್ನು ಸರ್ಕಾರದ ಮಟ್ಟದಲ್ಲಿ ಪರಿಹರಿಸಲು ಸಾಧ್ಯವಾಗಿಲ್ಲ. ಕೊಡಗು ಜಿಲ್ಲೆಯು ರಾಜ್ಯ ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಪಾವತಿಸುತ್ತಿದ್ದರೂ ಜಿಲ್ಲೆಯ ಬೆಳೆಗಾರರು ಹಾಗೂ ರೈತರ ಬಗ್ಗೆ ಯಾವುದೇ ಸರ್ಕಾಗಳಿಗೂ ಕಾಳಜಿ ಇರುವಂತೆ ತೋರುತ್ತಿಲ್ಲ. ನಮ್ಮನ್ನಾಳುವ ಜನಪ್ರತಿನಿಧಿಗಳೊಂದಿಗೆ ಚರ್ಚಿಸಿ ನಮ್ಮ ನ್ಯಾಯಯುತ ಬೇಡಿಕೆಗಳು ಈಡೇರ ಬೇಕಾದರೆ ರೈತ ಸಂಘಟನೆ ಇನ್ನಷ್ಟು ಬಲಯುತವಾಗಬೇಕು ಎಂದರು. ಇದೇ ಸಂದರ್ಭ ಅಗಲಿದ ರೈತ ಮುಖಂಡರಾದ ಪೊನ್ನಚಂಡ ವಿಷ್ಣು, ಪುರುಷೋತ್ತಮ, ಚಿಣ್ಣಪ್ಪ, ನೀರುಗುಂದ ಸೋಮಪ್ಪ, ಹೊಸಗುತ್ತಿ ಶಂಕರಪ್ಪ, ಐ.ಪಿ.ಭವೇರಪ್ಪ ಅವರ ಸೇವೆಯನ್ನು ಸ್ಮರಿಸಲಾಯಿತು.

# ರಾಜಕೀಯ ನಾಯಕರ ನಡುವೆ ಪೈಪೋಟಿ ಶುರು

## ತುಮಕೂರಲ್ಲಿ ಹೇಮಾವತಿ ವಾಟರ್ ವಾರ್: ರಾಮನಗರ ಜಿಲ್ಲೆಯಲ್ಲಿ ಕ್ರೆಡಿಟ್ ವಾರ್

• ಉದಯವಾಹಿನಿ, ರಾಮನಗರ

ತುಮಕೂರಿನಲ್ಲಿ ಶುರುವಾಗಿರುವ ಹೇಮಾವತಿ ಕೆನಾಲ್ ಕದನದಿಂದಾಗಿ ರೇಷ್ಮೆ ಜಿಲ್ಲೆಯಲ್ಲಿ ಹೇಮಾವತಿ ಕ್ರೆಡಿಟ್ ವಾರ್ ಶುರುವಾಗಿದೆ. ಹೇಮಾವತಿ ನೀರು ಮಾಗಡಿ ತಾಲ್ಲೂಕಿಗೆ ಬರಲು 3 ಜನ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಕುಮಾರಸ್ವಾಮಿ, ಬಿ.ಎಸ್ ಯಡಿಯೂರಪ್ಪ ಸಹ ರೈತರ ಪರ ನಿಲುವು ತಾಳಿ ಯೋಜನೆಗೆ ಹಸಿರು ನಿಶಾನೆ ತೋರಿದ್ದರು. ಇತ್ತೀಚೆಗಷ್ಟೇ ಮಾಗಡಿ ಶಾಸಕ ಎಚ್.ಸಿ ಬಾಲಕೃಷ್ಣ ಅವರು, ಬಿಜೆಪಿಯ ತುಮಕೂರಿನ ಶಾಸಕ ಜ್ಯೋತಿಗಣೇಶ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ರಾಘವೇಂದ್ರ, ಸಿ.ಟಿ. ರವಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಂಸದ ಡಾ.ಸಿ. ಎನ್ ಮಂಜುನಾಥ್ ಅವರುಗಳ ವಿರುದ್ಧ ಗುಡುಗಿ, ನೀವು ಮಾಗಡಿ ತಾಲ್ಲೂಕಿಗೆ ನೀರಾವರಿ ವಿಷಯವಾಗಿ ಅನ್ಯಾಯ ಮಾಡುತ್ತಿದ್ದೀರಾ? ಹೇಮಾವತಿ ತರಲು ನಾವು ಹಾಗೂ ಡಿ.ಕೆ ಸುರೇಶ್, ಡಿ.ಕೆ ಶಿವಕುಮಾರ್ ಸಾಕಷ್ಟು ಶ್ರಮವಹಿಸಿದ್ದೇವೆ.

ಕುಮಾರಸ್ವಾಮಿ ಅವರು ಕೇವಲ ಐಪಿಎಲ್ ವಿಚಾರ ಇಟ್ಟುಕೊಂಡು ಮಾತನಾಡುತ್ತಿದ್ದಾರೆ ಹೊರತು ಹೇಮಾವತಿ ನೀರಿನ ಬಗ್ಗೆ ಸಾಧನೆ ಏನು ಕಾಂಗ್ರೆಸ್ ಸರಕಾರ ಹೇಮಾವತಿ ನೀರು ತರಲು ಶ್ರಮಿಸುತ್ತಿದೆ, ಎಂದು ಹೇಳಿದ್ದಾರೆ. ಇತ್ತ ಎ.ಮಂಜುನಾಥ್ ಕೂಡ ನಾನು ಮೊದಲು ಕಾಂಗ್ರೆಸ್‌ನಲ್ಲಿ ಇದ್ದಾಗ ಸಂಸದರಾಗಿದ್ದ ಡಿ.ಕೆ ಸುರೇಶ್ ಉಪಚುನಾವಣೆ ನಿಲ್ಲುವ ವೇಳೆ ಹೇಮಾವತಿ ತರುವ ವಿಚಾರವನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಿದ್ದೆವು. ಬಳಿಕ ಹೇಮಾವತಿಯನ್ನು ಮಾಗಡಿಗೆ ತರಲು ಡಿ.ಕೆ ಸುರೇಶ್ ಅವರು ಪಾತ್ರವೂ ಇದೆ, ಜಲ ಸಂಪನ್ಮೂಲ ಸಚಿವರಾಗಿರುವ ಡಿ.ಕೆ ಶಿವಕುಮಾರ್ ಕೂಡ ಹೇಮಾವತಿ ವಿಚಾರವನ್ನು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಎಕ್ಸ್ ಪ್ರೆಸ್ ಕೆನಾಲ್‌ಆರಂಭಿಸಲು ಹಣ ಬಿಡುಗಡೆ ಮಾಡಿಸಿದ್ದರು. ಹೀಗಾಗಿ ಡಿ.ಕೆ ಶಿವಕುಮಾರ್ ಅವರಿಗೂ ಕೂಡ


ಉದಯವಾಹಿನಿ ಚಿತ್ರ

**ಇತ್ತ ಮಾಗಡಿಯ ಮಾಜಿ ಶಾಸಕ ಎ.ಮಂಜುನಾಥ್, ಮೊನ್ನೆತಾನೆ ಸುದ್ದಿಗೋಷ್ಠಿ ನಡೆಸಿ ಹೇಮಾವತಿ ನಡೆದು ಬಂದ ವೃತ್ತಾಂತವನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಈಗ ಎಚ್.ಡಿ ಕುಮಾರಸ್ವಾಮಿ ಕೇಂದ್ರ ಸಚಿವರಾಗಿದ್ದಾರೆ. ಸಿಎಂ ಆಗಿದ್ದಾಗ ಹೇಮಾವತಿ ನೀರನ್ನು ಎಲ್ಲಾ ತಾಲ್ಲೂಕುಗಳಿಗೂ ಸಮವಾಗಿ ಹಂಚಲು ಕಾರಣೀಭೂತರಾಗಿದ್ದರು. ಜತೆಗೆ ಮಾಗಡಿ ತಾಲ್ಲೂಕಿನ ವೈ.ಜಿ ಗುಡ್ಡಕ್ಕೂ ಕುಮಾರಸ್ವಾಮಿ ಕಾವೇರಿ ನೀರು ತರಲು ಶ್ರಮಿಸಿದ್ದರು. ಹೀಗಿರುವಾಗ ಕುಮಾರಸ್ವಾಮಿ ಅವರು ಹೇಮಾವತಿ ನೀರಿಗಾಗಿ ಸಾಕಷ್ಟು ಶ್ರಮಿಸಿದ್ದಾರೆ ಎನ್ನುತ್ತಾರೆ.**

ಹೇಮಾ ವತಿಯ ಕ್ರೆಡಿಟ್‌ನಲ್ಲಿ ಪಾಲು ಸಿಗಲಿದೆ ಎನ್ನುತ್ತಾರೆ. ಇನ್ನು ಮಾಗಡಿಯ ಮಾಜಿ ಸಚಿವ ಎಚ್.ಎಂ ರೇವಣ್ಣ ಕೂಡ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ ಅವರ ಜತೆಗೂಡಿ ಮಾಗಡಿಗೆ ಹೇಮಾವತಿ ನೀರು ಮಂಜೂರು ಮಾಡಿಸಲು ಕಾರಣರಾಗಿದ್ದರು. ಜತೆಗೆ ಮಾಗಡಿ ತಾಲ್ಲೂಕಿನಲ್ಲಿಯೂ ಹೇಮಾವತಿ ಹೋರಾಟಕ್ಕೆ ಟಿ.ಎ ರಂಗಯ್ಯ ಮುಂತಾದವರು ಶ್ರಮಿಸಿದ್ದಾರೆ ಎಂದು ಎ. ಮಂಜುನಾಥ್ ಅವರ ಕಾರ್ಯವನ್ನು ಸ್ಮರಿಸಿದ್ದಾರೆ. ಇತ್ತ ಮಾಜಿ ಶಾಸಕ ಎ.ಮಂಜುನಾಥ್ ಕೂಡ ಕ್ಯಾಬಿನೆಟ್‌ನಲ್ಲಿ ಹೇಮಾವತಿ ಚರ್ಚೆಗೆ ಬರಲು, ನೀರಿನ ಸಮ ಪ್ರಮಾಣ ಎಲ್ಲರಿಗೂ ಆಗುವಂತೆ ಸಾಕಷ್ಟು ಕಾನೂನಾತ್ಮಕವಾದ ಹೋರಾಟಗಳನ್ನು ಕಾಲಕಾಲಕ್ಕೆ ಮಾಡಿದ್ದೇನೆ.

ಬಿಜೆಪಿ ಸರಕಾರದಲ್ಲಿ ಡಿಸಿಎಂಗಳಾಗಿದ್ದ ಡಾ.ಸಿ.ಎನ್ ಅಶ್ವಥ್ ನಾರಾಯಣ ಕೂಡ ಬಿ.ಎಸ್ ಯಡಿಯೂರಪ್ಪ ಕಾಲದಲ್ಲಿ ಹೇಮಾವತಿಗೆ 648 ಕೋಟಿ ಹಣ ಬಿಡುಗಡೆ ಮಾಡಿಸಿ ತಾಲ್ಲೂಕು ಹೇಮಾವತಿ ಬರಲು ಶ್ರಮಿಸಿದ್ದರು ಎಂಬ ಮಾತುಗಳನ್ನು ಆಡಿದ್ದಾರೆ. ಒಟ್ಟಾರೆ ತುಮಕೂರಿನಲ್ಲಿ ಹೇಮಾವತಿ ಕದನ ಒಂದು ದಿಕ್ಕಿನಲ್ಲಿ ಸಾಗುತ್ತಿದ್ದರೆ ಮಾಗಡಿಯಲ್ಲಿಯೂ ಹೇಮಾವತಿಯ ಕ್ರೆಡಿಟ್ ವಾರ್ ಮತ್ತೊಂದು ದಿಕ್ಕಿನಲ್ಲಿ ಸಾಗುತ್ತಿರುವುದು ಕಂಡು ಬರುತ್ತಿದೆ.

- **ಹೇಮಾವತಿ ನೀರಿನ ತರಲು ಮಾಗಡಿ ತಾಲ್ಲೂಕಿಗೆ 3 ಪ್ರಮುಖ ಮುಖ್ಯಮಂತ್ರಿ ಸಿದ್ದರಾಮಯ್ಯ, ಕುಮಾರಸ್ವಾಮಿ ಮತ್ತು ಬಿ.ಎಸ್. ಯಡಿಯೂರಪ್ಪ ಅವರ ಶ್ರಮವಿದೆ.**
- **ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರು ಬಿಜೆಪಿಯ ಶಾಸಕರ ವಿರುದ್ಧ ಹೇಮಾವತಿ ನೀರಿನ ವಿಷಯದಲ್ಲಿ ಅನ್ಯಾಯ ಮಾಡುತ್ತಿದ್ದೀರಾ ಎಂಬ ಆರೋಪ ಮಾಡಿದ್ದಾರೆ.**
- **ಮಾಜಿ ಶಾಸಕ ಎ.ಮಂಜುನಾಥ್ ಅವರು ಹೇಮಾವತಿ ನೀರಿನ ಹೋರಾಟದಲ್ಲಿ ಡಿ.ಕೆ. ಸುರೇಶ್, ಡಿ.ಕೆ. ಶಿವಕುಮಾರ್ ಅವರ ಪಾತ್ರವನ್ನು ಸ್ಮರಿಸಿದ್ದಾರೆ.**

## ಕೋವಿಡ್ ವೇಳೆ 36 ಮಂದಿ ಸಾವು: ಪರಿಹಾರಕ್ಕೆ ಆಗ್ರಹಿಸಿ ಚಾಮರಾಜನಗರ ಬಂದ್‌ಗೆ ನಿರ್ಣಯ

• ಉದಯವಾಹಿನಿ, ಚಾಮರಾಜನಗರ

ನಾಲ್ಕು ವರ್ಷಗಳ ಹಿಂದೆ ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಮೃತಪಟ್ಟ 36 ಮಂದಿಯ ಕುಟುಂಬಗಳಿಗೆ ತಲಾ 25 ಲಕ್ಷ ಪರಿಹಾರ, ಸರ್ಕಾರಿ ಉದ್ಯೋಗ ನೀಡದಿದ್ದರೆ ಚಾಮರಾಜನಗರ ಜಿಲ್ಲೆ ಬಂದ್ ಮಾಡುವುದಾಗಿ ಪ್ರಗತಿಪರ ಸಂಘಟನೆಗಳ ಒಕ್ಕೂಟ ಮಂಗಳವಾರ ಎಚ್ಚರಿಕೆ ನೀಡಿದೆ.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಪ್ರಗತಿಪರ, ದಲಿತ, ರೈತ, ಕನ್ನಡಪರ ಸಂಘಟನೆಗಳ ಮುಖಂಡರ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಯಿತು. ಬಂದ್ ಪೂರ್ವಭಾವಿಯಾಗಿ ಜೂನ್ 13ರಂದು ಸಾಂಕೇತಿಕವಾಗಿ ಪ್ರತಿಭಟಿಸಿ ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮನವಿ ಸಲ್ಲಿಸಲಾಗುವುದು. ಕಾಲಮಿತಿಯಲ್ಲಿ ಈಡೇರಿಸದಿದ್ದರೆ ಜಿಲ್ಲೆ ಬಂದ್ ಮಾಡುವುದು ಅನಿವಾರ್ಯವಾಗಲಿದೆ ಎಂದು ಒಕ್ಕೂಟದ ಮುಖಂಡ ಸಿ.ಎಂ. ಕೃಷ್ಣಮೂರ್ತಿ ತಿಳಿಸಿದರು.

ಬೆಂಗಳೂರಿನಲ್ಲಿ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಮೃತಪಟ್ಟವರ ಕುಟುಂಬಗಳಿಗೆ ಹೆಚ್ಚು, ಆಮ್ಲಜನಕ ದುರಂತದಲ್ಲಿ ಮೃತರಾದವರ ಕುಟುಂಬದವರಿಗೆ ಕಡಿಮೆ ಪ್ರಮಾಣದಲ್ಲಿ ಪರಿಹಾರ ನೀಡುತ್ತಿರುವ ನಿರ್ಧಾರ ಖಂಡನೀಯ. ಸಾವಿನಲ್ಲಿ ರಾಜಕೀಯ ಮಾಡದೆ ಏಕರೂಪ ಪರಿಹಾರ ಕೊಡ ಬೇಕು ಎಂದು ಒತ್ತಾಯಿಸಿದರು.

## ಗರ್ಭಿಣಿ ಅನುಮಾನಾಸ್ಪದ ಸಾವು ಪ್ರಕರಣ: ಪತಿ ಚಂದನ್ ಗೌಡ ಬಂಧನ

• ಉದಯವಾಹಿನಿ, ಮದ್ದೂರು

ಪಟ್ಟಣದ ಚನ್ನೇಗೌಡ ಬಡಾವಣೆಯಲ್ಲಿ ಕಳೆದ ಶನಿವಾರ ಗರ್ಭಿಣಿಯ ಅನುಮಾನಾಸ್ಪದ ಸಾವಿಗೆ ಸಂಬಂಧಪಟ್ಟಂತೆ ಆಕೆಯ ಪತಿ ಚಂದನ್ ಗೌಡ ಎಂಬುವವನನ್ನು ಪೊಲೀಸರು ಬಂಧಿಸಿದ್ದಾರೆ. ಚಾಮರಾಜನಗರ ಜಿಲ್ಲೆಯ ಮೂಲತಃ ಕೊಳ್ಳೆಗಾಲ ತಾಲ್ಲೂಕಿನ ಕಾಮಗೆರೆ ನಿವಾಸಿಗಳಾದ ಚಂದನ್ ಗೌಡ, ಆಶಾ (19) ಇಬ್ಬರೂ ಪ್ರೇಮಿಗಳು ಕಳೆದ ಒಂದೂವರೆ ವರ್ಷದ ಹಿಂದೆ ಕುಟುಂಬದವರ ವಿರೋಧದ ನಡುವೆಯೂ ಪ್ರೀತಿಸಿ ಮದುವೆಯಾಗಿದ್ದರು.

ಬಳಿಕ ಚಂದನ್ ಗೌಡ ಎಳೆ ನೀರು ವ್ಯಾಪಾರ ಮಾಡಿಕೊಂಡು ಮದ್ದೂರು ಪಟ್ಟಣದ ಚನ್ನೆಗೌಡ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ಇಬ್ಬರು



ವಾಸವಾಗಿದ್ದರು. ಆದರೆ, ದಿನ ಕಳೆದಂತೆ ಪತಿ ಪತ್ನಿ ನಡುವೆ ಮನಸ್ತಾಪ ಉಂಟಾಗಿದೆ. ಪತ್ನಿ ಆಶಾ ಯಾರೋದಿಂಗೋ ಮೊಬೈಲ್‌ನಲ್ಲಿ ಬ್ಯುಸಿ ಇರುತ್ತಾಳೆ, ಬೇರೆ ಯಾರದೋ ಜೊತೆ ಅಕ್ರಮ ಸಂಬಂಧವಿದೆ ಎಂದು ಪ್ರತಿ ದಿನ ಜಗಳವಾಗುತ್ತಿತ್ತು ಎನ್ನಲಾಗಿದೆ. ಆದರೆ, ಅದನೆಲ್ಲಾ ಮರೆತು ಕಳೆದ ಭಾನುವಾರ ಪತ್ನಿ ಆಶಾ ಗೆ ಸೀಮಂತ ಕಾರ್ಯಕ್ರಮವನ್ನು ಮಾಡಲು ತಯಾರಿ ಕೂಡ ನಡೆಸಲಾಗಿತ್ತು.

ಆದರೆ, ಶುಕ್ರವಾರ ರಾತ್ರಿ ಮತ್ತೆ ಇಬ್ಬರ ನಡುವೆ ಜಗಳ ಉಂಟಾಗಿ ತೀವ್ರ ಸ್ವರೂಪ ಪಡೆದು ವೇಲ್‌ನಿಂದ ತುಂಬು ಗರ್ಭಿಣಿ ಪತ್ನಿಯ ಕುತ್ತಿಗೆಗೆ ಬಿಗಿದು ಉಸಿರು ಕಟ್ಟಿಸಿ ಕೊಲೆ ಮಾಡಿದ್ದಾನೆ ಎನ್ನಲಾಗಿದೆ.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಮದ್ದೂರು ಪೊಲೀಸರು ಸಿಪಿಐ ಶಿವಕುಮಾರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಪತಿ ಚಂದನ್ ಗೌಡ ನನ್ನು ವಶಕ್ಕೆ ತೆಗೆದುಕೊಂಡು ತೀವ್ರ ವಿಚಾರಣೆ ನಡೆಸಿದಾಗ ಯನ್ನು ತಾನೇ ಹತ್ಯೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

# ರೈತರಿಗೆ 11 ಸಾವಿರ ಸಸಿ ವಿತರಣೆಗೆ ಸಿದ್ಧತೆ

• ಉದಯವಾಹಿನಿ, ಯಳಂದೂರು


ಉದಯವಾಹಿನಿ ಚಿತ್ರ

**ಗಿಡಕ್ಕೆ 125ರವರೆಗೆ ಸಹಾಯಧನ**

ತಾಲ್ಲೂಕಿನಾದ್ಯಂತ ಹಸಿರು ಪರಿಸರ ಪಸರಿಸುವ ಉದ್ದೇಶದಿಂದ ಗುಂಬಳ್ಳಿ ಸಾಮಾಜಿಕ ಅರಣ್ಯ ವಲಯದಲ್ಲಿ ಸಾವಿರಾರು ಸಸಿಗಳನ್ನು ಬೆಳೆಸಲಾ ಗಿದ್ದು, ಸಸಿ ನೆಡುವ ಆಸಕ್ತರು, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಕೃಷಿಕರಿಗೆ ರಿಯಾಯಿತಿದರದಲ್ಲಿ ಗಿಡಗಳನ್ನು ಹಂಚಲು ಇಲಾಖೆ ಸಿದ್ಧತೆ ಮಾಡಿಕೊಂಡಿದೆ. ಪ್ರಸಕ್ತ ವರ್ಷದಲ್ಲಿ ಮುಂಗಾರು ಆಶಾದಾಯಕವಾಗಿದ್ದು ಮೇನಲ್ಲಿ ನಿರೀಕ್ಷೆಗಿಂತ ಹೆಚ್ಚು ಮಳೆಯಾಗಿದ್ದು ಬೆಟ್ಟಗುಡ್ಡಗಳು, ಗ್ರಾಮೀಣ ಪ್ರದೇಶಗಳು ಹಸಿರು ಹೊದ್ದುಕೊಂಡಿದೆ. ಜೂನ್‌ನಲ್ಲಿ ಮತ್ತೆ ವರ್ಷಧಾರೆ ಯಾಗುವ ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ರಸ್ತೆ, ಕಾಲೇಜು ಮೈದಾನ, ಸರ್ಕಾರಿ ಕಚೇರಿ ಸುತ್ತಮುತ್ತ ಗಿಡ ನೆಡಲು ಭೂಮಿ ಹದವಾಗಿದ್ದು ವಾತಾವರಣವೂ ಗಿಡಗಳ ಬೆಳವಣಿಗೆಗೆ ಪೂರಕವಾಗಿದೆ.

ಈ ವರ್ಷದ ಪರಿಸರ ದಿನದಂದು 30ಕ್ಕೂ ಹೆಚ್ಚಿನ ಶಾಲಾ–ಕಾಲೇಜುಗಳಿಗೆ ಸಾವಿರಾರು ಸಸಿಗಳನ್ನು ಉಚಿತವಾಗಿ ನೀಡಲಾಗಿದೆ. ತಾಲ್ಲೂಕನ್ನು ಹಸೀರೀಕರಣ ಮಾಡುವ ಉದ್ದೇಶದಿಂದ ಹತ್ತಾರು ತಳಿಯ ಸಸಿಗಳನ್ನು ಬೆಳೆಸಲಾಗಿದೆ. ಪಕ್ಷಿಗಳಿಗೆ ಹಣ್ಣುನೀಡುವ, ರಸ್ತೆಬದಿ ನೆರಳು ನೀಡುವ, ಬದುಗಳ ಸುತ್ತ ಅಂತರ್ಜಲ ಸೃಜಿಸುವ ವಿವಿಧ ತಳಿಯ ಸಸಿಗಳನ್ನು ಮುತುವರ್ಜಿ ವಹಿಸಿ ಬೆಳೆಸಲಾಗಿದೆ ಎಂದು ವಲಯ ಅರಣ್ಯ ಇಲಾಖೆ ಸಿಬ್ಬಂದಿ ಹೇಳಿದರು. ಸಸಿಗಳನ್ನು ಬೆಳೆಸಲು ಅನುವಾಗುವಂತೆ ಸಾರ್ವಜನಿಕರು, ಸಾಗುವಳಿದಾರರಿಗೆ ಜಾಗೃತಿ ಮೂಡಿಸಲಾಗಿದೆ. ಮಿಯಾವಾಕಿ ಅರಣ್ಯ ಮಾದರಿಯಲ್ಲಿ ಸಸಿಗಳನ್ನು ನೆಟ್ಟು ಅರಣ್ಯ ಕೃಷಿ ಆಸಕ್ತರಿಗೆ ಸಸಿ ವಿತರಿಸುವ ಗುರಿಯನ್ನು ಇಲಾಖೆಗೆ ಇದೆ. ಹಲವು ವರ್ಷಗಳಿಂದ ಕಾಡು ಕೃಷಿ ಮಾಡಿದವರು ಜಮೀನುಗಳ ಸುತ್ತ ಗಿಡಗಳನ್ನು ನೆಟ್ಟು ಲಾಭ ಪಡೆದಿದ್ದಾರೆ. ರಸ್ತೆ ಬದಿಯಲ್ಲಿ ನೆಟ್ಟಿರುವ ಸಾವಿರಾರು ಸಸಿಗಳು ಹೂ ಅರಳಿಸಿ ನಿಸರ್ಗದ ಸೊಬಗನ್ನು ಹಿಮ್ಮಡಿಸಿದೆ ಎಂದು ವಲಯ ಅರಣ್ಯ ಅಧಿಕಾರಿ ಸಂಪತ್ ಕುಮಾರ್ ಹೇಳಿದರು. ಪರಿಸರ ಪ್ರಿಯರಿಗೆ, ಸಂಘ ಸಂಸ್ಥೆಗಳ ಸದಸ್ಯರಿಗೆ ಅರಳಿ, ನೇರಳೆ, ಹೊಂಗೆ, ನೆಲ್ಲಿ ಸೇರಿ ಹೂ ಬಿಡುವ ಸಸಿಗಳನ್ನು ನೀಡಲಾಗುತ್ತಿದೆ. ವಿಶ್ವ ಪರಿಸರದ ದಿನದ ಅಂಗವಾಗಿ ಸರ್ಕಾರಿ ಕಚೇರಿಗಳ ಮುಂಭಾಗ ನೌಕರರು ಸಸಿ ಬೆಳೆಸಿ ಪರಿಸರ ಸಂರಕ್ಷಣೆಗೆ ಮುಂದಾದರೆ ಅರಣ್ಯ ಇಲಾಖೆ ಉಚಿತವಾಗಿ ಸಸಿಗಳನ್ನು ಒದಗಿಸುತ್ತದೆ ಎಂದು ಎಂದು ತಾಲ್ಲೂಕು ಘಟಕದ ಸಂಘದ ಅಮ್ಮನಪುರ ಮಹೇಶ್ ಹೇಳಿದರು.

**ಅನ್ನದಾತರಿಗೆ 11 ಸಾವಿರ ಸಸಿ**

**ವ್ಯವಸಾಯಗಾರರಿಗೆ ಕೆ.ಎ.ಪಿ.ವೈ ಯೋಜನೆಯಡಿ 11 ಸಾವಿರ ಸಸಿಗಳನ್ನು ಬೆಳೆಸಲಾಗಿದೆ. ಸಿಲ್ವರ್ ಓಕ್, ಮಹಾಗನಿ, ತೇಗ, ಹೆಬ್ಬೇವು, ನುಗ್ಗೆ, ಬಿದಿರು, ನೇರಳೆ, ನೆಲ್ಲಿ, ಬೇವು, ಬಾದಾಮಿ ಸಸಿಗಳನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತದೆ. 6x9 ಇಂಚಿನ ಬ್ಯಾಗ್‌ನಲ್ಲಿರುವ ಸಸಿಗೆ 3, 8x12 ಇಂಚಿನ ಬ್ಯಾಗ್‌ನಲ್ಲಿರುವ ಸಸಿಗೆ 6 ದರ ನಿಗದಿಪಡಿಸಲಾಗಿದೆ. ನೆಟ್ಟ ಗಿಡಗಳನ್ನು ಪೋಷಿಸಿದ ಬೆಳೆಗಾರಿಗೆ ಜೀವಂತ ಸಸಿಗಳನ್ನು ಗುರುತಿಸಿ 3 ವರ್ಷಗಳಲ್ಲಿ ತಲಾ ಒಂದು ಗಿಡಕ್ಕೆ 125ರವರೆಗೆ ಸಹಾಯಧನ ನೀಡಲಾಗುತ್ತದೆ**

**–ಸಂಪತ್ ಕುಮಾರ್, ಅರಣ್ಯ ಅಧಿಕಾರಿ**

## ಕಾವೇರಿ ಆರತಿಗೆ ವಿರೋಧ ಏಕೆ? ಹಳ್ಳಿಯಂತಿರುವ ಮಂಡ್ಯದ ಅಭಿವೃದ್ಧಿ ಬೇಡವೇ? ಗಣಿಗ

• ಉದಯವಾಹಿನಿ, ಮಂಡ್ಯ



ಯಾರು ಏನೇ ಹೋರಾಟ ಮಾಡಲಿ, ಕಾವೇರಿ ಆರತಿ ಮತ್ತು ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆಗಳನ್ನು ನಮ್ಮ ಸರ್ಕಾರ ಮಾಡೇ ಮಾಡುತ್ತದೆ. ಮಂಡ್ಯದಲ್ಲಿ ಉದ್ಯೋಗ ಸೃಷ್ಟಿಯಾಗಬೇಕು. ಇದರ ಅನುಕೂಲ ರೈತರ ಮಕ್ಕಳಿಗೆ ಆಗುತ್ತದೆ. ದೊಡ್ಡ ಹಳ್ಳಿಯ ರೀತಿ ಇರುವ ಮಂಡ್ಯ ಅಭಿವೃದ್ಧಿಯಾಗಬೇಕು. ರೈತರ ವಿರೋಧದ ಹಿಂದೆ ಯಾವ ಷಡ್ಯಂತ್ರ ಇದೆಯೋ ಗೊತ್ತಿಲ್ಲ ಎಂದು ಮಂಡ್ಯ ಶಾಸಕ ಪಿ.ರವಿಕುಮಾರ್ ಗಣಿಗ ಹೇಳಿದರು. ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿ, ಈ ಎರಡು ಯೋಜನೆಗಳಿಂದ ಕೆಆರ್‌ಎಸ್ ಅಣೆಕಟ್ಟೆಗೆ ಯಾವುದೇ ಧಕ್ಕೆ ಆಗುವುದಿಲ್ಲ. ದೇಶ–ವಿದೇಶಗಳಿಂದ ಪ್ರವಾಸಿಗರು ಬರಬೇಕು. ಸಾವಿರಾರು ಜನರು ಬಂದರೆ ಡ್ಯಾಂ ಕಲ್ಲಿಗೆ ಗುದ್ದುತ್ತಾರಾ ಎಂದು ಪ್ರಶ್ನಿಸಿದರು.

20 ರೂಪಾಯಿ ಕರ್ಪೂರ ಹಚ್ಚೋಕೆ ಏಕೆ 100 ಕೋಟಿ ಎಂಬ ರೈತ ಮುಖಂಡರ ಪ್ರಶ್ನೆಗೆ ಪ್ರತಿಕ್ರಿಯಿಸಿ, ಕರ್ಪೂರ ಹಚ್ಚಕ್ಕೆ 20 ರೂಪಾಯಿ ಸಾಕು. ಆದರೆ, 20 ಸಾವಿರ ಜನರು ಕುಳಿತು ನೋಡಲು ಮೂಲಸೌಕರ್ಯ ಬೇಕಲ್ವಾ ಯೋಜನೆಗೆ ಡಿಪಿಆರ್ ಆಗುತ್ತದೆ. ಯಾವುದಕ್ಕೆ ಎಷ್ಟು ಖರ್ಚು ಆಗುತ್ತದೆ ಎಂಬುದನ್ನು ಪರಿಶೀಲಿಸಿ. ಭ್ರಷ್ಟಾಚಾರ ಕಂಡರೆ ಕೇಸ್ ಹಾಕಿ ಜೈಲಿಗೆ ಕಳುಹಿಸಿ ಎಂದು ತಿರುಗೇಟು ನೀಡಿದರು.

100 ಕೋಟಿ ಕಾವೇರಿ ಆರತಿಗೆ ವಿರೋಧ ಎಂಬ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿ, ಮುಖ್ಯಮಂತ್ರಿ ಆಗಿದ್ದಾಗ 8 ಸಾವಿರ ಕೋಟಿ ಕೊಟ್ಟೆ. ಇಳಿಲೆ ಹೊರಟೋಯ್ತು ಅನ್ನೋದಲ್ಲ. ಯೋಜನೆಗೆ ನಮ್ಮ ಸರ್ಕಾರ 100 ಕೋಟಿ ಕೊಡ್ತಿರೋದು ಒರಿಜಿನಲ್' ಎಂದು ಕುಟುಕಿದರು. ಮುಖ್ಯಮಂತ್ರಿಯವರ ದೆಹಲಿ ಪ್ರವಾಸದ ಬಗ್ಗೆ ಪ್ರತಿಕ್ರಿಯಿಸಿ, ನಾನು ಯಾವುದೇ ಮಂತ್ರಿಗಿರಿ ಆಕಾಂಕ್ಷಿ ಅಲ್ಲ. ಮೊದಲ ಬಾರಿಗೆ ಶಾಸಕ ಆಗಿದ್ದೀನಿ ಒಳ್ಳೆ ಕೆಲಸ ಮಾಡುತ್ತೇನೆ' ಎಂದರು.

**ಬೆಂಗಳೂರಿನ ಕಾಲ್ತುಳಿತ ಪ್ರಕರಣಕ್ಕೆ ಪ್ರತಿಕ್ರಿಯಿಸಿ, ಸಾವಿನ ಮೇಲೆ ರಾಜಕಾರಣ ಮಾಡೋದು ಬಿಜೆಪಿಯವರ ಹುಟ್ಟುಗುಣ. ಡಾ.ರಾಜಕುಮಾರ್ ಸತ್ತಾಗ ಯಾರೂ ಗಲಾಟೆ ಮಾಡ್ತಿರಲಿಲ್ಲ. ನನ್ನ ಕಣ್ಣ ಮುಂದೆಯೇ ಪೊಲೀಸರು ನಾಲ್ವರು ಅಭಿಮಾನಿಗಳಿಗೆ ಗುಂಡು ಹೊಡೆದ್ರು. ಅವತ್ತು ಆಗಿರಲಿಲ್ವಾ ವೈಫಲ್ಯ ಅವತ್ತು ಕುಮಾರಸ್ವಾಮಿಗೆ ನೆನಪಿರಲಿಲ್ವಾ ಭದ್ರತೆ ಒದಗಿಸಬೇಕು ಅಂತ? ಎಂದು ತಿರುಗೇಟು ನೀಡಿದರು.**

# ಶೆಟ್ಟಿಕೆರೆ ಒಡಲಿಗೆ ಮಲಿನ ನೀರು

## ಕೆರೆ ಸುತ್ತಲೂ ಏಳುತ್ತಿರುವ ಹೊಸ ಬಡಾವಣೆಗಳು

• ಉದಯವಾಹಿನಿ, ಮೈಸೂರು

ಮೈಸೂರು–ಊಟಿ ರಸ್ತೆಗೆ ಹೊಂದಿಕೊಂಡಂತೆ ಚಾಚಿರುವ ಶೆಟ್ಟಿಕೆರೆ ಎಂದೂ ಬತ್ತಿಲ್ಲ. ಆದರೆ, ನಗರದ ಮಲಿನ ನೀರೆಲ್ಲ ದಳವಾಯಿ ಕೆರೆ ಮೂಲಕ ಅದರ ಒಡಲು ತುಂಬುತ್ತಿದೆ. ಮಂಡಕಳ್ಳಿ ಗ್ರಾಮದ ಸರ್ವೆ ಸಂಖ್ಯೆ 18ರಲ್ಲಿ 20.19 ಎಕರೆಯಷ್ಟು ವಿಸ್ತಾರವಾದ ಕೆರೆಯಲ್ಲಿ ತೇಲುಕಳೆಯೇ ತುಂಬಿದೆ. 4,092 ಎಕರೆ ಜಲಾನಯನ ಪ್ರದೇಶವಿದ್ದು, ಪಶ್ಚಿಮ ಭಾಗದಲ್ಲಿ ಬಡಾವಣೆಗಳು ಏಳುತ್ತಿವೆ. ಚರಂಡಿ ತ್ಯಾಜ್ಯವೆಲ್ಲ ಕೆರೆಗೆ ಸೇರುತ್ತಿದೆ. ಕೆರೆಯ ದಕ್ಷಿಣ ಭಾಗಕ್ಕೆ ಮೈಸೂರು ವಿಮಾನ ನಿಲ್ದಾಣವಿದೆ. ಕೃಷಿಕರು ಪಶ್ಚಿಮ, ಪೂರ್ವಭಾಗದ ಕಡೆ ಒತ್ತುವರಿಯನ್ನೂ ಮಾಡಿದ್ದಾರೆ.

ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಸೇರುವ ಕೆರೆಯಾಗಿದ್ದು, ಇದರ ನಿರ್ವಹಣೆಯ ಜವಾಬ್ದಾರಿ ತಾಲ್ಲೂಕು ಪಂಚಾಯಿತಿ ಮೇಲೆಯೂ ಇದೆ. ಆದರೆ, ಕೆರೆ ಬಗ್ಗೆ ಆಡಳಿತ ವ್ಯವಸ್ಥೆ ನಿರ್ಲಕ್ಷ್ಯ ವಹಿಸಿದೆ. ಕೃಷಿ ಚಟುವಟಿಕೆಗಳಿಗೆ ನೀರು ಒದಗಿಸುತ್ತಿರುವ ಕೆರೆಯ ಸುತ್ತಲೂ ತೆಂಗಿನ ತೋಟಗಳು, ಫಾರ್ಮ್ ಹೌಸ್‌ಗಳು ನೆಲೆಗೊಂಡಿವೆ. ವರುಣಾ ನಾಲೆಯು ಕೆರೆಯ ಮೇಲಿನ ಜಲಾನಯನ ಪ್ರದೇಶದಲ್ಲಿ ಹಾದುಹೋಗಿದ್ದು, ಅಲ್ಲಿನ ನೀರೂ ಇಲ್ಲಿಗೆ ಸೇರುತ್ತಿದೆ.


ಉದಯವಾಹಿನಿ ಚಿತ್ರ

**ಸಂಸ್ಕರಣಗೊಳ್ಳದ ನೀರು:** ಸೀವೇಜ್ ಫಾರಂನಲ್ಲಿ ಸಂಸ್ಕರಣೆಗೊಳ್ಳದ ಚರಂಡಿ ನೀರಿನೊಂದಿಗೆ ಜೆ.ಪಿ.ನಗರ, ಕೊಪ್ಪಲೂರು, ಗೆಜ್ಜಗಳ್ಳಿ, ರಿಂಗ್ ರಸ್ತೆಯ ಇಕ್ಕೆಲಗಳಲ್ಲಿ ದಶಕದಿಂದೀಚೆಗೆ ನಿರ್ಮಾಣಗೊಂಡ ಬಡಾವಣೆಗಳ ಮಲಿನ ನೀರು ರಾಜಕಾಲುವೆ, ಚರಂಡಿಗಳ ಮೂಲಕ ನೇರವಾಗಿ ದಳವಾಯಿ ಕೆರೆ ತಲುಪಿ ಅಲ್ಲಿನ ನೀರು ಈ ಶೆಟ್ಟಿಕೆರೆಗೆ ಬರುತ್ತಿದೆ. ಇದೇ ನೀರು ಕಬಿನಿ ನದಿಯನ್ನೂ ತಲುಪುತ್ತದೆ. ಹೊಸ ಬಡಾವಣೆಗಳ ಕಟ್ಟಡ ತ್ಯಾಜ್ಯ ಕೆರೆಗೆ ಹೊಂದಿಕೊಂಡಿರುವ ರಸ್ತೆ, ಏರಿ ಬದಿಯಲ್ಲೇ ಸುರಿಯಲಾಗುತ್ತಿದೆ. ಪ್ಲಾಸ್ಟಿಕ್ ಕವರ್‌ಗಳು, ಮದ್ಯದ ಬಾಟಲಿಗಳು, ಎಲೆಕ್ಟ್ರಾನಿಕ್ ವಸ್ತುಗಳು ಕೆರೆಯಂಚನ್ನು ಆವರಿಸಿವೆ.

**ಬಡಾವಣೆಗಳ ನೀರು**

**ಬಿಇಎಂಎಲ್ ಬಡಾವಣೆ, ಶ್ರೀನಗರ, ಗೆಜ್ಜಗಳ್ಳಿ, ಮಂಡಕಳ್ಳಿ ವ್ಯಾಪ್ತಿಯಲ್ಲಿನ ಹೊಸ ಬಡಾವಣೆಗಳ ಚರಂಡಿ ನೀರು ಶೆಟ್ಟಿಕೆರೆ ಸೇರುತ್ತಿದ್ದು, ನೈದಿಲೆಗಳಿಂದ ತುಂಬಿದ್ದ ಕೆರೆಯಲ್ಲಿ, ಕತ್ತೆ ಕಿವಿ ತೇಲುಕಳೆ ಬೆಳೆದಿದೆ. ಇದು ನೀರಿನಲ್ಲಿ ಆಮ್ಲಜನಕ ಪ್ರಮಾಣ ಕಡಿಮೆ ಮಾಡುವುದರಿಂದ ಮೀನುಗಾರಿಕೆ ತಗ್ಗಿದೆ. ಅಲ್ಲದೇ ಬಾನಾಡಿಗಳ ಹಾಜರಿ ಇಲ್ಲಿ ಮೊದಲಿನಂತಿಲ್ಲ. ಮೊದಲು ಕಾಣಸಿಗುತ್ತಿದ್ದ ಬಣ್ಣದ ಕೊಕ್ಕರೆ, ಬೂದು ಸಿಪಿಲೆ, ಹಾವಕ್ಕಿ, ಕಪ್ಪು ತಲೆಯ ಕೆಂಬರಲು, ನೀರು ನಡಿಗೆ, ಮರಳು ಪೀಪಿ ಹಕ್ಕಿಗಳ ಸಂಖ್ಯೆ ಎರಡಂಕಿಗೆ ಇಳಿದಿದೆ.**

**ಅಳಿವಿನಂಚಿಗೆ ಊರಕಟ್ಟೆ**

**ಮಂಡಕಳ್ಳಿ ಗ್ರಾಮದಲ್ಲಿ ಊರಕಟ್ಟೆ, ಮಂಡಕಳ್ಳಿ ಕುಂಟೆ ಎಂಬ ನೀರನ್ನು ಇಂಗಿಸುವ ಮೂಲಗಳೂ ಇವೆ. ಊರಕಟ್ಟೆಯು 2.03 ಎಕರೆಯಷ್ಟಿದ್ದು ಕುಂಟೆಯು 0.35 ಎಕರೆಯಷ್ಟಿದೆ. ಎರಡೂ ಗ್ರಾಮದ ತ್ಯಾಜ್ಯವನ್ನು ಸುರಿಯುವ ತಾಣವಾಗಿ ಮಾರ್ಪಟ್ಟಿದ್ದು ಅಳಿವಿನ ಸನಿಹದಲ್ಲಿವೆ. ಊರಕಟ್ಟೆಯ ಸುತ್ತಲೂ ತೆಂಗಿನ ತೋಟಗಳು ಇವೆ. ಕುಂಟೆಯ ಒಂದಿ ಭಾಗವನ್ನು ಸ್ಮಶಾನವಾಗಿ ಬಳಕೆ ಮಾಡಲಾಗುತ್ತಿದೆ.**

## ಮಿನಿ ನ್ಯೂಸ್

### ಗಾಂಜಾ ಮಾರಾಟ ಇಬ್ಬರ ಬಂಧನ

• ಉದಯವಾಹಿನಿ, ಚಿಂತಾಮಣಿ

ತಾಲ್ಲೂಕಿನ ಮುರುಗಮಲ್ಲ ಗ್ರಾಮದ ಜಂಗೀಫೀರ್ ದರ್ಗಾ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಕೆಂಚಾರ್ಲಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ವರದಾಪುರ ಗ್ರಾಮದ ಗಣೇಶ್, ವಾಸೀಂಖಾನ್ ಬಂಧಿತರು. ಬಂಧಿತರಿಂದ ಮಾರಾಟ ಮಾಡಲು ತಂದಿದ್ದ ಒಂದು ಕೆ.ಜಿ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಮುರುಗಮಲ್ಲ ಗ್ರಾಮದ ಜಂಗೀ ಫೀರ್ ದರ್ಗಾದ ಬಳಿ ಇಬ್ಬರು ವ್ಯಕ್ತಿಗಳು ಗಾಂಜಾ ಮಾರಾಟ ಮಾಡಲು ಅನುಮಾನಾಸ್ಪದವಾಗಿ ಸಂಚರಿಸುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಕೆಂಚಾರ್ಲಹಳ್ಳಿ ಠಾಣೆ ಸಬ್ ಇನ್ಸ್‌ಪೆಕ್ಟರ್ ಎಂ.ಶಿವಕುಮಾರ್, ಸಿಬ್ಬಂದಿ ಸ್ಥಳಕ್ಕೆ ತೆರಳಿದ್ದಾರೆ. ಪೊಲೀಸರನ್ನು ಕಂಡ ಕೂಡಲೇ ಆರೋಪಿಗಳು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಪೊಲೀಸರು ಬೆನ್ನಟ್ಟಿ ಆರೋಪಿಗಳನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದಾರೆ. ಅಪರಾಧ ಪತ್ತೆ ಸಿಬ್ಬಂದಿ ಲಕ್ಷ್ಮಿಪತಿ, ಶ್ರೀನಾರಾಯಣ ದಾಳಿಯಲ್ಲಿ ಭಾಗವಹಿಸಿದ್ದರು.

### ಸ್ನೇಹಿತೆಗೆ ಉಡುಗೊರೆ ತಂದ ಆಂಧ್ರ ಯುವಕರು: ಜನರ ಆಕ್ರೋಶ

• ಉದಯವಾಹಿನಿ, ಕುಣಿಗಲ್

ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾಗಿದ್ದ ಯುವತಿಗೆ ಹುಟ್ಟುಹಬ್ಬದ ಉಡುಗೊರೆ ನೀಡಲು ಆಂಧ್ರಪ್ರದೇಶದಿಂದ ಬಂದ ಸಹೋದರರು ಯುವತಿಯ ಸಮುದಾಯದವರ ಆಕ್ರೋಶಕ್ಕೆ ತುತ್ತಾಗಿದ್ದು, ಪೊಲೀಸರ ಸಕಾಲಿಕ ಪ್ರವೇಶದಿಂದ ಪಾರಾಗಿದ್ದಾರೆ. ತಾಲ್ಲೂಕಿನ ಮುಸ್ಲಿಂ ಯುವತಿಗೆ ಆಂಧ್ರದ ಚಿತ್ತೂರಿನ ಹಿಂದೂ ಯುವಕನೊಂದಿಗೆ ಇನ್‌ಸ್ಟಗ್ರಾಂನಲ್ಲಿ ಸ್ನೇಹವಾಗಿತ್ತು. ಯುವತಿಗೆ ಉಡುಗೊರೆ ನೀಡಲು ಮಂಗಳವಾರ ಸಹೋದರನ ಜತೆ ಬಂದ ಯುವಕ ಯುವತಿಯನ್ನು ಭೇಟಿ ಮಾಡಿದಾಗ ಮುಸ್ಲಿಂ ಯುವಕರ ಗುಂಪು ತೀವ್ರ ವಿಚಾರಣೆ ನಡೆಸಿ ಹಲ್ಲೆಗೆ ಮುಂದಾಗಿದ್ದರು. ಮಾಹಿತಿ ತಿಳಿದ ಪೊಲೀಸರು ಸ್ಥಳಕ್ಕೆ ತೆರಳಿ ಯುವಕರ ಗುಂಪನ್ನು ಚದುರಿಸಿ ಇಬ್ಬರನ್ನು ರಕ್ಷಿಸಿದ್ದಾರೆ. ಯುವತಿ ಕಡೆಯವರು ದೂರು ನೀಡಲು ನಿರಾಕರಿಸಿದ ಕಾರಣ ಸಹೋದರರಿಗೆ ಎಚ್ಚರಿಕೆ ನೀಡಿ ಕಳುಹಿಸಲಾಗಿದೆ.

### ತುರುವೇಕೆರೆ ಸಬ್‌ಇನ್ಸ್‌ಪೇಕ್ಟರ್ ಬಂಧನಕ್ಕೆ ಆಗ್ರಹ

• ಉದಯವಾಹಿನಿ, ತುರುವೇಕೆರೆ

ಪಟ್ಟಣದ ಸಬ್‌ಇನ್ಸ್‌ಪೆಕ್ಟರ್ ಸಂಗಮೇಶ ಮೇಟಿಯನ್ನು ಕೇವಲ ಅಮಾನತು ಮಾಡಿದರೆ ಸಾಲದು, ಅವರನ್ನು ಬಂಧಿಸಬೇಕು ಎಂದು ಕೆಆರ್‌ಎಸ್ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಲ್.ಜೀವನ್ ಆಗ್ರಹಿಸಿದರು. ಪಟ್ಟಣದ ಪೊಲೀಸ್ ಠಾಣೆ ಮುಂಭಾಗವೇ ಅಮಾನತುಗೊಂಡಿರುವ ಪೊಲೀಸ್ ಠಾಣೆ ಸಬ್‌ಇನ್ಸ್‌ಪೇಕ್ಟರ್ ಸಂಗಮೇಶ ಮೇಟಿ ಭಾವಚಿತ್ರಕ್ಕೆ ಹೂವಿನ ಹಾರ ಹಾಕಿ ಸನ್ಮಾನದೊಂದಿಗೆ ಅವಮಾನ ಶೀರ್ಷಿಕೆಯಡಿ ನಡೆಸಿದ ಸಭೆಯಲ್ಲಿ ಮಾತನಾಡಿದರು. ಪ್ರಕರಣವೊಂದರಲ್ಲಿ ಜೈಲು ಪಾಲಾಗಿದ್ದ ಆರೋಪಿಯೊಬ್ಬನ ಮೊಬೈಲ್ ಪಡೆದು ಆತನ ಫೋನ್ ಪೇ ಯ ಪಾಸ್‌ವರ್ಡ್ ಪಡೆದು ಸುಮಾರು 195 ಸಾವಿರ ಆನ್‌ಲೈನ್ ಗೇಮ್ ಆಡಿರುವುದು ಗಂಭೀರ ಅಪರಾಧ. ಸಾಮಾನ್ಯರು ಈ ಕೃತ್ಯ ಎಸಗಿದ್ದರೆ ಅವರನ್ನು ಹೀಗೆ ಬಿಡಲಾಗುತ್ತಿತ್ತೆ?. ಅವರನ್ನು ಬಂಧಿಸಲಾಗುತ್ತಿತ್ತು. ಸಾಮಾನ್ಯ ಜನರಿಗೊಂದು ನ್ಯಾಯ ಪೊಲೀಸರಿಗೊಂದು ನ್ಯಾಯ ಸಂವಿಧಾನದಲ್ಲಿದೆಯೇ ತಪ್ಪು ಮಾಡಿರುವ ಪೊಲೀಸ್ ಸಬ್‌ಇನ್ಸ್‌ಪೇಕ್ಟರ್ ಸಂಗಮೇಶ್ ಮೇಟಿಯನ್ನು ಕೂಡಲೇ ಬಂಧಿಸಲೇಬೇಕು. ಅವರನ್ನು ಸೇವೆಯಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು. ರಾಜ್ಯ ಎಸ್‌ಸಿ, ಎಸ್‌ಟಿ ಘಟಕದ ಕಾರ್ಯದರ್ಶಿ ಚೆನ್ನಯ್ಯ ಮಾತನಾಡಿ, ಭ್ರಷ್ಟಾಚಾರದಲ್ಲಿ ತೊಡಗಿರುವ ಸರ್ಕಾರಿ ನೌಕರರ ಬಗ್ಗೆ ಕಠಿಣ ಕ್ರಮ ಕೈಗೊಳ್ಳಲು ಯಾವ ಸರ್ಕಾರವೂ ಸಿದ್ಧವಿಲ್ಲ. ಜನರನ್ನು ಶೋಷಿಸುವುದೇ ಸರ್ಕಾರಿ ನೌಕರರ ಕೆಲಸ ಎನ್ನುವಂತಾಗಿದೆ. ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಲಂಚ ತಾಂಡವಾಡುತ್ತಿದೆ ಎಂದರು.

### ಪೊಲೀಸ್ ಆಯುಕ್ತರ ಅಮಾನತು ಖಂಡಿಸಿ ರಸ್ತೆ ತಡೆ

• ಉದಯವಾಹಿನಿ, ಪಾವಗಡ

ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತಕ್ಕೆ ಹೊಣೆಯಾಗಿಸಿ ಬೆಂಗಳೂರು ಪೊಲೀಸ್ ಆಯುಕ್ತ ದಯಾನಂದ ಅವರನ್ನು ಅಮಾನತು ಮಾಡಿರುವ ಸರ್ಕಾರದ ಕ್ರಮ ಖಂಡಿಸಿ ಪಟ್ಟಣದಲ್ಲಿ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ದಯಾನಂದ ಅವರನ್ನು ಅಮಾನತುಗೊಳಿಸಿರುವುದು ಸರ್ಕಾರದ ತಪ್ಪು ನಿರ್ಧಾರ. ಯಾರೋ ಮಾಡಿದ ತಪ್ಪಿಗೆ ಅಧಿಕಾರಿಗಳನ್ನು ಬಲಿಪಶು ಮಾಡುವುದು ಸರಿಯಲ್ಲ. ಕೂಡಲೇ ಸರ್ಕಾರ ಪ್ರಾಮಾಣಿಕ, ದಕ್ಷ ಅಧಿಕಾರಿ ದಯಾನಂದ್ ಅವರ ಅಮಾನತು ಆದೇಶ ರದ್ದುಪಡಿಸಬೇಕು ಎಂದು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ತುಮಕೂರು ಜಿಲ್ಲಾ ಯುವ ಘಟಕ ಅಧ್ಯಕ್ಷ ಪಾಳೇಗಾರ್ ಲೋಕೇಶ್ ಒತ್ತಾಯಿಸಿದರು.

ಖರ್ಚೆ ಉಳಿಸಿಕೊಳ್ಳಲು ಪೊಲೀಸ್ ಇಲಾಖೆ ಅಧಿಕಾರಿಗಳು, ಸಿಬ್ಬಂದಿಯನ್ನು ಅಮಾನತು ಮಾಡಿ ಜನರ ದಿಕ್ಕು ತಪ್ಪಿಸಲಾಗುತ್ತಿದೆ ಎಂದು ಆರೋಪಿಸಿದರು. ಪಟ್ಟಣದ ಪ್ರಮುಖ ರಸ್ತೆಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಕೆಲಕಾಲ ರಸ್ತೆ ತಡೆ ನಡೆಸಲಾಯಿತು.

### ಮನೆ ಬೀಗ ಮೀಟಿ 2 ಲಕ್ಷ ನಗದು, 2.50 ಲಕ್ಷದ ಚಿನ್ನಾಭರಣ ಕಳವು

• ಉದಯವಾಹಿನಿ, ಮುಳಬಾಗಿಲು

ಮನೆಯಲ್ಲಿ ಯಾರೂ ಇಲ್ಲದಾಗ ಮನೆಯ ಬಾಗಿಲಿನ ಬೀಗ ಮುರಿದು ಒಳ ನುಗ್ಗಿದ ಕಳ್ಳರು, ಬೀರುವಿನಲ್ಲಿ 2 ಲಕ್ಷ ನಗದು, 2.5 ಲಕ್ಷ ಮೌಲ್ಯದ ಆಭರಣಗಳನ್ನು ಕದ್ದು ಪರಾರಿಯಾಗಿದ್ದಾರೆ ಎಂದು ಮುಳಬಾಗಿಲು ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮುಳಬಾಗಿಲು ನಗರದ ಹೈದರಿ ನಗರದ ನಿವಾಸಿ ಮಸೂದ್ ಉಲ್ಲಾ ಖಾನ್ ಕುಟುಂಬ ಸದಸ್ಯರ ಸಹಿತ ಕೋಲಾರದಲ್ಲಿರುವ ತಮ್ಮ ಅತ್ತೆಯ ಮನೆಗೆ ಹೋಗಿದ್ದರು. ಇದೇ ಸಮಯಕ್ಕೆ ಹೊಂಚು ಹಾಕುತ್ತಿದ್ದ ಕಳ್ಳರು, ಮನೆಯ ಬಾಗಿಲನ್ನು ಕಬ್ಬಿಣದ ಸಲಾಕೆಯಿಂದ ಮೀಟಿ, ಮನೆಯೊಳಕ್ಕೆ ನುಗ್ಗಿ ಬೀರುವಿನಲ್ಲಿದ್ದ ನಗದು, ಚಿನ್ನಾಭರಣ ಕದ್ದು ಹೋಗಿದ್ದಾರೆ. ಮನೆಗೆ ಬಂದು ನೋಡಿದಾಗ ಕಳ್ಳತನವಾಗಿರುವುದು ಗೊತ್ತಾಗಿದೆ. ಬೀರುವಿನಲ್ಲಿದ್ದ ಬಟ್ಟೆಬರೆಗಳನ್ನು ಚೆಲ್ಲಾಪಿಲ್ಲಿಯಾಗಿ ಬಿಸಾಡಲಾಗಿತ್ತು ಎಂದು ಮಸೂದ್ ಉಲ್ಲಾ ಖಾನ್ ದೂರಿನಲ್ಲಿ ವಿವರಿಸಿದ್ದಾರೆ. ಶ್ವಾನದಳ, ಬೆರಳಚ್ಚು ತಜ್ಞರು, ಕೋಲಾರ ಜಿಲ್ಲಾ ಹೆಚ್ಚುವರಿ ಪೊಲೀಸ್‌ವರಿಷ್ಠಾಧಿಕಾರಿ ಜಗದೀಶ್, ಡಿವೈಎಸ್‌ಪಿ ಡಿ.ಸಿ. ನಂದಕುಮಾರ್, ನಗರ ಠಾಣೆ ಇನ್ಸ್‌ಪೆಕ್ಟರ್ ರಾಜಣ್ಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಅಂತರಾಳದಿಂದ.. EDITORIAL

# ಪೊಲೀಸ್ ಕಾರ್ಯಾಚರಣೆಗೆ ರಾಜಕೀಯ ಬಣ್ಣಬೇಡ

ರಾಜ್ಯದಲ್ಲಿ ಯಾವುದೇ ಪಕ್ಷದ ಸರಕಾರ ಬಂದರೂ ಕರಾವಳಿ ಪ್ರದೇಶದ ಅದರಲ್ಲೂ ದಕ್ಷಿಣ ಕನ್ನಡದ ಕೋಮು ಹಿಂಸಾಚಾರವನ್ನು ತಡೆಯಲು ಈವರೆಗೆ ಸಾಧ್ಯವಾಗಿಲ್ಲ. ಕಳೆದ ಎಪ್ರಿಲ್ ಕೊನೆಯಲ್ಲಿ ಹಿಂಸೆ ಭುಗಿಲೆದ್ದು ಮೂವರು ಸಾವಿಗೀಡಾದರು. ಈ ಹತ್ಯೆಗಳ ಬೆನ್ನಲ್ಲೇ ಹಿಂದೂ ಮತ್ತು ಮುಸ್ಲಿಮ್ ಸಮುದಾಯಗಳ ನಡುವೆ ದ್ವೇಷದ ದಳ್ಳುರಿ ಎದ್ದಿತು. ಸರಣಿಯಾಗಿ ನಡೆದ ಇತ್ತೀಚಿನ ಹತ್ಯೆಯನ್ನೇ ನೆಪವಾಗಿಟ್ಟುಕೊಂಡು ಕರಾವಳಿಯಲ್ಲಿ ಹಿಂದೂ-ಮುಸ್ಲಿಮರ ನಡುವೆ ದ್ವೇಷದ ವಿಷಬೀಜವನ್ನು ಬಿತ್ತುವ ಹುನ್ನಾರಗಳು ತೆರೆಮರೆಯಲ್ಲಿ ನಡೆದಿವೆ. ಈ ಅಪಾಯಕಾರಿ ವಿದ್ಯಮಾನದ ಹಿನ್ನೆಲೆಯಲ್ಲಿ ತಕ್ಷಣ ಎಚ್ಚೆತ್ತುಕೊಂಡ ರಾಜ್ಯ ಸರಕಾರ ಮಂಗಳೂರಿನ ಪೊಲೀಸ್ ಆಯುಕ್ತರು ಹಾಗೂ ದಕ್ಷಿಣ ಕನ್ನಡ, ಉಡುಪಿಯ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಬೇರೆ ಕಡೆ ವರ್ಗಾವಣೆ ಮಾಡಿದೆ. ಬರೀ ಉನ್ನತ ಪೊಲೀಸಾಧಿಕಾರಿಗಳನ್ನು ವರ್ಗಾವಣೆ ಮಾಡಿದರೆ ಸಾಲದೆಂದು ಅರಿತ ಸರಕಾರ ಹಲವಾರು ವರ್ಷಗಳಿಂದ ಬೇರು ಬಿಟ್ಟಿರುವ ಹಲವು ಕೆಳ ಹಂತದ ಪೊಲೀಸಾಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ವರ್ಗಾವಣೆ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಿದೆ. ಹಿಂದೆ ಮಂಗಳೂರಿನಲ್ಲಿ ಕೆಲಸ ಮಾಡಿದ ಐಪಿಎಸ್ ಅಧಿಕಾರಿಗಳನ್ನು ಅಲ್ಲಿ ನಿಯೋಜಿಸಲಾಗಿದೆ.ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರ ದುಷ್ಟ ಶಕ್ತಿಗಳ ನಿಗ್ರಹಕ್ಕಾಗಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುತ್ತಿದ್ದಂತೆ ಪೊಲೀಸರ ಕಾರ್ಯವೈಖರಿ ಬದಲಾಗಿದೆ. ಕೋಮು ಗಲಭೆಯನ್ನು ಪ್ರಚೋದಿಸುವ ಭಾಷಣಗಳನ್ನು ಮಾಡುವವರು, ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಪೋಸ್ಟ್‌ಗಳನ್ನು ಹಾಕಿ ಹಿಂಸೆಗೆ ಪ್ರಚೋದಿಸುವ ವ್ಯಕ್ತಿಗಳು, ನಿರಂತರವಾಗಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಶಾಂತಿ ಮತ್ತು ನೆಮ್ಮದಿಯನ್ನು ಕದಡುವವರ ಮೇಲೆ ಪೊಲೀಸ್ ಕಾರ್ಯಾಚರಣೆ ಆರಂಭವಾಗಿದೆ. ಕೋಮು ಹಿಂಸಾಚಾರದಲ್ಲಿ ನೇರವಾಗಿ ಭಾಗವಹಿಸುವವರನ್ನು ಪತ್ತೆ ಹಚ್ಚಿ 36 ಮಂದಿಯನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಗಡಿಪಾರು ಮಾಡುವ ಪ್ರಕ್ರಿಯೆ ಶುರುವಾಗಿದೆ. ವಿದೇಶಗಳಲ್ಲಿ ನೆಲೆಸಿ ಸಾಮಾಜಿಕ ಮಾಧ್ಯಮಗಳ ಮೂಲಕ ಹಿಂಸೆಯನ್ನು ಪ್ರಚೋದಿಸುವವರನ್ನು ನಿಗ್ರಹಿಸುವುದು ಅಷ್ಟು ಸುಲಭವಲ್ಲ.

> ಸಂಘ ಪರಿವಾರದ ಸಂಘಟನೆಗಳು ಎಷ್ಟೇ ಅಪರಾಧ ಕೃತ್ಯ ಎಸಗಲಿ ಅವರ ಮೇಲೆ ಕ್ರಮವನ್ನು ಕೈಗೊಳ್ಳಬಾರದು ಎಂಬ ದಾಟಿಯಲ್ಲಿ ಶೋಭಾ ಕರಂದ್ಲಾಜೆ ಸೇರಿದಂತೆ ಕೆಲವು ಬಿಜೆಪಿ ನಾಯಕರು ಮಾತನಾಡುತ್ತಿದ್ದಾರೆ. ವಿಧಾನ ಸಭೆಯಲ್ಲಿ ಬಿಜೆಪಿ ನಾಯಕ ಅರವಿಂದ ಬೆಲ್ಲದ ಅವರು ಕೂಡ ಇಂತಹದೇ ಹೇಳಿಕೆ ನೀಡಿದ್ದಾರೆ.

ಇಂತಹ ಕಿಡಿಗೇಡಿಗಳನ್ನು ಹಿಡಿಯಲು ಹೊಸ ಅಸ್ತವನ್ನು ಬಳಸುತ್ತಿರುವ ಪೊಲೀಸರು ಲುಕ್‌ಔಟ್ ನೋಟಿಸ್ ಹೊರಡಿಸಿ ಅಂಥವರನ್ನು ಸ್ವದೇಶಕ್ಕೆ ಕರೆಸಿಕೊಂಡು ಬಂಧಿಸಿ ಜೈಲಿಗೆ ಅಟ್ಟುತ್ತಿದ್ದಾರೆ. ಇದರಿಂದ ಜಿಲ್ಲೆಯ ಜನ ನೆಮ್ಮದಿಯಿಂದ ಇದ್ದರೂ ಕೋಮು ಹಿಂಸೆಯ ಫಲಾನುಭವಿಗಳಾದ ರಾಜಕೀಯ ನಾಯಕರಿಗೆ ಅಸಮಾಧಾನ ಉಂಟಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಮಾಯಕರ ಮೇಲೆ ಪೊಲೀಸ್ ದೌರ್ಜನ್ಯ ನಡೆದಿದೆ ಎಂದು ಬಿಜೆಪಿಯ ನಾಯಕರು ಹೇಳಿಕೆಗಳನ್ನು ನೀಡುತ್ತಿದ್ದಾರೆ. ತಮಗಿರುವ ಜವಾಬ್ದಾರಿಯುತ ಕೆಲಸಗಳನ್ನು ನಿರ್ವಹಿಸುವುದನ್ನು ಬಿಟ್ಟು ಮನ ಬಂದಂತೆ ಹೇಳಿಕೆಗಳನ್ನು ಕೊಡುತ್ತಿರುವ ಕೇಂದ್ರ ಸಚಿವರು, ರಾಜ್ಯ ಬಿಜೆಪಿಯ ಕೆಲವು ನಾಯಕರು ತಲೆಗೊಬ್ಬರಂತೆ ಹೇಳಿಕೆಗಳನ್ನು ನೀಡುತ್ತಾ ಪರೋಕ್ಷವಾಗಿ ಕಾನೂನು ಮತ್ತು ಸುವ್ಯವಸ್ಥೆಯ ಕಾರ್ಯವನ್ನು ನಿರ್ವಹಿಸುತ್ತಿರುವ ಪೊಲೀಸರ ಕೆಲಸದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಪೊಲೀಸರ ಕಾರ್ಯಕ್ಕೆ ರಾಜಕೀಯ ಬಣ್ಣವನ್ನು ಬಳಿಯುವ ಹುನ್ನಾರವೂ ನಡೆದಿದೆ. ಕೇಂದ್ರ ಕಾರ್ಮಿಕ ಹಾಗೂ ಉದ್ಯೋಗ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ದೌರ್ಜನ್ಯ ನಡೆದಿದೆಯೆಂದು ಪೊಲೀಸ್ ಕಾರ್ಯಾಚರಣೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ ಮತ್ತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಪತ್ರ ಬರೆದಿದ್ದಾರೆ. ಮಂಗಳೂರಿನಿಂದ 36 ಮಂದಿಯ ಗಡಿಪಾರಿಗಾಗಿ ಮಾಡಿದ ಪಟ್ಟಿ ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಅವರ ಮನೆಯಲ್ಲಿ ಸಿದ್ಧವಾಗಿದೆ. ಸ್ಪೀಕರ್ ಖಾದರ್ ಕಾಂಗ್ರೆಸ್ ಏಜೆಂಟ್ ಎಂದು ಅತ್ಯಂತ ಅಸಭ್ಯ ಭಾಷೆಯಲ್ಲಿ ಹೇಳಿಕೆ ನೀಡಿದ್ದಾರೆ.

ಸಾಂವಿಧಾನಿಕ ಸ್ಥಾನಮಾನ ಹೊಂದಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮತ್ತು ಅರವಿಂದ ಬೆಲ್ಲದ ಅವರು ಇಂತಹ ವಿವಾದಾತ್ಮಕ ಹೇಳಿಕೆಗಳನ್ನು ನೀಡುವ ಮೂಲಕ ಕಾನೂನಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿರುವುದು ಸರಿಯಲ್ಲ. ಧರ್ಮದ ಹೆಸರಿನಲ್ಲಿ ಸಂಘಟನೆಗಳನ್ನು ಕಟ್ಟಿಕೊಂಡು ಹಿಂಸಾಚಾರದಲ್ಲಿ ತೊಡಗುವವರನ್ನು ಕೇಂದ್ರ ಸಚಿವರು ಹಾಗೂ ಬಿಜೆಪಿಯ ನಾಯಕರು ಸಮರ್ಥಿಸುತ್ತಿರುವುದು ವಿಷಾದ ಮತ್ತು ಆತಂಕದ ಸಂಗತಿಯಾಗಿದೆ. ಇದು ಸಂವಿಧಾನಕ್ಕೆ ಬಗೆದ ಅಪಚಾರವಾಗಿದೆ.ಅಪರಾಧಿಗಳು ಯಾರೇ ಆಗಿರಲಿ ಅವರನ್ನು ಧರ್ಮದ ಕನ್ನಡಕ ಹಾಕಿ ನೋಡುವುದು ಸರಿಯಲ್ಲ ಮಂಗಳೂರು ಮುಂತಾದ ಕಡೆ ಹಿಂಸೆಗೆ ಪ್ರಚೋದಿಸುವವರು ಯಾವುದೇ ಸಂಘಟನೆಗೆ, ರಾಜಕೀಯ ಪಕ್ಷಕ್ಕೆ ಸೇರಿರಲಿ, ಎಷ್ಟೇ ಪ್ರಭಾವಿಯಾಗಿರಲಿ ಅಂಥವರನ್ನು ಹಿಡಿದು ಶಿಕ್ಷಿಸುವಾಗ ಯಾರೂ ಅಡ್ಡಿಯಾಗಬಾರದು. ದಕ್ಷಿಣ ಕನ್ನಡದ ಪೊಲೀಸರು ಯಾವುದೇ ಒಂದು ಸಂಘಟನೆ ಇಲ್ಲವೇ ಸಮುದಾಯಕ್ಕೆ ಸೇರಿದವರ ಮೇಲೆ ಮಾತ್ರ ಕ್ರಮ ಕೈಗೊಂಡಿಲ್ಲ. ಪೊಲೀಸರು ಸಿದ್ಧಪಡಿಸಿದ ಪಟ್ಟಿಯಲ್ಲಿ ಎಲ್ಲಾ ಸಮುದಾಯಗಳ ಅಪರಾಧ ಹಿನ್ನೆಲೆಯಿರುವವರು ಇದ್ದಾರೆ. ಕರಾವಳಿ ಪ್ರದೇಶದಲ್ಲಿ ಕೋಮು ದ್ವೇಷದ ಹಿಂಸಾಚಾರದ ಹಿಂದೆ ಅಕ್ರಮ ಮರಳು ಸಾಗಾಣೆದಾರರು, ಮಾದಕ ವಸ್ತುಗಳ ಮಾರಾಟಗಾರರು, ಸೆಕ್ಯೂರಿಟಿ ಏಜೆನ್ಸಿ ನಡೆಸುವವರು ಮುಂತಾದವರು ಇದ್ದಾರೆ ಎಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಕಾನೂನು ಸುವ್ಯವಸ್ಥೆಗೆ ಸವಾಲಾಗಿರುವ ಇಂತಹವರ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳಲು ಮುಂದಾದಾಗ ಪಕ್ಷಭೇದ ಬದಿಗೊತ್ತಿ ಎಲ್ಲರೂ ಬೆಂಬಲಿಸಬೇಕು.



# ವಿದ್ಯುತ್ ಉಳಿಸುವ ಸರಳೋಪಾಯಗಳು

ವಿಶ್ವಾಸ್.ಡಿ.ಗೌಡ

• ಉದಯವಾಹಿನಿ, ವಿಶೇಷ

**ರೆಫ್ರಿಜರೇಟರ್:** ನಮ್ಮ ಅಗತ್ಯಕ್ಕೆ ಬೇಕಾಗುವಷ್ಟು ದೊಡ್ಡ, ನಮಗೆ ಯೋಗ್ಯವಾದ ರೆಫ್ರಿಜರೇಟರ್ ಆಯ್ದುಕೊಳ್ಳುವುದು. ಪ್ರಾಸ್ಟ್ ಫ್ರೀ ರೆಫ್ರಿಜರೇಟರ್‌ಗಳಲ್ಲಿ ವಿದ್ಯುತ್ ಬಳಕೆ ತುಲನಾತ್ಮಕವಾಗಿ ಹೆಚ್ಚು. ಆದ್ದರಿಂದ ಅಗತ್ಯವಿದ್ದರೆ ಮಾತ್ರ ಅಂತಹದ್ದನ್ನು ಉಪಯೋಗಿಸಿ. ತಂಪಾಗಿಸುವ ಸಮಯದಲ್ಲಿ ಉತ್ಪತ್ತಿಯಾಗುವ ಶಾಖವನ್ನು ಕಂಡೆನ್ಸರ್ ಕಾಯಿಲ್ ಮೂಲಕ ಬಿಡುಗಡೆ ಮಾಡಲಾಗುತ್ತದೆ. ಸಾಕಷ್ಟು ಗಾಳಿಯ ಸಂಪರ್ಕಕ್ಕಾಗಿ ಗೋಡೆಯಿಂದ 15 ಸೆಂ.ಮೀ. ದೂರದಲ್ಲಿ ರೆಫ್ರಿಜರೇಟರ್ ಇರಲಿ, ಕಂಡನ್ಸರ್ ಕಾಯಿಲ್‌ನಲ್ಲಿ ಅಂಟಿಕೊಂಡಿರುವ ಧೂಳನ್ನು ಒರೆಸಿ ಸ್ವಚ್ಛಗೊಳಿಸುತ್ತಿರ ಬೇಕು. ರೆಫ್ರಿಜರೇಟರ್‌ನ ಬಾಗಿಲು ಭದ್ರವಾಗಿ ಮುಚ್ಚಿರಬೇಕು.

ಅದಕ್ಕಾಗಿ ಎರಡು ಬದಿಯ ರಬ್ಬರ್ ಬೀಡಿಂಗ್‌ಗಳನ್ನು ಕಾಲ ಕಾಲಕ್ಕೆ ಪರೀಕ್ಷಿಸಿ ಹಳತಾದರೆ ಬದಲಿಸಬೇಕು. ರೆಫ್ರಿಜರೇಟರ್‌ನ ಒಳಗಿನ ಆಹಾರಗಳು ಶೈತ್ರೀಕರಣ ಗೊಳ್ಳಲು ಅಗತ್ಯಾನುಸಾರ ತರ್ಮೋಸ್ಟಾಟ್ ಸೆಟ್ ಮಾಡಬೇಕು ಮತ್ತು ಸರಿಯಾಗಿ ಅದು ಕಾರ್ಯ ನಿರ್ವಹಿಸುತ್ತಿದೆಯೇ ಎಂದು ಖಾತ್ರಿಪಡಿಸಬೇಕು.

ಫ್ರಿಜ್‌ನಲ್ಲಿ ಆಹಾರಗಳನ್ನು ಮುಚ್ಚಿದ ಪಾತ್ರೆಗಳಲ್ಲಿ ಇರಿಸಬೇಕು. ಇಲ್ಲದಿದ್ದರೆ ತೇವಾಂಶವು ಫ್ರಿಜ್‌ನ ಒಳಗೆ ಹರಡುತ್ತದೆ ಮತ್ತು ವಿದ್ಯುತ್ ಉಪಯೋಗ ಹೆಚ್ಚುತ್ತದೆ.

ಬಿಸಿಯಾದ ಆಹಾರಗಳನ್ನು ಫ್ರಿಜ್‌ನಲ್ಲಿ ಇರಿಸಬಾರದು.

ಫ್ರೀಝರ್‌ನಲ್ಲಿ ಐಸ್‌ನ ಹೆಪ್ಪುಗಟ್ಟುವಿಕೆಯು ವಿದ್ಯುತ್ ನಷ್ಟಕ್ಕೆ ಕಾರಣವಾಗುತ್ತದೆ. ಆದ್ದರಿಂದ ಡೀಫ್ರೋಸ್ಟರ್‌ನ ಕಾರ್ಯಕ್ಷಮತೆಯನ್ನು ಖಚಿತಪಡಿಸಿಕೊಳ್ಳಬೇಕು.

ಸಂಜೆ 6ರಿಂದ 10ರ ವರೆಗೆ ಫ್ರಿಜ್ ಆಫ್ ಮಾಡಿಡುವುದು ಉತ್ತಮ, ಆಫ್ ಮಾಡಿಟ್ಟರೆ ಪುನಃ ಆನ್ ಮಾಡುವಾಗ ವಿದ್ಯುತ್ ಉಪಯೋಗ ಹೆಚ್ಚುತ್ತದೆಂಬುದು ತಪ್ಪುಧಾರಣೆಯಾಗಿದೆ.

ಉಪಯೋಗಕ್ಕೆ ಅನುಗುಣವಾಗಿ ಡಬಲ್ ಡೋರ್' ರೆಫ್ರಿಜರೇಟರ್ ಮುಚ್ಚುವುದು ಮಾಡಬೇಡಿ.

ಫ್ರಿಜ್ ನಿಂದ ತೆಗೆಯುವ ಸಾಧನಗಳು ಒಟ್ಟಿಗೆಯೇ ಹೊರ ತೆಗೆದು, ಒಳಗಿರಿಸ ಬೇಕಾದುದನ್ನು ಒಟ್ಟಿಗೆ ಒಳಗೆ ಇಡಿ. ಫ್ರಿಜ್‌ನಲ್ಲಿ ಆಹಾರ ಪದಾರ್ಥಗಳನ್ನು ತುಂಬಿಸಿ ಉಪಯೋಗಿಸುವುದರಿಂದ ವಿದ್ಯುತ್ ಖರ್ಚು ಹೆಚ್ಚು ಹೀಗೆ ತುಂಬಿಸಿಟ್ಟ ಫ್ರಿಜ್‌ನ ಒಳಗೆ ತಂಪಾದವಾಯು ಸಂಚಾರಕ್ಕೆ ಅಡ್ಡಿಯಾಗುವುದರಿಂದ ಆಹಾರ ವಸ್ತುಗಳು ಕೆಡುತ್ತದೆ. ಸ್ಟಾರ್ ರೇಟಿಂಗ್ ಹೆಚ್ಚಿರುವ ಫ್ರಿಜ್ ಖರೀದಿಸಿರಿ. ಒಳ್ಳೆಯ ಕ್ವಾಲಿಟಿಯಿರುವ ಫ್ರಿಜ್‌ಗೆ ವಿದ್ಯುತ್ ಕಡಿಮೆ ಅಳತೆಯಲ್ಲಿ ಸಾಕಾಗುತ್ತದೆ.

**ಇಸ್ತ್ರಿ ಪೆಟ್ಟಿಗೆ :** ಸ್ವಯಂ ಚಾಲಿತ ಕಟ್ ಆಫ್ ಇರುವ ಇಸ್ತ್ರಿ ಪೆಟ್ಟಿಗೆ ಉಪಯೋಗಿಸಿ. ಬಟ್ಟೆಗೆ ಅಗತ್ಯವಿರುವಷ್ಟುಮಾತ್ರ ಬಿಸಿಯನ್ನು ಹೊಂದಿಸಿಕೊಳ್ಳಿ. ಇಸ್ತ್ರಿ ಬಳಸುವಾಗ ಫ್ಯಾನ್ ಉಪಯೋಗಿಸಬೇಡಿ. ಶಾಖ ನಷ್ಟವಾಗುವುದನ್ನು ಉಳಿಸಬಹುದು. ದಿನಾಲೂ ಒಂದೋ ಎರಡೋ ವಸ್ತ್ರಕ್ಕೆ ಇಸ್ತ್ರಿ ಹಾಕುವುದಕ್ಕಿಂತ ವಾರಕ್ಕೊಮ್ಮೆ ಅಗತ್ಯವಿರುವ ವಸ್ತ್ರಗಳಿಗೆ ಇಸ್ತ್ರಿ ಮಾಡಿಡಿ.

**ತೊಳೆದ ವಸ್ತ್ರಗಳನ್ನು ಹಿಂಡದೆ:** ಒಣಗಿಸಿದರೆ ಇಸ್ತ್ರಿ ಪೆಟ್ಟಿಗೆಯ ಉಪಯೋಗ ಕಡಿಮೆಗೊಳಿಸಬಹುದು. ಬಟ್ಟೆಗಳನ್ನೆಲ್ಲಾ ಪಕ್ಕದಲ್ಲಿ ಇರಿಸಿದ ಬಳಿಕವೇ ಇಸ್ತ್ರಿ ಪೆಟ್ಟಿಗೆ ಆನ್ ಮಾಡಬೇಕು. ಇಸ್ತ್ರಿ ಹಾಕುವ ಮಧ್ಯೆ ಇತರ ಕೆಲಸ ಮಾಡುವುದನ್ನು ಬಿಟ್ಟು ಬಿಡಿ.

**ದೂರದರ್ಶನ :** ಟಿ.ವಿ.ಯ ಗಾತ್ರವು ದೊಡ್ಡದಾದಂತೆ ವಿದ್ಯುತ್ ಉಪಯೋಗವು ವರ್ಧಿಸುತ್ತದೆ ಎಂಬುದು ಮರೆಯದಿರಿ, ಕೋಣೆಯ ಅಳತೆಗೆ ಸರಿ ಹೊಂದುವಷ್ಟು ದೊಡ್ಡದಾದ ಟಿ.ವಿ. ಆಯ್ದುಕೊಳ್ಳಿ. ಸಿ.ಆರ್.ಟಿ. ಪರದೆಯ ಬದಲು ಎಲ್.ಸಿ.ಡಿ. ಸ್ಕಿನ್ ಇರುವ ಟಿವಿ ಬಳಸಿ 32 ಇಂಚಿನ ಒಂದು ಎಲ್.ಸಿ.ಡಿ. ಟೆಲಿವಿಜನ್ ಒಂದು ಗಂಟೆ ಕಾರ್ಯ ನಿರ್ವಹಿಸಲು ಗಂಟೆಗಳ 0.035 ಯೂನಿಟ್‌ಗಳ ವಿದ್ಯುತ್ ಬೇಕಾದರೆ, ಅದೇ ಗಾತ್ರದ ಸಿ.ಆರ್.ಟಿ. ಟಿ.ವಿ.ಗೆ 0.1 ಯೂನಿಟ್‌ಗಳ ಅಗತ್ಯವಿರುತ್ತದೆ. ಟಿ.ವಿ.ಯನ್ನು ನಿರಂತರವಾಗಿ ಉಪಯೋಗಿಸಬೇಡಿ. ಟಿ.ವಿ. ರಿಮೋಟ್ ಮಾತ್ರ ಬಂದ್ ಮಾಡದೆ ಸ್ವಿಚ್ಚನ್ನು ಆಫ್ ಮಾಡಿ.

**ಗ್ರೈಂಡರ್ :** ಅಕ್ಕಿ ಮತ್ತು ಉದ್ದಿನಬೇಳೆ ಯಂತವುಗಳನ್ನು ನೆನಸಿಯೇ ಅದು ಬೇಕು. 2 ಗಂಟೆಯಷ್ಟು ಹೊತ್ತು ನೀರಿನಲ್ಲಿ ನೆನಸಿಟ್ಟರೆ 15% ವಿದ್ಯುತ್ ಉಳಿತಾಯವಾಗುತ್ತದೆ.

ಗ್ರೈಂಡರ್‌ಗೆ ಅಗತ್ಯಕ್ಕಿಂತ ಹೆಚ್ಚು ಅಕ್ಕಿಯನ್ನೋ ಇನ್ನಿತರ ವಸ್ತುಗಳನ್ನೊ ಹಾಕಬೇಡಿ. ಬೇಕಾದಾಗ ಸ್ವಲ್ಪ ಸ್ವಲ್ಪ ನೀರು ಸೇರಿಸುವುದು ಉತ್ತಮ.

**ವಾಶಿಂಗ್ ಮೆಶಿನ್:** ನೀರನ್ನು ಬಿಸಿ ಮಾಡಿ ಬಳಸುವುದರಿಂದ ವಾಶಿಂಗ್ ಮಿಶನ್ನ ವಿದ್ಯುತ್ ವೆಚ್ಚ ಹೆಚ್ಚಾಗುತ್ತದೆ. ಫ್ರೆಂಟ್ ಲೋಡ್‌ವಾಶಿಂಗ್ ಮಿಶನ್ ಕಾರ್ಯಕ್ಷಮತೆ ಹೆಚ್ಚು ಮತ್ತು ಸ್ವಲ್ಪ ನೀರು ಸಾಕಾಗುವುದರೊಂದಿಗೆ ವಿದ್ಯುತ್ ವೆಚ್ಚವೂ ಕಡಿಮೆಯಾಗುತ್ತದೆ. ತೊಳೆಯುವಾಗ ಯಂತ್ರದ ಸಂಪೂರ್ಣ ಸಾಮರ್ಥ್ಯವನ್ನು ಬಳಸಿ. ಬಿಸಿಲಿರುವಾಗ ಸಿನ್ ಮಾಡದೆ ಹೊರಗೆ ಒಣಗಿಸಿದರೆ ವಿದ್ಯುತ್ ಉಳಿತಾಯ. ವಾಷಿಂಗ್ ಮೆಶಿನ್‌ನ, ಬೆಲ್ಟ್ ಸಡಿಲವಾಗಿದೆಯೇ ಎಂದು ನಿಯ ರುಬ್ಬಲು ಬೇಕಾದಷ್ಟು ಮಿತವಾಗಿ ಪರಿಶೀಲಿಸುವುದು. ಕ್ರೊಮ್ಮೆ ಸರ್ವೀಸ್ ಮಾಡುವುದು ದಕ್ಷತೆಯನ್ನು ಹೆಚ್ಚಿಸುತ್ತದೆ.

**ಮಿಕ್ಸರ್ ಗ್ರೈಂಡರ್**

ರುಬ್ಬಲು ಬೇಕಾದಷ್ಟು ನೀರನ್ನು ಮಾತ್ರ ಬಳಸಿ. ಜಾಡಿಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಸಾಮಗ್ರಿಗಳನ್ನು ತುಂಬಿಸಬೇಡಿ. ಓವರ್ ಲೋಡ್ ಆಗುವುದರಿಂದ ವಿದ್ಯುತ್ ವೆಚ್ಚ ಹೆಚ್ಚಾಗುತ್ತದೆ. ಮಿಕ್ಸಿಯನ್ನು ನಿರಂತರವಾಗಿ ಹೆಚ್ಚು ಸಮಯ ತಿರುಗಿಸಬೇಡಿ. ವೇಗದಲ್ಲಿರುಬ್ಬಲು ಆರಂಭಿಸಿ. ಪ್ರಮಾಣಿತ ವಿರುವ ಐ.ಎಸ್.ಐ ಮಾರ್ಕ್ ಇರುವ ಮಿಕ್ಸಿಯನ್ನು ಮಾತ್ರ ಉಪಯೋಗಿಸಿ. ಕಾಲಕಾಲಕ್ಕೆ ಬ್ಲೇಡುಗಳನ್ನು ಹರಿತಗೊಳಿಸುವುದು ಅಥವಾ ಬದಲಿಸುವುದು ಒಳ್ಳೆಯದು.



# ಜ್ಯೇಷ್ಠ ಪೂರ್ಣಿಮಾ ಅಥವಾ ಹುಣ್ಣಿಮೆಗೆ ಅಪಾರ ಮಹತ್ವವಿದೆ!!

• ಉದಯವಾಹಿನಿ, ವಿಶೇಷ

**ಜ್ಯೇಷ್ಠ ಪೂರ್ಣಿಮಾ ಮಹತ್ವ:** ಹಿಂದೂ ಧರ್ಮದಲ್ಲಿ ಜ್ಯೇಷ್ಠ ಪೂರ್ಣಿಮಾ ಅಥವಾ ಹುಣ್ಣಿಮೆಗೆ ಅಪಾರ ಮಹತ್ವವಿದೆ. ಧಾರ್ಮಿಕ, ಆಧ್ಯಾತ್ಮಿಕ ಚಟುವಟಿಕೆಗಳನ್ನು ಮಾಡಲು ಪೂರ್ಣಿಮಾವನ್ನು ಮಂಗಳಕರ ದಿನವೆಂದು ಪರಿಗಣಿಸಲಾಗುತ್ತದೆ. ಜ್ಯೇಷ್ಠ ಮಾಸದ ಪೂರ್ಣಿಮಾ ದಿನವನ್ನು ಜ್ಯೇಷ್ಠ ಪೂರ್ಣಿಮಾ ಎಂದು ಕರೆಯಲಾಗುತ್ತದೆ. ವರ್ಷದ ಎಲ್ಲಾ ಹುಣ್ಣಿಮೆಗೂ ವಿಶೇಷ ಮಹತ್ವವಿದೆ. ಆದರೆ ಜ್ಯೇಷ್ಠ ಪೂರ್ಣಿಮಾ ಸಾಕಷ್ಟು ವಿಶೇಷ ಮಹತ್ವವನ್ನು ಹೊಂದಿದೆ. ಈ ಪೂರ್ಣಿಮಾ ದಿನದಂದು ಉಪವಾಸವನ್ನು ಆಚರಿಸಲಾಗುತ್ತದೆ. ಇದರೊಂದಿಗೆ ಈ ಪೂರ್ಣಿಮಾದಂದು ಚಂದ್ರ ದೇವನನ್ನು ಸಹ ಪೂಜಿಸುವರು.ಈ ವರ್ಷದ ಜ್ಯೇಷ್ಠ ಪೂರ್ಣಿಮಾ ತಿಥಿಯು ಜೂನ್ 10 ರ ಮಂಗಳವಾರ ಬೆಳಗ್ಗೆ 11:35 ಕ್ಕೆ ಪ್ರಾರಂಭವಾಗಿ ಜೂನ್ 11ರ ಬುಧವಾರ ಮಧ್ಯಾಹ್ನ 1.13ಕ್ಕೆ ಕೊನೆಗೊಳ್ಳಲಿದೆ. ಹಾಗಾಗಿ ಉದಯ ತಿಥಿಯ ಪ್ರಕಾರ ಜೂನ್ 11ರಂದು ಜ್ಯೇಷ್ಠ ಪೂರ್ಣಿಮಾ ಹಬ್ಬವನ್ನು ಆಚರಿಸಲಾಗುತ್ತದೆ.

**ಜ್ಯೇಷ್ಠ ಪೂರ್ಣಿಮಾ ಮಹತ್ವ:** ಹಿಂದೂಗಳಲ್ಲಿ ಜ್ಯೇಷ್ಠ ಪೂರ್ಣಿಮಾ ವ್ರತಕ್ಕೆ ಹೆಚ್ಚಿನ ಮಹತ್ವವಿದೆ. ಜ್ಯೇಷ್ಠ ಮಾಸದಲ್ಲಿ ಬರುವ ಪೂರ್ಣಿಮಾ ತಿಥಿಯು ಅತ್ಯಂತ ಮಂಗಳಕರವಾಗಿದೆ. ಜ್ಯೇಷ್ಠ ಎಂದರೆ ಹಿರಿಯ ಅಂದರೆ, ವಿಷ್ಣು ಎಂದು ಪರಿಗಣಿಸಲಾಗುತ್ತದೆ. ಅವರನ್ನು ಜ್ಯೇಷ್ಠ ಶ್ರೇಷ್ಠ ಪ್ರಜಾಪತಿ ಎಂದು ಕರೆಯಲಾಗುತ್ತದೆ. 3 ಲೋಕಗಳನ್ನು ಗೆದ್ದವನಾದ ತ್ರಿವಿಕ್ರಮನ ರೂಪದಲ್ಲಿ ಈ ಮಾಸದ ಪರಮ ಪ್ರಭುವಾಗಿ ವಿಷ್ಣುವನ್ನು ಪೂಜಿಸಲಾಗುತ್ತದೆ. ಕಠಿಣ ತಪಸ್ಸಿನ ನಂತರ ಗಂಗಾ ದೇವಿಯು ಭೂಮಿಗೆ ಇಳಿದ ಪವಿತ್ರ ಮಾಸವಿದು. ಜ್ಯೇಷ್ಠ ಪೂರ್ಣಿಮೆಯ ದಿನದಂದು ಜನರು ವಿವಿಧ ಧಾರ್ಮಿಕ ಕಾರ್ಯಗಳನ್ನು ಮಾಡುತ್ತಾರೆ. ಅವರು ಗಂಗಾ ನದಿಯಂತಹ ಪವಿತ್ರ ಸ್ಥಳಗಳಲ್ಲಿ ಸ್ನಾನ ಮಾಡಲು ವಿವಿಧ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡುತ್ತಾರೆ. ಭಗವಾನ್ ವಿಷ್ಣುವಿಗೆ ಪ್ರಾರ್ಥನೆ ಸಲ್ಲಿಸಿ ಲಕ್ಷ್ಮೀ ನಾರಾಯಣ ದೇವಾಲಯಗಳಿಗೆ ಭೇಟಿ ನೀಡಬೇಕು. ಈ ದಿನ ದೇವರಿಗೆ ಅರ್ಘ್ಯವನ್ನು ಅರ್ಪಿಸಿ ಚಂದ್ರನನ್ನು ಪೂಜಿಸಲಾಗುತ್ತದೆ. ಕೆಲವರು ಬ್ರಾಹ್ಮಣರಿಗೆ ಮತ್ತು ನಿರ್ಗತಿಕರಿಗೆ ಆಹಾರ ಮತ್ತು ಬಟ್ಟೆಗಳನ್ನು ನೀಡುತ್ತಾರೆ. ಜ್ಯೇಷ್ಠ ಪೂರ್ಣಿಮೆಯಂದು ಆಲದ ಮರವನ್ನು ಪೂಜಿಸುವುದು ಅತ್ಯಂತ ಮಂಗಳಕರವೆಂದು ಪರಿಗಣಿಸಲಾಗಿದೆ ಭಕ್ತರು ಮರಕ್ಕೆ ನೀರನ್ನು ಅರ್ಪಿಸಬೇಕು, 108 ಬಾರಿ ಪ್ರದಕ್ಷಿಣೆ ಹಾಕಬೇಕು.

**ಜ್ಯೇಷ್ಠ ಪೂರ್ಣಿಮಾ ಆಚರಣೆಗಳು:** ಬೆಳಿಗ್ಗೆ ಬೇಗ ಎದ್ದು ಗಂಗಾ ನದಿಯಲ್ಲಿ ಸ್ನಾನ ಮಾಡಿ. ಭಗವಾನ್ ವಿಷ್ಣುವಿಗೆ ಪ್ರಾರ್ಥನೆ ಸಲ್ಲಿಸಿ. ಭಕ್ತರು ಆಲದ ಮರವನ್ನು ಪೂಜಿಸಿ ಆಶೀರ್ವಾದ ಪಡೆಯಬೇಕು.ಆಲದ ಮರದಲ್ಲಿನ ಅಮರತ್ವದ ಕಾರಣದಿಂದಾಗಿ ಈ ಮರವನ್ನು ಅಕ್ಷಯ ವಟ ಎಂದು ಕರೆಯಲಾಗುತ್ತದೆ. ಆದ್ದರಿಂದ ಒಬ್ಬರು ಮರಕ್ಕೆ ಪ್ರಾರ್ಥನೆ ಸಲ್ಲಿಸಬೇಕು. ದೇವಾಲಯಗಳಿಗೆ ಭೇಟಿ ನೀಡುವುದು, ಭಗವಾನ್ ವಿಷ್ಣುವಿಗೆ ಪ್ರಾರ್ಥನೆ ಸಲ್ಲಿಸುವುದು, ಚಂದ್ರನ ಆರಾಧನೆ , ಯಜ್ಞ ಮತ್ತು ಹವನದಂತಹ ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅತ್ಯಂತ ಮಂಗಳಕರವೆಂದು ಪರಿಗಣಿಸಲಾಗಿದೆ. ಜನರು ಬ್ರಾಹ್ಮಣರಿಗೆ ವಸ್ತ್ರ ಅನ್ನದಾನ ಮಾಡಿ ಅವರಿಂದ ಆಶೀರ್ವಾದ ಪಡೆಯಬೇಕು.

**ಜ್ಯೇಷ್ಠ ಪೂರ್ಣಿಮಾ ಮಂತ್ರ:** ಓಂ ನಮೋ ಭಗವತೇ ವಾಸುದೇವಯೇ ಓಂ ನಮೋ ನಾರಾಯಣಾಯ

**ಜ್ಯೇಷ್ಠ ಪೂರ್ಣಿಮಾದಂದು ಆಲದ ಮರವನ್ನು ಪೂಜಿಸುವುದರ ಮಹತ್ವ:** ಜ್ಯೇಷ್ಠ ಪೂರ್ಣಿಮೆಯಂದು, ಮಹಿಳೆಯರು ಸೂರ್ಯೋದಯಕ್ಕೆ ಮುಂಚೆಯೇ ಎದ್ದು, ಪವಿತ್ರ ನೀರಿನಲ್ಲಿ ಸ್ನಾನ ಮಾಡಬೇಕು. ಈ ದಿನ ಆಲದ ಮರವನ್ನು ಪೂಜಿಸಿ, ವ್ರತವನ್ನು ಪ್ರಾರಂಭಿಸಬೇಕು. ಆಲದ ಮರವನ್ನು ಶ್ರೀಗಂಧ ಅರಿಶಿನದ ಪೇಸ್ಟ್‌ನೊಂದಿಗೆ ಪೂಜಿಸಬೇಕು. ಸಿಹಿ ತಿಂಡಿಗಳನ್ನು ಆಲದ ಮರಕ್ಕೆ ಈ ದಿನ ಅರ್ಪಿಸಬೇಕು.

# ಮುಖದ ಕಪ್ಪುಕಲೆ ಮೊಡವೆಗಳ ಸಮಸ್ಯೆ ಕಡಿಮೆ ಆಗುತ್ತಾ ಬರುತ್ತೆ

ಆಲೂಗಡ್ಡೆ ಬಳಸಿಕೊಂಡು ಮುಖದ ಮೇಲಿನ ಕಪ್ಪು ಕಲೆಗಳನ್ನು, ಮೊಡವೆಗಳ ಸಮಸ್ಯೆಯನ್ನು ನೈಸರ್ಗಿಕವಾಗಿ ನಿವಾರಣೆ ಮಾಡಿಕೊಳ್ಳಬಹುದು. ಪ್ರಮುಖವಾಗಿ ಆಲೂಗಡ್ಡೆಯಲ್ಲಿ ಕಂಡು ಬರುವ ವಿಟಮಿನ್ ಸಿ ಅಂಶವು, ತ್ವಚೆಯ ಮೇಲಿನ ಸಮಸ್ಯೆಗಳನ್ನು ಹೋಗಲಾಡಿಸಿ, ಸೌಂದರ್ಯವನ್ನು ಹೆಚ್ಚಿಸಲು ನೆರವಿಗೆ ಬರುತ್ತದೆ.. ಪ್ರತಿಯೊಬ್ಬರಿಗೂ ಆಸೆ ಇರುತ್ತದೆ, ತಮ್ಮ ತ್ವಚೆಯು ಯಾವಾಗಲೂ ಕಾಂತಿಯುತವಾಗಿ ಮತ್ತು ಯೌವನದಿಂದ ಕೂಡಿರಬೇಕು, ಮುಖದ ಮೇಲೆ ನೆರಿಗೆ ಸುಕ್ಕು, ಮೊಡವೆ ಹಾಗೂ ಇದರಿಂದ ಕಂಡು ಬರುವ ಕಲೆಗಳು ಮುಖದ ಮೇಲೆ ಕಾಣಿಸಿಕೊಳ್ಳಬಾರದು, ಆದರೆ ಕಾಲಕ್ರಮೇಣ ಚರ್ಮದ ಮೇಲೆ ಸುಕ್ಕು ನೆರಿಗೆಯ ಸಮಸ್ಯೆಗಳು ಕಾಣಿಸಿಕೊಳ್ಳಲು ಶುರುವಾಗಿ ಬಿಡುತ್ತದೆ. ಎಷ್ಟೇ ಜಾಗರೂಕತೆ ವಹಿಸಿದರೂ ಕೂಡ ಮುಖದ ಮೇಲೆ ಕಪ್ಪು ಕಲೆಗಳು, ಮೊಡವೆಗಳು, ಇದ್ದಕ್ಕಿದಂತೆ ಮುಖದ ಮೇಲಿನ ಚರ್ಮವು ಸಡಿಲವಾಗುವುದು ಇವೆಲ್ಲಾ ತ್ವಚೆಗೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳಲು ಶುರುವಾಗುತ್ತವೆ ಹಾಗಂತ ಇಂತಹ ಸಮಸ್ಯೆಗಳಿಗೆಲ್ಲಾ ದುಬಾರಿ ಹಣ ಖರ್ಚು ಮಾಡುವ ಬದಲು ನೈಸರ್ಗಿಕವಾಗಿ ಸುಂದರವಾದ ಚರ್ಮವನ್ನು ಪಡೆಯಲು ಆಲೂಗಡ್ಡೆ ರಸವನ್ನು ಒಮ್ಮೆ ಟ್ರೈ ಮಾಡಿ ನೋಡಿ

**ಆಲೂಗಡ್ಡೆ ರಸದ ಬಗ್ಗೆ ನೋಡುವುದಾದರೆ:** ಆಲೂಗಡ್ಡೆ ರಸದ ಬಗ್ಗೆ ಹೇಳುವುದಾದರೆ, ಇದರಲ್ಲಿ ವಿಟಮಿನ್ ಸಿ ಅಂಶ ಯಥೇಚ್ಛವಾಗಿ ಕಂಡು ಬರುತ್ತದೆ. ಅಲ್ಲದೆ ಇದರಲ್ಲಿ ಕಂಡು ಬರುವ ಪ್ರಬಲ ಆಂಟಿ ಆಕ್ಸಿಡೆಂಟ್ ಅಂಶಗಳು, ಮುಖದ ಮೇಲಿನ ಪಿಗ್ಮೆಂಟೇಶನ್ ಮತ್ತು ಕಪ್ಪು ಕಲೆಗಳನ್ನು ಹೋಗಲಾಡಿಸುವುದರ ಜೊತೆಗೆ ಮೊಡವೆಯ ಸಮಸ್ಯೆಯನ್ನು ನಿಯಂತ್ರಣ ಮಾಡಿ, ಮುಖದ ಅಂದವನ್ನು ಹೆಚ್ಚಿಸಲು ನೆರವಿಗೆ ಬರುತ್ತದೆ.

**ಮುಖದ ಮೇಲಿನ ಕಪ್ಪು ಕಲೆ ಹೋಗಲಾಡಿಸಲು :** ಈಗಾಗಲೇ ಹೇಳಿದ ಹಾಗೆ ಆಲೂಗಡ್ಡೆ ವಿಟಮಿನ್ ಸಿ ಯ ಸಮೃದ್ಧ ಮೂಲವಾಗಿದೆ. ಪ್ರಮುಖವಾಗಿ ಈ ವಿಟಮಿನ್ ತ್ವಚೆಯ ಕಾಂತಿಯನ್ನು ಹೆಚ್ಚಿಸಲು ನೆರವಾಗುವುದರ ಜೊತೆಗೆ ಮೆಲನಿನ್ ಉತ್ಪಾದನೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಮುಖ್ಯವಾಗಿ ಮುಖದ ಮೇಲಿನ ಕಪ್ಪು ಕಲೆಗಳನ್ನು ನಿವಾರಣೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

**ಹೀಗೆ ಮಾಡಿ:** ಮೊದಲಿಗೆ ಒಂದು ಬೌಲ್‌ನಲ್ಲಿ ಎರಡು ಟೇಬಲ್ ಚಮಚದಷ್ಟು ಆಲೂಗಡ್ಡೆ ರಸವನ್ನು ಹಾಕಿ, ಆಮೇಲೆ ಇದಕ್ಕೆ ಒಂದು ಟೇಬಲ್ ಚಮಚದಷ್ಟು ನಿಂಬೆ ರಸವನ್ನು ಸೇರಿಸಿಕೊಂಡು ಮಿಕ್ಸ್ ಮಾಡಿಕೊಳ್ಳಿ. ಆಮೇಲೆ ಈ ಮಿಶ್ರಣವನ್ನು, ಮುಖಕ್ಕೆ ದಪ್ಪಗೆ ಹಚ್ಚಿ 15 ನಿಮಿಷಗಳ ಕಾಲ ಬಿಟ್ಟು ನೀರಿನಿಂದ ತೊಳೆಯಿರಿ. ಉತ್ತಮ ಫಲಿತಾಂಶಕ್ಕೆ ಈ ಮನೆಮದ್ದನ್ನು ವಾರದಲ್ಲಿ ಮೂರು-ನಾಲ್ಕು ಬಾರಿಯಾದರೂ ಪ್ರಯತ್ನಿಸಿ. **ವಯಸ್ಸಾಗುವ ಲಕ್ಷಣಗಳನ್ನು ಕಡಿಮೆ ಮಾಡುತ್ತದೆ :** ಆಲೂಗಡ್ಡೆ ರಸದಲ್ಲಿ ಕಂಡುಬರುವ ಫ್ಲೇವನಾಯ್ಡ್‌ಗಳಂತಹ ಆಂಟಿ ಆಕ್ಸಿಡೆಂಟ್ ಅಂಶಗಳು ಆಕ್ಸಿಡೇಟಿವ್ ಒತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತವೆ. ಆಕ್ಸಿಡೇಟಿವ್ ಒತ್ತಡವು ಅಕಾಲಿಕ ವಯಸ್ಸಾಗುವಿಕೆ ಮತ್ತು ವರ್ಣದ್ರವ್ಯದ ಸಮಸ್ಯೆಗಳಿಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಆಲೂಗಡ್ಡೆ ರಸವು ಫ್ರೀರ್ಯಾಡಿಕ್ಸ್ ವಿರುದ್ಧ ಹೋರಾಡುವ ಜೊತೆಗೆ ಹೊಸದಾದ ಕಪ್ಪು ಕಲೆಗಳ ರಚನೆಯನ್ನು ತಡೆಯಲು ಸಹಾಯ ಮಾಡುತ್ತದೆ .

**ಹೀಗೆ ಮಾಡಿ:** ಒಂದು ಬೌಲ್‌ನಲ್ಲಿ ಎರಡು ಟೇಬಲ್ ಚಮಚದಷ್ಟು ಆಲೂಗಡ್ಡೆ ರಸಕ್ಕೆ, ಎರಡು ಟೇಬಲ್ ಚಮಚದಷ್ಟು ಮೊಸರನ್ನು ಹಾಕಿ ಸರಿಯಾಗಿ ಮಿಶ್ರಣ ಮಾಡಿ, ದಪ್ಪಗೆ ಪೇಸ್ಟ್ ರೀತಿ ಮಾಡಿಕೊಂಡು, ಮುಖಕ್ಕೆ ಹಚ್ಚಿಕೊಳ್ಳಿ ಮತ್ತು ಒಣಗಲು ಬಿಡಿ. ಆಬಳಿಕ ಸುಮಾರು 15 ನಿಮಿಷಗಳವರೆಗೆ ಹಾಗೆ ಬಿಡಿ ಮತ್ತು ಮುಖವನ್ನು ತಣ್ಣೀರಿನಿಂದ ತೊಳೆದುಕೊಳ್ಳಿ.



# ರಾಮಾಯಣ



ಭರತನು ಕೈಕೇಯಿ ದೇವಿಯ ಮೇಲೆ ಕೋಪಿಸಿದ್ದು

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ದಶರಥರಾಯನನ್ನು ಪುತ್ರವಿಯೋಗದಿಂದ ಕೊಲ್ಲುವುದಕ್ಕೆ ಆ ರಾಯನು ನಿನಗೆ ಮಾಡಿದ ಅಪರಾಧವೇನು ಶ್ರೀರಾಮನನ್ನು ವನಕ್ಕೆ ಹೊರಡಿಸುವುದಕ್ಕೆ ಆತನು ನಿನಗೆ ಮಾಡಿದ ಉಪದ್ರವವೇನು ನೀನು ಇಕ್ಷ್ವಾಕುವಂಶವನ್ನು ಕೆಡಿಸಿದೆ. ಆದ್ದರಿಂದ ನಿನಗೆ ಭ್ರೂಣಹತ್ಯಾ ಪಾಪವು ಸಂಭವಿಸುವುದು. ಇಂಥ ಪಾಪವನ್ನು ಮಾಡಿದ್ದರಿಂದ ನಿನ್ನ ಪತಿಯಾದ ದಶರಥರಾಯನು ಸೇರಿದ ಪುಣ್ಯಲೋಕವು ನಿನಗೆ ಲಭಿಸದು. ನೀನು ನರಕವನ್ನೈದುವೆ. ಸಮಸ್ತ ಲೋಕಗಳಿಗೂ ಪ್ರಿಯನಾದ ಶ್ರೀರಾಮನನ್ನು ಹೊರಡಿಸಿ ನನಗೆ ಅತ್ಯಂತ ದುಃಖವನ್ನುಂಟುಮಾಡಿದೆ. ನಿನ್ನ ಕೃತ್ಯದಿಂದ ದಶರಥರಾಯನು ಸ್ವರ್ಗಸ್ಥನಾದನು ಶ್ರೀರಾಮನು ದಂಡಕಾರಣ್ಯವನ್ನೈದಿದನು. ನಿನ್ನಿಂದ ನನಗೆ ಮಹತ್ತಾದ ಅಪಕೀರ್ತಿಯು ಬಂದಿತು. ಪಾಪಿಷ್ಠಳೆ, ನೀನು ನನಗೆ ಶತ್ರು. ಶ್ರೀರಾಮನ ತಾಯಿಯಾದ ಕೌಸಲ್ಯಾದೇವಿಯೂ ಸುಮಿತ್ರಾದೇವಿಯ ಮಿಕ್ಕ ದಶರಥರಾಯನ ಸ್ತ್ರೀಯರೂ ನಿನ್ನಿಂದ ಕೆಟ್ಟರು. ನೀನು ಸತ್ಯಸಂಧನೂ ಅತ್ಯಂತ ಜ್ಞಾನಿಯೂ ಆದ ಅಶ್ವಪತಿಗೆ ಯೋಗ್ಯಳಾದ ಮಗಳಲ್ಲ. ನನ್ನ ತಂದೆಯ ಕುಲವನ್ನು ಕೆಡಿಸಬೇಕೆಂದು ಹುಟ್ಟಿದ ರಾಕ್ಷಸಿ, ಅತ್ಯಂತ ಧರ್ಮಸ್ವರೂಪನೂ ಸತ್ಯಸಂಧನೂ ಅತಿಪರಾಕ್ರಮಿಯೂ ಆದ ಶ್ರೀರಾಮನನ್ನು ವನಕ್ಕೆ ಕಳುಹಿಸಿ ದಶರಥರಾಯನನ್ನು ಕಾಲನ ಮಂದಿರಕ್ಕೆ ಕಳುಹಿಸಿ ನನಗೆ ಪಿತೃವಿಯೋಗವನ್ನೂ ಜೇಷ್ಠಭ್ರಾತೃ ವಿಯೋಗವನ್ನೂ ಉಂಟುಮಾಡುವುದಕ್ಕೆ ನೀನು ಕಾರಣಳಾದೆ. ಧರ್ಮಸ್ವರೂಪಳಾದ ಕೌಸಲ್ಯಾದೇವಿಗೆ ಪುತ್ರವಿಯೋಗವನ್ನು ಮಾಡಿ ಯಾವ ಶ್ರೇಯಸ್ಸನ್ನು ಪಡೆದೆ ಎಲೈ ರಾಕ್ಷಸಿ, ಶ್ರೀರಾಮನಿಗೂ ನನಗೂ ಇರುವ ಸ್ನೇಹವನ್ನರಿಯದೆಹೋದೆ. ಕೌಸಲ್ಯಾದೇವಿಯ ಜೇಷ್ಠಪುತ್ರನಾದ ಆತನು ನನ್ನ ತಂದೆಗೆ ಸಮಾನನೆಂಬುದನ್ನರಿಯದೆಹೋದೆ. ಶ್ರೀರಾಮನು ಕೌಸಲಾದೇವಿಗೆ ಸಾಕ್ಷಾತ್ತಾಗಿ ಶರೀರದಲ್ಲಿ ಹುಟ್ಟಿದ ಪುತ್ರನು. ಅಂಥ ಮಗನ ವಿಯೋಗದಿಂದಾದ ಆ ದೇವಿಯ ದುಃಖವನ್ನು ಇಷ್ಟಷ್ಟೆಂದು ಹೇಳುವುದಕ್ಕೆ ಶಕ್ಯವೆ ಒಂದು ಸಲ ಕಾಮಧೇನುವಿನ ವಂಶದಲ್ಲಿ ಹುಟ್ಟಿದ ಎರಡು ಎತ್ತುಗಳು ಮಧ್ಯಾಹ್ನ ಪರಂತ ಉತ್ತು ಬಹಳವಾಗಿ ಬಳಲಿದ್ದರೂ ಕೃಷಿಕನು ಮತ್ತೂ ಉಳಿಸುತ್ತಿರಲು ಅವು ಅಧಿಕವಾಗಿ ಕಂಗೆಟ್ಟವು. ಆ ಎತ್ತುಗಳನ್ನು ಕಂಡು ಕಾಮಧೇನುವು ತನ್ನ ವಂಶದಲ್ಲಿ ಹುಟ್ಟಿದ ಎತ್ತುಗಳಿಗೆ ಅಂಥ ಅವಸ್ಥೆಯು ಬಂದಿತೆಂದು ದುಃಖದಿಂದ ಕಣ್ಣೀರು ಬಿಡುತ್ತಿರಲು ಕೆಳಗಡೆ ಆಕಾಶದಲ್ಲಿ ಸಂಚರಿಸುತ್ತಿದ್ದ ದೇವೇಂದ್ರನ ಶರೀರದ ಮೇಲೆ ಅತ್ಯಂತ ಪರಿಮಳಯುಕ್ತವಾದ ಆ ಕಣ್ಣೀರು ಬಿದ್ದಿತು. ದೇವೇಂದ್ರನು ಆ ಧೇನುವನ್ನು ಕಂಡು ಕೈ ಮುಗಿದು ಎಲೈ ಕಾಮಧೇನುವೆ, ನಾನೇನಾದರೂ ಅಪರಾಧಮಾಡಿದೆನೆ ? ನಿನಗೆ ಈ ದುಃಖವು ಹೇಗೆ ಬಂದಿತು ಸಮಸ್ತ ಲೋಕಗಳಿಗೂ ಹಿತವನ್ನು ಬಯಸುವ ನೀನು ರೋದನ ಮಾಡುವುದಕ್ಕೆ ಕಾರಣವೇನು ಎಂದು ಕೇಳಿದನು. ಕಾಮಧೇನುವು ದೇವೇಂದ್ರ, ನಿನ್ನಿಂದ ಉಪದ್ರವವುಂಟಾಯಿತೆಂದು ನಾನು ದುಃಖಿಸುತ್ತಿಲ್ಲ, ನನ್ನ ವಂಶದಲ್ಲಿ ಹುಟ್ಟಿದ ಎರಡು ಎತ್ತುಗಳು ಭೂಲೋಕದಲ್ಲಿ ದುರ್ಘಟವಾದ ಸ್ಥಳದಲ್ಲಿ ಸಿಕ್ಕಿ ಸರನ ಬಿಸಿಲಿನಿಂದ ಕಂಗೆಟ್ಟು ಬಿಡುಗಡೆಯಿಲ್ಲದೆ ಕೃಷಿಕನಿಂದ ದಯೆಯಿಲ್ಲದೆ ಹಿಂಸಿಸಲ್ಪಡುತ್ತಿವೆ.

ಮುಂದುವರಿಯುವುದು...

# ಕಾಲ್ತುಳಿತದಲ್ಲಿ ಮೃತಪಟ್ಟವರಿಗೆ ತಲಾ 5 ಕೋಟಿ ಪರಿಹಾರ ಕೊಡ್ಬೇಕು

• ಉದಯವಾಹಿನಿ, ಬೆಂಗಳೂರು

ಕಾಲ್ತುಳಿತದಲ್ಲಿ ಮೃತಪಟ್ಟ ಸಂತ್ರಸ್ತರ ಕುಟುಂಬಗಳಿಗೆ ತಲಾ 5 ಕೋಟಿ ಪರಿಹಾರ ಕೊಡುವಂತೆ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಆಗ್ರಹಿಸಿದ್ದಾರೆ. ಬೆಂಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್, ಆರ್‌ಸಿಬಿ ಫ್ರಾಂಚೈಸಿ ಹಾಗೂ ಕರ್ನಾಟಕ ಸರ್ಕಾರ ಸೇರಿ ಒಬ್ಬೊಬ್ಬ ಸಂತ್ರಸ್ತರ ಕುಟುಂಬಗಳಿಗೆ ತಲಾ ಐದು ಕೋಟಿ ರೂ ಪರಿಹಾರ ಜಾರಿಗೊಳಿಸಬೇಕು.

ಜೊತೆಗೆ ಗಾಯಗೊಂಡವರ ಜೀವನದ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ನಮ್ಮ ರಾಜ್ಯದಲ್ಲಿ ಮಾನವ ಹಕ್ಕುಗಳ ಆಯೋಗ ಅಂತ ಇದೆ, ಅದು ಈಗ ಮಾನವ ವಿರೋಧಿಗಳ ಆಯೋಗ ಆಗಿದೆ. ಈ ಪ್ರಕರಣದಲ್ಲಿ ಉನ್ನತ ಮಟ್ಟದ ತನಿಖೆ ಆಗಬೇಕು ಎಂದು ಒತ್ತಾಯಿಸಿದರಲ್ಲದೇ, ದಯಾನಂದ್ ಅವರನ್ನ ಅಮಾನತ್ತಿನಲ್ಲಿಟ್ಟಿರುವುದು ನಾಡಿನ ಜನತೆಗೆ ಹಾಗೂ ಇಡೀ ಪೊಲೀಸ್ ಇಲಾಖೆಗೆ ಮಾಡಿದ ಅಪಮಾನ ಎಂದು ವಾಗ್ದಾಳಿ ನಡೆಸಿದ್ದಾರೆ.

**ವಾಟಾಳ್ ನಾಗರಾಜ್ ಆಗ್ರಹ**



ಉದಯವಾಹಿನಿ ಚಿತ್ರ

# ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಆಗ್ರಹ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಮೀಸಲಾತಿಯನ್ನು ಶೇಕಡ 50ಕ್ಕೆ ಮಿತಿಗೊಳಿಸಿ ಆದೇಶಿಸಿದ್ದು, ಈ ಹಿನ್ನೆಲೆಯಲ್ಲಿ ಕಾಂತರಾಜು, ಜಯಪ್ರಕಾಶ್ ಹೆಗಡೆ ನೇತೃತ್ವದ ಸಾಮಾಜಿಕ, ಆರ್ಥಿಕ ಸಮೀಕ್ಷೆ ಕುರಿತ ವರದಿ ಅಪ್ರಸ್ತುವಾಗಿದೆ. ಹೀಗಾಗಿ ಈ ವರದಿಯನ್ನು ಸರ್ಕಾರ ತಿರಸ್ಕರಿಸಬೇಕು ಎಂದು ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಡಾ. ಗಾ.ನಂ. ಶ್ರೀಕಂಠಯ್ಯ, ಕಾಂತರಾಜು ಆಯೋಗ ವರದಿ ತಿರಸ್ಕರಿಸಿ ಎಲ್ಲಾ ವರ್ಗದ ಜನರಿಗೆ ನ್ಯಾಯ ದೊರಕಿಸಿಕೊಡಬೇಕು. ಆದರೆ ಕಾಂತರಾಜು, ಜಯಪ್ರಕಾಶ್ ಹೆಗಡೆ ಆಯೋಗ ಮೀಸಲಾತಿ ಪ್ರಮಾಣವನ್ನು ಶೇ 75 ಕ್ಕೆ ಹೆಚ್ಚಿಸುವಂತೆ ಶಿಫಾರಸ್ಸು ಮಾಡಿದ್ದು, ಇದರ ಅನುಷ್ಠಾನ ಕಾರ್ಯಸಾಧುವಲ್ಲ. ಇದೀಗ ಮೀಸಲಾತಿ ಪ್ರಮಾಣ ಹೆಚ್ಚಿಸಲು ಸಾಧ್ಯವಿಲ್ಲ ಎಂಬುದನ್ನು ಸರ್ಕಾರವೇ ತನ್ನ ಆದೇಶದ ಮೂಲಕ ಸ್ಪಷ್ಟಪಡಿಸಿದೆ. ಹೀಗಿರುವಾಗ ಯಾವ ಸಮುದಾಯದಿಂದ ಮೀಸಲಾತಿ ಕಸಿದು ಹಿಂದುಳಿದ ವರ್ಗಕ್ಕೆ ನೀಡುತ್ತೀರಿ ಎಂದು ಪ್ರಶ್ನಿಸಿದರು.

ಕೆಎಟಿ ಆದೇಶದಲ್ಲಿ ಸರ್ಕಾರಿ ನೇಮಕಾತಿಯಲ್ಲಿ ಶೇ 56ರಷ್ಟು ಮೀಸಲಾತಿ ನೀಡಿರುವ ಆದೇಶವನ್ನು 9 ನ್ಯಾಯಮೂರ್ತಿಗಳ ಪೀಠ ರದ್ದುಪಡಿಸಿ, ಮೀಸಲಾತಿ ಪ್ರಮಾಣವನ್ನು ಶೇ 50ಕ್ಕೆ ಮಿತಿಗೊಳಿಸಿ ಆದೇಶಿಸಿದೆ. **ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿಗಾಗಿ ಕೆಪಿಎಸ್ಸಿ ಹೊರಡಿಸಿರುವ ಅಧಿಸೂಚನೆಯನ್ನು ಸಹ ಭಾಗಶ:** ರದ್ದುಗೊಳಿಸಿ, ಮೀಸಲಾತಿಯನ್ನು ಶೇಕಡ 56 ರಿಂದ ಶೇಕಡ 50ಕ್ಕೆ ಇಳಿಸಿದೆ. ಹೀಗಿರುವಾಗ ಇದೇ ತಿಂಗಳ 12 ರಂದು ಜಾತಿ ಜನಗಣತಿ ಕುರಿತ ಚರ್ಚೆಗೆ ಕರೆದಿರುವ ವಿಶೇಷ ಸಚಿವ ಸಂಪುಟ ಸಭೆಯನ್ನು ರದ್ದು ಮಾಡಬೇಕು. ಅನಗತ್ಯವಾಗಿ ಸರ್ಕಾರದ ಹಣ, ಸಮಯವನ್ನು ವ್ಯರ್ಥ ಮಾಡಬಾರದು ಎಂದು ಹೇಳಿದರು. ಸರ್ಕಾರದ ಆದೇಶದಿಂದ ವರದಿ ಅನುಷ್ಠಾನ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿ ಎದುರಾಗಿದೆ. ಕುರುಬ ಸಮುದಾಯಕ್ಕೆ ಶೇ 103 ರಷ್ಟು ಮೀಸಲಾತಿ ಕಲ್ಪಿಸುವಂತೆ ವರದಿ ಶಿಫಾರಸ್ಸು ಮಾಡಿದ್ದು, ಇದು ಅತಿ ಹೆಚ್ಚಿನ ಪ್ರಮಾಣವಾಗಿದೆ. ಸಾಮಾಜಿಕ ನ್ಯಾಯ ದೊರಕಿಸಿಕೊಡುವ ಬಗ್ಗೆ ಚಾಂಪಿಯನ್ ರೀತಿ ಮಾತನಾಡುವ ಸಿದ್ದರಾಮಯ್ಯ ಅವರು ಇಷ್ಟೊಂದು ಸ್ವಜನಪಕ್ಷಪಾತಿಯಾಗಬಾರದು. ಬಹುತೇಕ ಎಲ್ಲಾ ಜಾತಿ, ಜನಾಂಗಗಳು ಕಾಂತರಾಜು ಆಯೋಗದ ವರದಿಯಲ್ಲಿ ತಪ್ಪುಗಳಿವೆ ಎಂದು ತಿಳಿಸಿವೆ. ಆದುದ್ದರಿಂದ ಸಂಶಯಾಸ್ಪದವಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ವರದಿ ಸಿದ್ಧಪಡಿಸಿರುವುದನ್ನು ಕೈಬಿಟ್ಟು, ಮತ್ತೊಮ್ಮೆ ವಿಶ್ವಾಸಯುತ ಸಮೀಕ್ಷೆ ನಡೆಸುವಂತೆ ಸರ್ಕಾರವನ್ನು ಒತ್ತಾಯಿಸಿದರು. ಕಾಂತರಾಜು ಆಯೋಗದ ವರದಿಯ ಸಮೀಕ್ಷೆಯು 2014-15ರಲ್ಲಿ ನಡೆದಿದ್ದು. ಈಗಾಗಲೇ 10 ವರ್ಷ ಪೂರ್ಣಗೊಂಡಿದೆ. ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದದಂತೆ ಪ್ರತಿ 10 ವರ್ಷಕ್ಕೊಮ್ಮೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿ ಅದರ ಆಧಾರದ ಮೇಲೆ ಮೀಸಲಾತಿ ನೀಡಬೇಕಾಗಿದೆ.

ಆದರೆ ಈಗಿನ ಕರ್ನಾಟಕ ಸರ್ಕಾರ ಕಾನೂನಿಗೆ ಯಾವುದೇ ಮಾನ್ಯತೆ ಕೊಡದೆ ಕಾಂತರಾಜು - ಜೆ.ಪಿ.ಹೆಗಡೆ ವರದಿಯನ್ನು ಅನುಷ್ಠಾನಗೊಳಿಸಲು ಹೊರಟಿರುವುದು ವಿಪರ್ಯಾಸ. ಸರ್ಕಾರವೇ ಕಾನೂನನ್ನು ಪಾಲಿಸದಿದ್ದಲ್ಲಿ ಇನ್ಯಾರು ಕಾನೂನನ್ನು ಪಾಲಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಒಕ್ಕಲಿಗರ ಸಂಘದ ಮಾಜಿ ಕಾರ್ಯದರ್ಶಿ ಎಂ.ಎ.ಆನಂದ್, ಸಂಘದ ಪ್ರಧಾನ ಕಾರ್ಯದರ್ಶಿ ಅಡಿಟರ್ ನಗರಾಜ್ ಯಲಚವಾಡಿ ಕಡಬಗೆರೆ ಒಕ್ಕಲಿಗರ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಸಿ.ಶಿವರಾಮು, ಒಕ್ಕಲಿಗ ಸಮಾಜದ ಮುಖಂಡರಾದ ರಂಗನರಸಿಂಹಯ್ಯ, ಮೇಲುಕೋಟೆ ಶಿವರಾಜು ಮತ್ತಿತರರು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

> ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ಆಡಿಟರ್ ನಾಗರಾಜ್ ಯಲಚವಾಡಿ ಮಾತನಾಡಿ, ಸವೀಕ್ಷೆಯಲ್ಲಿ ರಾಜ್ಯದ ಎಲ್ಲಾ ನಾಗರೀಕರ ಮಾಹಿತಿಯನ್ನು ಸಂಗ್ರಹಿಸಿಲ್ಲ. ಒಟ್ಟು ಜನಸಂಖ್ಯೆಯ ಶೇಕಡಾ 90 ರಷ್ಟು ಜನ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯದಲ್ಲಿ ಭಾಗಿಯಾಗಿದ್ದು, ಪೂರ್ಣ ಪ್ರಮಾಣದಲ್ಲಿ ಸಮೀಕ್ಷೆ ನಡೆದಿಲ್ಲ ಎಂದು ಸರ್ಕಾರವೇ ಒಪ್ಪಿಕೊಂಡಿದೆ. 10 ವರ್ಷಗಳಲ್ಲಿ ಜನಸಂಖ್ಯೆ ಏರಿಕೆಯಾಗಿದ್ದು, ಇತರೆ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯಲ್ಲಿ ಬಹಳಷ್ಟು ಬದಲಾವಣೆಯಾಗಿದೆ. 10 ವರ್ಷಗಳ ಹಿಂದಿನ ವರದಿ ಸ್ವೀಕರಿಸಿ ಮಾಡುವ ತೀರ್ಮಾನಗಳು ವಾಸ್ತವತೆಗಿಂತ ದೂರ ಇರಲಿವೆ ಎಂದರು.

● 2014ರಲ್ಲಿ 2 ಟ್ರಿಲಿಯನ್ ಡಾಲರ್ ಇದ್ದ ಭಾರತದ ಆರ್ಥಿಕತೆ ಈಗ 4.2 ಟ್ರಿಲಿಯನ್‌ಗೆ ಹೆಚ್ಚಾಗಿದೆ

# 11 ವರ್ಷಗಳಲ್ಲಿ ಬಲಿಷ್ಠ ಭಾರತಕ್ಕೆ ಅಡಿಪಾಯ: ಭಗವಂತ ಖೂಬಾ

• ಉದಯವಾಹಿನಿ ಬೀದರ್

ಕಳೆದ 11 ವರ್ಷಗಳ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರವು ಬಲಿಷ್ಠ ಭಾರತಕ್ಕೆ ಗಟ್ಟಿ ಅಡಿಪಾಯ ಹಾಕುವ ಕೆಲಸ ಮಾಡಿದೆ ಎಂದು ಬಿಜೆಪಿ ಮುಖಂಡರೂ ಆದ ಕೇಂದ್ರದ ಮಾಜಿಸಚಿವ ಭಗವಂತ ಖೂಬಾ ತಿಳಿಸಿದರು.

2047ರಲ್ಲಿ ವಿಕಸಿತ ಭಾರತ ಮಾಡುವುದು ಮೋದಿಯವರ ಗುರಿ. ಕಳೆದ 11 ವರ್ಷಗಳಲ್ಲಿ ಅನೇಕ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗಿದೆ.

**ಬಾಹ್ಯ ಶತ್ರುಗಳಿಂದ ದೇಶ ಸುರಕ್ಷಿತ**

ಇದರಲ್ಲಿ ರಾಮಮಂದಿರ ನಿರ್ಮಾಣ, ತ್ರಿವಳಿ ತಲಾಖ್, ಸಿಸಿಎ ಜಾರಿ, ಇಡೀ ದೇಶಕ್ಕೆ ಜಿಎಸ್‌ಟಿ ತೆರಿಗೆ ಪದ್ಧತಿ, ಸರ್ಜಿಕಲ್ ಸ್ಟ್ರೈಕ್, ಎನ್‌ಇಪಿ ಜಾರಿ, ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ, ಜಮ್ಮು ಕಾಶ್ಮೀರಕ್ಕೆ ಇದ್ದ ವಿಶೇಷ ಸ್ಥಾನಮಾನ ರದ್ದು, ಅಪರೇಷನ್ ಸಿಂಧೂರ ಪ್ರಮುಖವಾದವುಗಳು ಎಂದು ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ಬಡತನ ನಿರ್ಮೂಲನೆ, ಸ್ವಸ್ಥ ಭಾರತ, ಪ್ರತಿಯೊಬ್ಬರಿಗೂ ಸೂರು, ಮೂಲಸೌಕರ್ಯ ಹೆಚ್ಚಳ, ಉಡಾನ್ ಯೋಜನೆಯಡಿ ವಿಮಾನ ನಿಲ್ದಾಣಗಳ ಸಂಖ್ಯೆ ಹೆಚ್ಚಿಸಿ, ಪ್ರತಿಯೊಬ್ಬರಿಗೂ ವಿಮಾನ ಪ್ರಯಾಣದ ಕನಸು ನನಸು ಮಾಡಿದ್ದಾರೆ. ರೈಲು ನಿಲ್ದಾಣಗಳನ್ನು ಏರ್‌ಪೋರ್ಟ್ ಮಾದರಿಯಲ್ಲಿ ಅಭಿವೃದ್ಧಿಪಡಿಸಿದ್ದಾರೆ. 2014ರಲ್ಲಿ 2 ಟ್ರಿಲಿಯನ್ ಡಾಲರ್ ಇದ್ದ ಭಾರತದ ಆರ್ಥಿಕತೆ ಈಗ 4.2 ಟ್ರಿಲಿಯನ್‌ಗೆ ಹೆಚ್ಚಾಗಿದೆ. 10ನೇ ಸ್ಥಾನದಿಂದ 4ನೇ ಸ್ಥಾನಕ್ಕೆ ಭಾರತದ ಆರ್ಥಿಕತೆ ತಲುಪಿದೆ. ಶೀಘ್ರದಲ್ಲೇ 3ನೇ ಸ್ಥಾನಕ್ಕೆ ತಲುಪಲಿದೆ. ಇದೆಲ್ಲ ಸಾಧ್ಯವಾದದ್ದು ಮೋದಿಯವರ ಧೀಮಂತ ನಾಯಕತ್ವದಿಂದ ಎಂದು ಹೇಳಿದರು.

ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಆಂತರಿಕ ಹಾಗೂ ಬಾಹ್ಯ ಸುರಕ್ಷತೆಯ ಬಗ್ಗೆ ಅನುಮಾನಗಳಿದ್ದವು. ಈಗ ಆಂತರಿಕ ಹಾಗೂ ಬಾಹ್ಯ ಶತ್ರುಗಳಿಂದ ದೇಶ ಸುರಕ್ಷಿತವಾಗಿದೆ. ದೇಶ ಮೊದಲು ಎಂಬ ಭಾವನೆಯೊಂದಿಗೆ ಮೋದಿ ಸರ್ಕಾರವು ಹಲವಾರು ಯೋಜನೆಗಳನ್ನು ಘೋಷಿಸಿ, ಜಾರಿಗೆ ತಂದಿದೆ ಎಂದರು.

81 ಕೋಟಿ ಜನರಿಗೆ ಅನ್ನ ಯೋಜನೆ, 11 ವರ್ಷಗಳಲ್ಲಿ 4 ಕೋಟಿ ಜನರಿಗೆ ಪಕ್ಕಾ ಮನೆ, ಹಿರಿಯ ನಾಗರಿಕರಿಗೆ ಆಯುಷ್ಮಾನ್ ಯೋಜನೆ ವಿಸ್ತರಣೆ, 10.50 ಕೋಟಿ ಮನೆಗಳಿಗೆ ಅನಿಲ ಸಂಪರ್ಕ, 11 ಸಾವಿರ ರೈತರಿಗೆ ವಾರ್ಷಿಕ 3.34 ಲಕ್ಷ ಕೋಟಿ ನೇರ ಖಾತೆಗೆ ಜಮೆ ಮಾಡಿ, ಅವರ ಆದಾಯ ಹೆಚ್ಚಿಸಲು ಬಿಜೆಪಿ ಸರ್ಕಾರ ಕೆಲಸ ಮಾಡುತ್ತಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಎಂ.ಜಿ ಮುಳೆ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪೀರಪ್ಪ ಔರಾದೆ, ಮುಖಂಡರಾದ ಬಾಬುವಾಲಿ, ಮಾಧವ ಹಸುರೆ, ಜಗನ್ನಾಥ ಸಿರಕಟನಳ್ಳಿ, ಬಸವರಾಜ ಪವಾರ ಹಾಜರಿದ್ದರು.

'ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತ ಪ್ರಕರಣದಲ್ಲಿ 11 ಜನ ಅಮಾಯಕರು ಸಾವನ್ನಪ್ಪಿರುವ ಪ್ರಕರಣದಿಂದ ಕಾಂಗ್ರೆಸ್ ಹೈಕಮಾಂಡ್‌ಗೆ ನಾಚಿಕೆಯಾಗಿದ್ದು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯನ್ನು ನವದೆಹಲಿಗೆ ಕರೆಸಿಕೊಂಡಿದೆ ಎಂದು ಬಿಜೆಪಿ ಮುಖಂಡ ಭಗವಂತ ಖೂಬಾ ಟೀಕಿಸಿದರು.


ಉದಯವಾಹಿನಿ ಚಿತ್ರ

### ಪ್ರತಿ ಬೂತ್‌ಗೆ ಐದು ಸಸಿ

ಕೇಂದ್ರ ಸರ್ಕಾರ 11 ವರ್ಷಗಳು ಪೂರೈಸಿರುವುದು ಹಾಗೂ ಪರಿಸರ ದಿನಾಚರಣೆ ಅಂಗವಾಗಿ ಪಕ್ಷದಿಂದ ಪ್ರತಿ ಬೂತ್‌ನಲ್ಲಿ ಐದು ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಪಾಟೀಲ ತಿಳಿಸಿದರು. ಜೂನ್ 5ರಿಂದ ಸಸಿ ನೆಡುವ ಅಭಿಯಾನ ಆರಂಭಿಸಲಾಗಿದೆ. ಬೀಜದ ಉಂಡೆಗಳನ್ನು ಬಿತ್ತುವ ಕಾರ್ಯ ನಡೆಯುತ್ತಿದೆ. ಜೂನ್ 21ರಂದು ಯೋಗ ದಿನಾಚರಣೆ, ಜೂನ್ 23ರಂದು ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಬಲಿದಾನ ದಿನ, ಜೂನ್ 25ರಂದು ತುರ್ತು ಪರಿಸ್ಥಿತಿ ಕರಾಳ ದಿನ ಆಚರಿಸಲಾಗುವುದು ಎಂದರು.

### ದೇಶವ್ಯಾಪಿ ಅಭಿಯಾನ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು 11 ವರ್ಷಗಳಲ್ಲಿ ಮಾಡಿರುವ ಸಾಧನೆಗಳನ್ನು ಜನತೆಗೆ ತಿಳಿಸಲು ಜೂನ್ 9ರಿಂದ 21ರವರೆಗೆ ದೇಶವ್ಯಾಪಿ ಅಭಿಯಾನ ಹಮ್ಮಿಕೊಂಡಿದೆ' ಎಂದು ಬಿಜೆಪಿ ಮುಖಂಡ ಅಮರನಾಥ ಪಾಟೀಲ ವಿವರಿಸಿದರು. ಈ ಅಭಿಯಾನವು ವಿಕಸಿತ ಭಾರತದ ಅಮೃತ ಕಾಲ ಮತ್ತು ಸೇವೆ, ಸುಶಾಸನ, ಬಡವರ ಕಲ್ಯಾಣ ಕುರಿತಾಗಿ ಇರುತ್ತದೆ. ಭಾರತ ನನ್ನ ಅನುಭವ ಕುರಿತು ಡಿಜಿಟಲ್ ಸ್ಪರ್ಧೆ ಆಯೋಜಿಸಲಾಗಿದೆ. ನಮೋ ಆ್ಯಪ್‌ನಲ್ಲಿ ನೋಂದಣಿ ಮಾಡಿಸಬಹುದು. ಕಿರು ವಿಡಿಯೋ, ಬ್ಲಾಗ್, ರಸಪ್ರಶ್ನೆ ಸ್ಪರ್ಧೆ ಕೂಡ ಏರ್ಪಡಿಸಲಾಗಿದೆ ಎಂದರು.

### ಜಿಲ್ಲಾ ಕಾಂಗ್ರೆಸ್ ಸುಡುವ ಮನೆ

ಬೀದರ್ ಜಿಲ್ಲಾ ಕಾಂಗ್ರೆಸ್ ಸುಡುವ ಮನೆ ಆಗಿದೆ. ಅದು ಅವರ ಆಂತರಿಕ ವಿಚಾರವಾಗಿದ್ದು, ಅದರ ಬಗ್ಗೆ ಹೆಚ್ಚು ಮಾತನಾಡಲಾರೆ. ಆದರೆ, ಉಸ್ತುವಾರಿ ಸಚಿವರು ಅನುದಾನ ಸಮಾನವಾಗಿ ಹಂಚಿಕೆ ಮಾಡುತ್ತಿಲ್ಲ' ಎಂದು ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಆರೋಪಿಸಿದರು. ಕಾಂಗ್ರೆಸ್ ಪಕ್ಷದ ಶಾಸಕರಿಗೆ 20 ಕೋಟಿ ಅನುದಾನ ಹಂಚಿಕೆ ಮಾಡಿದ್ದಾರೆ. ಬಿಜೆಪಿ ಶಾಸಕರಿಗೆ 5 ಕೋಟಿ ಅನುದಾನ ನೀಡಿದ್ದಾರೆ.

---

## ಬಾವಿಗೆ ಸೇರುತ್ತಿರುವ ಒಳಚರಂಡಿ ನೀರು: ತಹಶೀಲ್ದಾರ್‌ಗೆ ದೂರು

• ಉದಯವಾಹಿನಿ ಭಟ್ಕಳ

ಪುರಸಭೆಯ ಅವೈಜ್ಞಾನಿಕ ಯುಜಿಡಿ ಕಾಮಗಾರಿಯಿಂದಾಗಿ ಪಟ್ಟಣದ ಆಸರಕೇರಿಯಲ್ಲಿ ಒಳಚರಂಡಿ ನೀರು ಸೋರಿಕೆಯಾಗಿ ಬಾವಿ ಸೇರಿ ನೀರು ಕಲುಷಿತಗೊಂಡಿದ್ದು, ಇದನ್ನು ಕುಡಿದ ಜನರು ಜ್ವರದಿಂದ ಆಸ್ಪತ್ರೆ ಸೇರುತ್ತಿದ್ದಾರೆ. ಈ ಬಗ್ಗೆ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿ ಆಸರಕೇರಿ ವಾರ್ಡ್‌ನ ಸಾರ್ವಜನಿಕರು ತಹಶೀಲ್ದಾರ್ ನಾಗೇಂದ್ರ ಕೊಳಶೆಟ್ಟಿ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಆಸರಕೇರಿಯಲ್ಲಿ ಅವೈಜ್ಞಾನಿಕ ಯುಜಿಡಿ ಕಾಮಗಾರಿಯಿಂದಾಗಿ ಒಳಚರಂಡಿ ನೀರು ಸೋರಿಕೆಯಾಗಿ ಗ್ರಾಮದ ಸುತ್ತಮುತ್ತಲಿನ ಬಾವಿಗಳು ಕಲುಷಿತಗೊಂಡಿವೆ. ಇದರಿಂದಾಗಿ ನಿತ್ಯ ನಾವು ಕುಡಿಯುವ ನೀರಿಗಾಗಿ ಅಲೆದಾಡುವ ಸ್ಥಿತಿ ಇದೆ. ಅದರ ಜೊತೆಗೆ ಕಳೆದ ಕೆಲವು ದಿನಗಳ ಹಿಂದೆ ಮಳೆ ಆರಂಭವಾದ ಮೇಲೆ ಒಳಚರಂಡಿ ನೀರು ತುಂಬಿ ಬಂದು ರಸ್ತೆಯ ಮೇಲೆ ಹರಿದು ಮಳೆ ನೀರಿನ ಜೊತೆ ಬಾವಿಗಳಿಗೆ ಸೇರುತ್ತಿದೆ. ಇದನ್ನು ಕುಡಿದ ಹಲವರು ಅಸ್ವಸ್ಥಗೊಂಡು ಜ್ವರ ಬಾಧೆಯಿಂದ ಬಳಲುತ್ತಿದ್ದಾರೆ. ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.


ಉದಯವಾಹಿನಿ ಚಿತ್ರ

ಆಸರಕೇರಿ ವಾರ್ಡ್ ಪ್ರತಿ ಮನೆಯ ಸದಸ್ಯರು ಜ್ವರದಿಂದ ಬಳಲುತ್ತಿದ್ದು, ಬಾವಿ ನೀರು ಕಲುಷಿತ ಗೊಂಡಿರುವುದೇ ಸಾಮೂಹಿಕ ಜ್ವರಕ್ಕೆ ಕಾರಣ ಎಂದು ಅನಿಸುತ್ತಿದೆ. ಈಗಾಗಲೇ ಪುರಸಭೆಯವರಿಗೆ ಒಳಚರಂಡಿ ನೀರು ಸೋರಿಕೆ ಬಗ್ಗೆ ಮನವಿ ಮಾಡಿದ್ದರೂ ಕ್ರಮ ವಹಿಸಿಲ್ಲ. ಹೀಗಾಗಿ ತಾವು ಖುದ್ದಾಗಿ ಬಂದು ಪರಿಶೀಲಿಸಿ ಕ್ರಮ ಜರಗಿಸಬೇಕು' ಎಂದು ಮನವಿ ಮಾಡಿದರು. ಬಳಿಕ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಸವಿತಾ ಕಾಮತ್ ಅವರಿಗೆ ಮನವಿ ಸಲ್ಲಿಸಿದ ಸಾರ್ವಜನಿಕರು ವಾರ್ಡ್ ಬಾವಿಗಳ ನೀರು ಮತ್ತು ಸಾಮೂಹಿಕ ರಕ್ತ ಪರೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿದರು.

### ತುರ್ತು ಕ್ರಮಕ್ಕೆ ಸೂಚನೆ

ಜನರ ಮನವಿಗೆ ಸ್ಪಂದಿಸಿದ ತಹಶೀಲ್ದಾರ್ ನಾಗೇಂದ್ರ ಕೊಳಶೆಟ್ಟಿ ಅವರು ಪುರಸಭೆ ಮುಖ್ಯಾಧಿಕಾರಿ ವೆಂಕಟೇಶ ನಾವಡ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಸವಿತಾ ಕಾಮತ್ ಜೊತೆ ಆಸರಕೇರಿ ವಾರ್ಡ್‌ಗೆ ತೆರಳಿ ಪರಿಶೀಲನೆ ನಡೆಸಿದರು. ಸಾರ್ವಜನಿಕರು ಒಳಚರಂಡಿ ಸೋರಿಕೆಯನ್ನು ತೋರಿಸಿಕೊಟ್ಟರು. ಕೂಡಲೇ ಸೂಕ್ತ ಕ್ರಮ ವಹಿಸುವಂತೆ ಪುರಸಭೆ ಮುಖ್ಯಾಧಿಕಾರಿಗೆ ತಹಶೀಲ್ದಾರ ನಾಗೇಂದ್ರ ಅವರು ಸೂಚಿಸಿದರು.

## ಮುಂಗಾರು ಪೂರ್ವ ಮಳೆ: ಹೊಲಗಳ ರಸ್ತೆ ಹಾಳು

• ಉದಯವಾಹಿನಿ ಹಾವೇರಿ

ಜಿಲ್ಲೆಯಲ್ಲಿ ಮುಂಗಾರು ಪೂರ್ವ ಮಳೆ ಉತ್ತಮ ರೀತಿಯಲ್ಲಿ ಸುರಿದಿದ್ದು, ಹೊಲಗಳಲ್ಲಿ ಬಿತ್ತನೆ ಕೆಲಸ ಆರಂಭವಾಗಿದೆ. ಇದರ ಜೊತೆಯಲ್ಲಿಯೇ ಹೊಲಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಇದಕ್ಕೆ ಅವೈಜ್ಞಾನಿಕ ಕಾಮಗಾರಿಯೇ ಕಾರಣವೆಂದು ರೈತರು ದೂರುತ್ತಿದ್ದಾರೆ.

ರೈತಾಪಿ ನಾಡಾಗಿರುವ ಹಾವೇರಿ ಜಿಲ್ಲೆ ಬಹುತೇಕರು ಕೃಷಿ ನಂಬಿ ಜೀವನ ನಡೆಸುತ್ತಿದ್ದಾರೆ. ನಿತ್ಯವೂ ಹೊಲಗಳಿಗೆ ಹೋಗಿ ಬರುವುದೇ ಅವರ ಕಾಯಕವಾಗಿದೆ. ಹೊಲಗಳಿಗೆ ಹೋಗುವ ರಸ್ತೆಗಳು ಹಾಳಾಗಿದ್ದರಿಂದ, ಓಡಾಟವೂ ಕಷ್ಟವಾಗಿದೆ. ಹಾವೇರಿ, ರಾಣೆಬೆನ್ನೂರು, ಹಾನಗಲ್, ಬ್ಯಾಡಗಿ, ಹಿರೇಕೆರೂರು, ರಟ್ಟಿಹಳ್ಳಿ, ಶಿಗ್ಗಾವಿ ಹಾಗೂ ಸವಣೂರು ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಹೊಲಗಳಿಗೆ ಕಚ್ಚಾ ರಸ್ತೆ ನಿರ್ಮಿಸಲಾಗಿದೆ. ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆ ಹಾಗೂ ನಮ್ಮ ಹೊಲ ನಮ್ಮ ರಸ್ತೆ ಯೋಜನೆಯಡಿಯಲ್ಲಿಯೂ ಕೆಲವು ಕಡೆಗಳಲ್ಲಿ ರಸ್ತೆಗಳನ್ನು ನಿರ್ಮಿಸಲಾಗಿದೆ.

ಬೇಸಿಗೆ ಸಂದರ್ಭದಲ್ಲಿ ನಿರ್ಮಿಸಿದ ರಸ್ತೆಗಳು ಮೊದಲ ಮಳೆಗೆ ಕಿತ್ತು ಹೋಗಿವೆ. ರಸ್ತೆಯಲ್ಲೆಲ್ಲ ತಗ್ಗುಗಳು ಬಿದ್ದು, ರೈತರು ವಾಹನಗಳಲ್ಲಿ ಓಡಾಡದ ಸ್ಥಿತಿಯಿದೆ. ವಾಹನಗಳು ಹೋಗದಿದ್ದರಿಂದ ರೈತರು, ಬೀಜ ಹಾಗೂ ಗೊಬ್ಬರ ಸಾಗಿಸಲು ಪರದಾಡುತ್ತಿದ್ದಾರೆ. ತಲೆ ಹಾಗೂ ಹೆಗಲ ಮೇಲೆಯೇ ಚೀಲಗಳನ್ನು ಹೊತ್ತುಕೊಂಡು ಹೊಲಗಳವರೆಗೂ ನಡೆದುಕೊಂಡು ಹೋಗುತ್ತಿದ್ದಾರೆ. ಮಲೆನಾಡು ಸೆರಗಿನಲ್ಲಿರುವ ಹಾನಗಲ್ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಹೊಲಗಳ ರಸ್ತೆಗಳು ಸಂಪೂರ್ಣ ಹಾಳಾಗಿವೆ. ಕೆಲ ವರ್ಷಗಳ ಹಿಂದೆ ವಿವಿಧ ಯೋಜನೆಗಳಡಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕಲ್ಲು ಹಾಗೂ ಮಣ್ಣು ಮಾತ್ರ ಹಾಕಿ ರಸ್ತೆ ಮಾಡಲಾಗಿದೆ. ನೀರು ಹರಿದುಹೋಗಲು ಯಾವುದೇ ವ್ಯವಸ್ಥೆ ಸಹ ಮಾಡಿಲ್ಲ. ಹೀಗಾಗಿ, ರಸ್ತೆ ಮೇಲೆಯೇ ನೀರು ನಿಲ್ಲುತ್ತಿದೆ. ನೀರು ನಿಲ್ಲುವ ಸ್ಥಳದಲ್ಲಿ ಕೆಸರು ಹೆಚ್ಚಾಗಿ, ತಗ್ಗುಗಳು ಬೀಳುತ್ತಿವೆ.


ಉದಯವಾಹಿನಿ ಚಿತ್ರ

---

## ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ಬರುವ ವಾಹನಗಳು

• ಉದಯವಾಹಿನಿ ಮಹಾಲಿಂಗಪುರ

ಪಟ್ಟಣದ ಪ್ರಮುಖ ರಸ್ತೆ, ವೃತ್ತಗಳಲ್ಲಿ ಸವಾರರು, ಪಾದಚಾರಿಗಳು ರಸ್ತೆ ನಿಯಮ ಪಾಲಿಸದ ಕಾರಣ ಸಂಚಾರ ದಟ್ಟಣೆಯಿಂದಾಗಿ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಿವೆ. ಬಸ್ ನಿಲ್ದಾಣ ಬಳಿಯ ಚನ್ನಮ್ಮ ವೃತ್ತ ಹಾಗೂ ಮುಧೋಳ ರಸ್ತೆಯ ಬಸವೇಶ್ವರ ವೃತ್ತದಲ್ಲಿ ಸಂಚರಿಸಬೇಕಾದರೆ ಸಾರ್ವಜನಿಕರು ಹರಸಾಹಸ ಪಡಬೇಕಿದೆ. ಡಬಲ್ ರಸ್ತೆ, ಎಪಿಎಂಸಿ ರಸ್ತೆ, ಜವಳಿ ಬಜಾರ್, ಮುಖ್ಯರಸ್ತೆಗಳಲ್ಲಿ ಇದು ನಿತ್ಯ ಸಮಸ್ಯೆ ಆಗಿದೆ. ಸುತ್ತಲಿನ ಹತ್ತಾರು ಗ್ರಾಮಗಳಿಗೆ ಕೇಂದ್ರ ಸ್ಥಾನವಾಗಿರುವ ಪಟ್ಟಣಕ್ಕೆ ವ್ಯಾಪಾರ ವಹಿವಾಟಿಗೆ ಸಾವಿರಾರು ಜನ ನಿತ್ಯ ಬರುತ್ತಾರೆ. ಏಕಮುಖ ಸಂಚಾರ ರಸ್ತೆಗಳಲ್ಲಿ ವಿರುದ್ಧ ದಿಕ್ಕಿನಲ್ಲಿ ವಾಹನಗಳು ಸಂಚರಿಸುವುದು ಒಂದೆಡೆಯಾದರೆ ಇನ್ನೊಂದೆಡೆ ರಸ್ತೆ ಬದಿಯಲ್ಲಿ ಬೇಕಾಬಿಟ್ಟಿ ವಾಹನ ನಿಲ್ಲಿಸುವುದು ಸಂಚಾರಕ್ಕೆ ತೊಡಕಾಗಿ ಪರಿಣಮಿಸಿದೆ.

ಸಾರ್ವಜನಿಕರು ರಸ್ತೆ ನಿಯಮ ಪಾಲಿಸುತ್ತಿಲ್ಲ. ಇದರಿಂದ ದಿನಂಪ್ರತಿ ಸಣ್ಣಪುಟ್ಟ ಅಪಘಾತಗಳು ಸಾಮಾನ್ಯವಾಗಿವೆ. ವಾಹನ ಚಾಲಕರು, ಪಾದಚಾರಿಗಳು ಕೂಡ ನಿಯಮ ಪಾಲಿಸುತ್ತಿಲ್ಲ. ಬೈಕ್ ಮೇಲೆ ಮೂರು ಜನ ಕುಳಿತು ಸಂಚರಿಸುವುದು ಸಾಮಾನ್ಯ ದೃಶ್ಯ. ರಿಕ್ಷಾ ಹಾಗೂ ಬಾಡಿಗೆ ಗೂಡ್ಸ್ ವಾಹನಗಳನ್ನು ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸಲಾಗುತ್ತದೆ. ಪಟ್ಟಣದಲ್ಲಿ ದಿನದಿಂದ ದಿನಕ್ಕೆ ವಾಹನಗಳ ಸಂಖ್ಯೆ ಹೆಚ್ಚುತ್ತಿದೆ. ಮುಖ್ಯರಸ್ತೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಿರಲು ದಿನ ಬಿಟ್ಟು ದಿನಕ್ಕೆ ಒಂದೊಂದು ಬದಿಗೆ ವಾಹನ ನಿಲ್ಲಿಸಲು ಪೊಲೀಸ್ ಇಲಾಖೆ ನಿಯಮ ರೂಪಿಸಿದ್ದರೂ ಪಾಲನೆಯಾಗುತ್ತಿಲ್ಲ.


ಉದಯವಾಹಿನಿ ಚಿತ್ರ

### ಜನತೆ ನಿಯಮ ಪಾಲಿಸುತ್ತಿಲ್ಲ

ಪಾದಚಾರಿ ಮಾರ್ಗಗಳು ಅತಿಕ್ರಮಣ ಗೊಂಡಿದ್ದರಿಂದ, ಪಾದಚಾರಿಗಳು ರಸ್ತೆ ಮೇಲೆ ಓಡಾಡುವುದು ಅನಿವಾರ್ಯವಾಗಿದೆ. ಯಾವ ಕಡೆ ಯಾವ ವಾಹನ ಬರುತ್ತದೆ ಎಂಬುದೇ ತಿಳಿಯದೇ ಅಪಘಾತಕ್ಕೆ ಕಾರಣವಾಗುತ್ತಿದೆ. ಪೊಲೀಸರು ಸಾರ್ವಜನಿಕ ಸ್ಥಳಗಳಲ್ಲಿ ಜಾಗೃತಿ ಮೂಡಿಸಿದರೂ ಜನತೆ ನಿಯಮ ಪಾಲಿಸುತ್ತಿಲ್ಲ.

## ಕದ್ರಿಯಲ್ಲಿ ಅಪರೂಪದ ಬುದ್ಧನ ಶಿಲ್ಪ, ಗುಹೆ ಸಂಕೀರ್ಣ ಪತ್ತೆ

• ಉದಯವಾಹಿನಿ ಮಂಗಳೂರು

ಮಂಗಳೂರಿನ ಕದ್ರಿ ಶ್ರೀ ಮಂಜುನಾಥ ದೇವಸ್ಥಾನದ ಪವಿತ್ರ ಕೊಳದ ಬಳಿ ಬುದ್ಧನ ಅಪರೂಪದ ಶಿಲ್ಪ, ಗುಹೆಗಳ ಸಮುಚ್ಚಯವು ಪುರಾತತ್ವ ಆವಿಷ್ಕಾರದ ವೇಳೆ ಪತ್ತೆಯಾಗಿದೆ. ದೇವಸ್ಥಾನದ ಅಧಿಕಾರಿಗಳ ಅನುಮತಿಯೊಂದಿಗೆ ಇತ್ತೀಚೆಗೆ ನಡೆಸಿದ ಪರಿಶೋಧನೆಯಲ್ಲಿ ಈ ಆವಿಷ್ಕಾರ ಮಾಡಲಾಗಿದೆ. ಕೊಳದಲ್ಲಿ ಮುಳುಗಿದ್ದ ಸ್ಥಿತಿಯಲ್ಲಿ ದೊರೆತ ಈ ಶಿಲ್ಪವು, ಪದ್ಮಾಸನದಲ್ಲಿ (ಧ್ಯಾನ ಮುದ್ರೆ) ಕುಳಿತಿರುವ ಬುದ್ಧನನ್ನು ಚಿತ್ರಿಸುತ್ತದೆ.




ವಿಗ್ರಹದ ಬಲಗೈ ಸಂಪೂರ್ಣವಾಗಿ ಮುರಿದಿದ್ದು, ಎಡಗೈ ಅಡ್ಡಲಾಗಿ ಇಟ್ಟ ಕಾಲುಗಳ ನಡುವೆ ಇದೆ. ಭಾಗಶಃ ಕಾಣುವ ಉತ್ತರೀಯ ಎಡ ಭುಜ ಮತ್ತು ಎದೆಗೆ ಆವರಿಸಿದೆ. ಶಿಲ್ಪದ ತಲೆ ಕಾಣೆಯಾಗಿದೆ.

## ರೈತರನ್ನು ಹೈರಾಣಾಗಿಸುತ್ತಿರುವ ಜಿಂಕೆಗಳು

• ಉದಯವಾಹಿನಿ ರೋಣ

ಪ್ರಸಕ್ತ ಸಾಲಿನಲ್ಲಿ ಪೂರ್ವ ಮುಂಗಾರು ಚೆನ್ನಾಗಿದ್ದು, ರೈತಾಪಿ ವರ್ಗದಲ್ಲಿ ಸಂತಸ ಉಂಟು ಮಾಡಿದೆ. ಪ್ರಮುಖ ಆಹಾರ ಬೆಳೆಗಳಾದ ಹೆಸರು, ಮೆಕ್ಕೆಜೋಳ ಬಿತ್ತನೆ ಕೂಡ ಪ್ರಾರಂಭವಾಗಿದೆ. ಆದರೆ, ತಾಲ್ಲೂಕಿನಾದ್ಯಂತ ಹೆಚ್ಚುತ್ತಿರುವ ಕೃಷ್ಣಮೃಗಗಳ ಹಾವಳಿಗೆ ರೈತರು ತೊಂದರೆ ಅನುಭವಿಸುತ್ತಿದ್ದಾರೆ.

ರೋಣ ತಾಲ್ಲೂಕು ಸೇರಿದಂತೆ ಸಮೀಪದಲ್ಲಿರುವ ಸವಡಿ ಚಿಕ್ಕಮಣ್ಣೂರು, ಜಕ್ಕಲಿ, ಹಿರೇಮಣ್ಣೂರು, ಕೊತಬಾಳ, ಮುಗಳಿ, ಜಿಗಳೂರು, ಹೊಸಳ್ಳಿ, ಕುರಟ್ಟಿ ಗ್ರಾಮಗಳ ಜಮೀನುಗಳಲ್ಲಿ ಹೆಸರು ಬೆಳೆ ಮೊಳಕೆಯೊಡೆದು, ಸಸಿ ಹಂತ ತಲುಪಿದೆ. ಈ ಮಧ್ಯೆ ಕೃಷ್ಣಮೃಗಗಳ ಹಾವಳಿಗೆ ರೈತರು ಕಂಗಾಲಾಗಿದ್ದಾರೆ. ರೋಣ ಭಾಗದ ಪ್ರಮುಖ ಬೆಳೆಯಾದ ಹೆಸರು ರೈತರಿಗೆ ಆದಾಯ ತಂದುಕೊಡುತ್ತದೆ. ಕಳೆದ ಕೆಲವು ವರ್ಷಗಳಿಂದ ಕಡಿಮೆಯಾಗಿದ್ದ ಕೃಷ್ಣಮೃಗಗಳ ಹಾವಳಿ ಇತ್ತೀಚೆಗೆ ವ್ಯಾಪಕವಾಗಿದ್ದು, ಬೆಳಿಗ್ಗೆ ಮತ್ತು ಸಂಜೆ ಕೃಷ್ಣಮೃಗಗಳನ್ನು ಕಾಯುವುದೇ ರೈತರ ಕೆಲಸವಾಗಿದೆ. ಕೃಷ್ಣಮೃಗಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕಾದ ಅರಣ್ಯ ಇಲಾಖೆ ಮತ್ತು ಕೃಷಿ ಇಲಾಖೆಗಳು ಈ ಕುರಿತು ಮೌನವಹಿಸಿರುವುದು ರೈತರನ್ನು ಮತ್ತಷ್ಟು ಚಿಂತೆಗೀಡು ಮಾಡಿದೆ. ಕೃಷ್ಣಮೃಗಗಳ ಹಾವಳಿಗೆ ಕಡಿವಾಣ ಹಾಕಲು ಬೇಕಾದ ವೈಜ್ಞಾನಿಕ ಸಲಕರಣೆ ವಿತರಣೆಗೆ ಇಲಾಖೆಗಳು ಮುಂದಾಗಿಲ್ಲ. ಜತೆಗೆ ದುಬಾರಿ ಬೆಲೆ ತೆತ್ತು ಬಿತ್ತನೆ ಬೀಜ, ರಸಗೊಬ್ಬರ ಸೇರಿದಂತೆ ಈಗಾಗಲೇ ಸಾಕಷ್ಟು ಖರ್ಚು ಮಾಡಿರುವ ರೈತರನ್ನು ಒಂದು ಕಡೆ ಮಳೆಯ ಕೊರತೆಯ ಚಿಂತೆ ಕಾಡುತ್ತಿದ್ದರೆ ಮತ್ತೊಂದೆಡೆ ಕೃಷ್ಣಮೃಗಗಳ ಹಾವಳಿ ರೈತರನ್ನು ಹೈರಾಣಾಗಿಸುತ್ತಿದೆ. ಕೂಡಲೇ ಕೃಷ್ಣ ಮೃಗಗಳ ಹಾವಳಿ ತಡೆಯಲು ಇಲಾಖೆಗಳು ಮುಂದಾಗಬೇಕು ಎಂದು ರೈತರು ಆಗ್ರಹಿಸಿದ್ದಾರೆ.


ಉದಯವಾಹಿನಿ ಚಿತ್ರ

**ಹಾವಳಿ ತಡೆಯಲು ಇಲಾಖೆಗಳು ಮುಂದಾಗಬೇಕು**

---

## ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಪರಿಣಾಮಕಾರಿ ಕ್ರಮ ವಹಿಸಿ

• ಉದಯವಾಹಿನಿ ಧಾರವಾಡ

ಜಿಲ್ಲೆಯಲ್ಲಿ ಮಕ್ಕಳ ರಕ್ಷಣೆಗೆ ಕಾರ್ಮಿಕ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಮತ್ತು ತಾಲ್ಲೂಕು ಟಾಸ್ಕಫೋರ್ಸ್ ಸಮಿತಿ ಸದಸ್ಯರು ಸಮನ್ವಯದಿಂದ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ತಹಶಿಲ್ದಾರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಟಾಸ್ಕಫೋರ್ಸ್ ಸಮಿತಿಗಳ ಸಭೆಗಳು ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಜರುಗಬೇಕು ಎಂದು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ನಿರ್ದೇಶಿಸಿದರು.

ಅವರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸಂಘದ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆ ಹಾಗೂ ತಾಲ್ಲೂಕು ಟಾಸ್ಕಫೋರ್ಸ್ ಸಮಿತಿಗಳು ಬಾಲ ಹಾಗೂ ಕಿಶೋರ ಕಾರ್ಮಿಕರ ರಕ್ಷಣೆ ಹಾಗೂ ಪುನರ್ವಸತಿ ಕಾರ್ಯವನ್ನು ತೃಪ್ತಿಕರವಾಗಿ ಮಾಡದಿರುವುದು ಕಂಡು ಬಂದಿದೆ. ಬಾಲ ಕಾರ್ಮಿಕರು ಇರಬಹುದಾದ ಕೈಗಾರಿಕೆ, ಇಟ್ಟಂಗಿ ಭಟ್ಟಿ, ಹೋಟೆಲ್ ಹಾಗೂ ಇತರ ಸ್ಥಳಗಳಲ್ಲಿ ಕಾರ್ಮಿಕ ಇಲಾಖೆ ಅಧಿಕಾರಿಗಳು ಇತರ ಇಲಾಖೆಗಳ ಅನಿರೀಕ್ಷಿತ ಭೇಟಿ, ದಾಳಿಗಳ ಸಂಖ್ಯೆ ಹೆಚ್ಚಾಗಬೇಕು.



ಬಾಲ ಮತ್ತು ಕಿಶೋರ ಕಾರ್ಮಿಕರನ್ನು ಕಳುಹಿಸುವ ಪಾಲಕರಿಗೆ ಮತ್ತು ದುಡಿಸಿಕೊಳ್ಳುವ ಮಾಲೀಕರಿಗೆ ತಕ್ಕ ಕಾನೂನು ಶಾಸ್ತಿ ಆಗಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ತಾಲ್ಲೂಕು ಮಟ್ಟದಲ್ಲಿ ನಿಯಮಿತವಾಗಿ ಸಭೆಗಳು ಜರುಗಿಸುವುದು ಹಿರಿಯ ಕಾರ್ಮಿಕ ಅಧಿಕಾರಿಗಳ ಜವಾಬ್ದಾರಿ. ಸಭೆಗಳು ಆಗದೇ, ತಾಲ್ಲೂಕಿನಲ್ಲಿ ಬಾಲ ಕಾರ್ಮಿಕರು ಪತ್ತೆ ಆದರೆ ಜಿಲ್ಲಾ ಮಟ್ಟದ ಕಾರ್ಮಿಕ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಸಿದರು. ಮಕ್ಕಳು ಶಾಲೆಗಳಿಗೆ ಗೈರು ಉಳಿಯುತ್ತಿರುವುದು ಬಾಲಕಾರ್ಮಿಕರ ಸಂಖ್ಯೆ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ಕಾರ್ಮಿಕ ಇಲಾಖೆ ಅಧಿಕಾರಿಗಳು ಆಯಾ ತಾಲ್ಲೂಕಿನ ಕ್ಷೇತ್ರಶಿಕ್ಷಣಾಧಿಕಾರಿಗಳ ಕಚೇರಿಯಿಂದ ನಿರಂತರ ಶಾಲೆಗೆ ಗೈರು ಆಗಿರುವ ಮಕ್ಕಳ ಮಾಹಿತಿ ಪಡೆದುಕೊಂಡು ಗೈರು ಮಕ್ಕಳ ಮನೆಗಳಿಗೆ ಭೇಟಿ ಮಾಡಿ, ಸಮೀಕ್ಷಾ ವರದಿ ಸಲ್ಲಿಸಬೇಕು. ಮಕ್ಕಳು ಶಾಲೆಯಲ್ಲಿ ಇರುವುದು ಹೆಚ್ಚು ಸುರಕ್ಷ. ಆದ್ದರಿಂದ ಪ್ರತಿ ಮಗು ಶಾಲೆಗೆ ಬರುವಂತೆ ಮಾಡಬೇಕು. ಈ ನಿಟ್ಟಿನಲ್ಲಿ ಕಾರ್ಮಿಕ ಇಲಾಖೆಯಿಂದ ಶಾಲೆಗೆ ನಿರಂತರ ಗೈರಾದ ಮಕ್ಕಳ ಮನೆಗಳಿಗೆ ಭೇಟಿ ನೀಡಿ, ಪ್ರತಿ ತಿಂಗಳು 5 ನೇ ದಿನಾಂಕದೊಳಗೆ ವರದಿ ಸಲ್ಲಿಸಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

---

● ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಏಕೈಕ ವಿಶ್ವವಿದ್ಯಾಲಯ

# ಪಂಚಾಯತ್‌ರಾಜ್ ವಿವಿ: ಕೌಶಲಕ್ಕೆ ಆದ್ಯತೆ, ಉದ್ಯೋಗದಾತರ ಸೃಷ್ಟಿಗೆ ಒತ್ತು

• ಉದಯವಾಹಿನಿ ಗದಗ

ಇಲ್ಲಿನ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದಲ್ಲಿ ಹಲವು ವಿಶಿಷ್ಟ ಕೋರ್ಸ್‌ಗಳಿದ್ದು, ಕಲೆ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಕ್ಕೆ ಸಂಬಂಧಿಸಿದ ಆರು ಪದವಿ ಪ್ರೋಗ್ರಾಂಗಳಿವೆ.

ಬಿಎ ವಿಭಾಗ-ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ಗ್ರಾಮೀಣಾಭಿವೃದ್ಧಿ, ಬಿಕಾಂ ವಿಭಾಗ-ಇನೋವೇಷನ್ ಆ್ಯಂಡ್ ಸ್ಟಾರ್ಟ್‌ಅಪ್ಸ್, ಸ್ಕಿಲ್ ಆ್ಯಂಡ್ ಎಂಟರ್‌ಪ್ರೂನರ್‌ಶಿಪ್. ಬಿಎಸ್‌ಸಿ ವಿಭಾಗ-ಅಗ್ರಿ ಬ್ಯುಸಿನೆಸ್ ಆ್ಯಂಡ್ ಫುಡ್ ಪ್ರೊಸೆಸಿಂಗ್, ಜಿಯೋಇನ್ಫರ್ಮ್ಯಾಟಿಕ್ಸ್ ಆ್ಯಂಡ್ ಕಂಪ್ಯೂಟರ್ ಸೈನ್ಸ್ ವಿಷಯಗಳ ಸಂಯೋಜನೆ ಇದ್ದು, ಇವು ಬೇರೆಲ್ಲೂ ಇಲ್ಲ. ಅದೇ ರೀತಿ, ಪಬ್ಲಿಕ್ ಹೆಲ್ತ್‌ಗೆ ಸಂಬಂಧಿಸಿದ ವಿಶೇಷ ಆಯ್ಕೆ ಇಲ್ಲಿ ಲಭ್ಯವಿದೆ. ಈ ಶೈಕ್ಷಣಿಕ ವರ್ಷದಿಂದ ಬಿಸಿಎ ಕೂಡ ಪ್ರಾರಂಭಗೊಂಡಿದೆ. ಉದ್ಯೋಗ ಹುಡುಕುವುದಕ್ಕಿಂತ ಉದ್ಯೋಗ ಸೃಷ್ಟಿಸುವ ವ್ಯಕ್ತಿಗಳನ್ನು ರೂಪಿಸುವ ಧ್ಯೇಯದೊಂದಿಗೆ ವಿವಿಧ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಿ ಇಲ್ಲಿ ವಿವಿ ತರಬೇತಿ ನೀಡುತ್ತಿದೆ.


ಉದಯವಾಹಿನಿ ಚಿತ್ರ

### ಪಿಡಿಒ ಹುದ್ದೆಗಳಿಗೆ ಮೀಸಲಾತಿ ಸಿಗುವ ನಿರೀಕ್ಷೆ

ಇಲ್ಲಿ ಬಿಎ ಬಿಎಸ್‌ಸಿ ಬಿಕಾಂ ಬಿಸಿಎ ಎಂಎ ಎಂಎಸ್‌ಸಿ ಎಂಕಾಂ ಎಂಪಿಎಚ್ ಎಂಎಸ್‌ಡಬ್ಲ್ಯು ಹೀಗೆ ಯಾವುದೇ ವಿಷಯ ಕಲಿಯುವ ವಿದ್ಯಾರ್ಥಿಗಳಿಗೆ ಗ್ರಾಮೀಣಾಭಿವೃದ್ಧಿ ಕೃಷಿ ಪಂಚಾಯತ್‌ರಾಜ್ ಸ್ಕಿಲ್ ಡೆವಲಪ್‌ಮೆಂಟ್ ವಿಷಯಗಳನ್ನು ಕಡ್ಡಾಯವಾಗಿ ಕಲಿಸಲಾಗುತ್ತಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಷಯ ಕಲಿತವರಿಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಯಲ್ಲಿ ಇಂತಿಷ್ಟು ಮೀಸಲಾತಿ ನಿಗದಿಪಡಿಸಬೇಕು ಎಂಬ ಬೇಡಿಕೆ ವಿದ್ಯಾರ್ಥಿಗಳದ್ದಾಗಿದೆ ಈ ವಿಷಯ ಸರ್ಕಾರದ ಮಟ್ಟದಲ್ಲಿದ್ದು ಅದಕ್ಕಾಗಿ ಸಮಿತಿ ರಚನೆ ಮಾಡಲಾಗಿದೆ. ಅವರು ವರದಿ ಕೊಟ್ಟ ನಂತರ ಅವಕಾಶ ಸಿಗುವ ನಿರೀಕ್ಷೆ ಇದೆ' ಎನ್ನುತ್ತಾರೆ ಪ್ರೊ. ಎಸ್.ವಿ.ನಾಡಗೌಡರ.

> ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ನಾವು ಪಡೆಯುವ ಪದವಿಗಿಂತ ಕೌಶಲಕ್ಕೆ ಅಧಿಕ ಮನ್ನಣೆ ಇದೆ. ವಿದ್ಯಾರ್ಥಿಗಳಲ್ಲಿ ವಿಷಯಜ್ಞಾನದ ಜತೆಗೆ ಕೌಶಲ ಬೆಳೆಸುವ ಕಾರ್ಯವನ್ನು ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯ ಮಾಡುತ್ತಿದೆ.
>
> -ಪ್ರೊ. ಸುರೇಶ ವಿ. ನಾಡಗೌಡರ, ಪ್ರಭಾರ ಕುಲಪತಿ

**ಪದವಿಗಿಂತ ಕೌಶಲಕ್ಕೆ ಅಧಿಕ ಮನ್ನಣೆ**

ನಮ್ಮಲ್ಲಿ ಪದವಿ ಕಲಿತವರು ಕಂಪನಿಗಳು, ಆಹಾರ ಮತ್ತು ಕೃಷಿ ಸಂಬಂಧಿತ ಕೈಗಾರಿಕಾ ಕ್ಷೇತ್ರಗಳಲ್ಲಿ ಉದ್ಯೋಗ ಪಡೆದುಕೊಂಡಿದ್ದಾರೆ. ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಸಾಕಷ್ಟು ಯೋಜನೆಗಳಿದ್ದು ಇವುಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಇನ್ನು ಕೆಲವರು ಎನ್‌ಜಿಒಗಳಲ್ಲಿ ದುಡಿಯುತ್ತಿದ್ದಾರೆ. ಅದಕ್ಕಿಂತ ಮಿಗಿಲಾಗಿ, ನಮ್ಮಲ್ಲಿ ಶಿಕ್ಷಣ ಪೂರೈಸಿ ತಾವೇ ಸ್ಟಾರ್ಟ್ ಅಪ್‌ಗಳನ್ನು ಸ್ಥಾಪಿಸಿ ಅನೇಕರಿಗೆ ಉದ್ಯೋಗ ನೀಡಿದ್ದಾರೆ' ಎನ್ನುತ್ತಾರೆ ಪ್ರಭಾರ ಕುಲಪತಿ ಪ್ರೊ. ಸುರೇಶ ವಿ.ನಾಡಗೌಡರ.

ವಿವಿಯಲ್ಲಿ ಪ್ಲೇಸ್‌ಮೆಂಟ್ ಸೆಲ್ ಇದ್ದು, ಇಲ್ಲಿಗೆ ಪ್ರತಿವರ್ಷ 20ಕ್ಕೂ ಹೆಚ್ಚು ಕಂಪನಿಗಳವರನ್ನು ಆಹ್ವಾನಿಸಲಾಗುತ್ತದೆ. ಕಳೆದ ವರ್ಷ 86 ಮಂದಿ ವಿದ್ಯಾರ್ಥಿಗಳು ವಿವಿಧ ಕಂಪನಿಗಳಿಗೆ ನೇಮಕಗೊಂಡಿದ್ದಾರೆ. ನಮ್ಮಲ್ಲಿ ಪದವಿ ಓದಿದವರು ಸ್ನಾತಕೋತ್ತರ ಪದವಿ ಮಾಡಲು ಇಚ್ಛಿಸಿದರೆ ಎಂಎ, ಎಂಕಾಂ, ಎಂಎಸ್‌ಸಿ, ಎಂಪಿಎಚ್, ಎಂಸಿಎ, ಎಂಬಿಎ ಕೋರ್ಸ್‌ಗಳು ಕೂಡ ಲಭ್ಯ ಇವೆ. ಜಿಯೋಇನ್ಫರ್ಮ್ಯಾಟಿಕ್ಸ್, ಅಗ್ರಿ ಬ್ಯುಸಿನೆಸ್ ಆ್ಯಂಡ್ ಫುಡ್ ಪ್ರೊಸೆಸಿಂಗ್ ಕೋರ್ಸ್‌ಗಳಿಗೆ ಅತ್ಯುತ್ತಮ ಬೇಡಿಕೆ ಇದೆ. ಪಿಯುಸಿ ನಂತರ ಎಂಜಿನಿಯರಿಂಗ್, ಮೆಡಿಕಲ್‌ಗಿಂತ ಈ ರೀತಿಯ ಕೋರ್ಸ್‌ಗಳನ್ನು ಓದಿದರೆ ಬೇರೆ ಕಡೆಗಳಲ್ಲಿ ಉದ್ಯೋಗ ಪಡೆಯುವುದರ ಜತೆಗೆ ಸ್ಥಳೀಯವಾಗಿಯೇ ಸ್ವಯಂ ಉದ್ಯೋಗ ಮಾಡಬಹುದು ಎನ್ನುತ್ತಾರೆ ಅಧಿಕಾರಿಗಳು.

---

## ಮಿನಿ ನ್ಯೂಸ್

### ರಸ್ತೆ ನಿರ್ಮಾಣ ಕಾಮಗಾರಿ ಆರಂಭ

• ಉದಯವಾಹಿನಿ ಮಲೇಬೆನ್ನೂರು

ಜಿಲ್ಲಾ ಕೇಂದ್ರ ದಾವಣಗೆರೆಗೆ ದೇವರಬೆಳಕೆರೆ- ಜರಿಕಟ್ಟೆ- ಮಿಟ್ಲಕಟ್ಟೆ ಮೂಲಕ ಸಂಪರ್ಕಿಸುವ ರಸ್ತೆ ಕಾಮಗಾರಿ ಭರದಿಂದ ಸಾಗಿದ್ದು, ಈ ಭಾಗದ ಜನರು ಸಂತಂತಗೊಂಡಿದ್ದಾರೆ. ದಾವಣಗೆರೆ ಸಂಪರ್ಕಿಸುವ ಈ ಮಾರ್ಗದಲ್ಲಿ ಮೂರ್ನಾಲ್ಕು ವರ್ಷಗಳಿಂದ ಗುಂಡಿಗಳು ನಿರ್ಮಾಣವಾಗಿ ಹಾಳಾಗಿತ್ತು. ಜನ ಜಾನುವಾರು, ವಾಹನ ಸಂಚಾರ ಕಷ್ಟಕರವಾಗಿತ್ತು. ಬೇಸಿಗೆ ವೇಳೆ ದೂಳು, ಮಳೆಗಾಲದಲ್ಲಿ ಕೆಸರಿನ ಗುಂಡಿಯಿಂದಾಗಿ ವಾಹನ ಸಂಚಾರ ದುಸ್ತರವಾಗಿತ್ತು. ಈ ರಸ್ತೆ ಅಪಘಾತ ವಲಯವಾಗಿ ಮಾರ್ಪಾಟಾಗಿ ನೆಮ್ಮದಿ ಕೆಡೆಸಿತ್ತು. ಜಿಲ್ಲಾ ಕೇಂದ್ರ ಮುಟ್ಟುವುದರೊಳಗೆ ವಾಹನ, ಜನರ ಬಟ್ಟೆ ಗಲೀಜಾಗುತ್ತಿದ್ದವು. ರಸ್ತೆ ಬಳಸಿದ ವಿದ್ಯಾರ್ಥಿಗಳಂತೂ ಬೇಸರ ವ್ಯಕ್ತಪಡಿಸುತ್ತಿದ್ದರು. ದೊಡ್ಡ ವಾಹನ ಹೋದರೆ ಹಿಂಬದಿ ವಾಹನ ಸವಾರರು ದೂಳಿನ ಸ್ನಾನ ಮಾಡಬೇಕಿತ್ತು ಎಂದು ಸಾರ್ವಜನಿಕರೊಬ್ಬರು ಹೇಳಿದರು.

### ಉತ್ತಮ ಆರೋಗ್ಯಕ್ಕೆ ಪರಿಸರ ಸಂರಕ್ಷಣೆ ಅವಶ್ಯ: ಫಾದರ್ ಲೂರ್ದುಸ್ವಾಮಿ

• ಉದಯವಾಹಿನಿ ಹುಕ್ಕೇರಿ

ನಮ್ಮ ಸುತ್ತಮುತ್ತಲಿನ ಪರಿಸರ ಗಿಡಮರಗಳಿಂದ ಕೂಡಿದ್ದರೆ, ಪ್ರಾಣಿ ಪಕ್ಷಿಗಳಿಗೆ ಹಣ್ಣು ಹಂಪಲು ಹಾಗೂ ಮನುಷ್ಯನಿಗೆ ಆರೋಗ್ಯ ಲಭಿಸುತ್ತದೆ ಎಂದು ಹಿಡಕಲ್ ಡ್ಯಾಂನ ಮಿಖಾಯಿಲ್ ಚರ್ಚಿನ ಫಾದರ್ ಲೂರ್ದುಸ್ವಾಮಿ ಹೇಳಿದರು. ಹಿಡಕಲ್ ಡ್ಯಾಂನ ಮಿಖಾಯಿಲ್ ಚರ್ಚಿನ ಆವರಣದಲ್ಲಿ ಹಣ್ಣಿನ ಗಿಡಗಳನ್ನು ನೆಡುವುದರ ಮೂಲಕ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದರು. ಉತ್ತಮ ಪರಿಸರ ಇದ್ದರೆ ಕಾಲಕಾಲಕ್ಕೆ ಉತ್ತಮ ಮಳೆ ಆಗುತ್ತದೆ. ಪ್ರಾಣಿ ಪಕ್ಷಿಗಳು ಬದುಕಲು ಕಾಡು ಮುಖ್ಯವಾಗಿರುತ್ತದೆ. ಪರಿಸರ ನಾಶದಿಂದ ಮನುಷ್ಯನಿಗೆ ಹಾಗೂ ಪ್ರಾಣಿ ಪಕ್ಷಿಗಳಿಗೆ ಹಲವಾರು ತೊಂದರೆಗಳಾಗುತ್ತವೆ. ಮನುಷ್ಯನ ಆರೋಗ್ಯದಲ್ಲಿ ಏರುಪೇರು ಆಗುತ್ತದೆ. ವಿಶ್ವನಾಯಕರು ಪ್ರತಿ ವರ್ಷ ವಿಶ್ವಪರಿಸರ ದಿನಾಚರಣೆ ಆಚರಿಸುವುದರ ಮೂಲಕ ಜನರು ಪರಿಸರ ರಕ್ಷಣೆಗೆ ಬದ್ಧರಾಗಬೇಕು ಎಂಬ ಆಶಯ ಹೊಂದಿದ್ದಾರೆ ಎಂದರು.

### ಮಟಕಾ ದಂಧೆ: ವ್ಯಕ್ತಿ ಬಂಧನ

• ಉದಯವಾಹಿನಿ ಕಲಬುರಗಿ

ಎಪಿಎಂಸಿ ಕಚೇರಿ ಹತ್ತಿರ ಮಟಕಾ ನಂಬರ್ ಬರೆದುಕೊಳ್ಳಲಾಗುತ್ತಿದೆ ಎಂಬ ಮಾಹಿತಿ ಮೇಲೆ ಚೌಕ್ ಪೊಲೀಸ್ ಠಾಣೆ ಎಎಸ್‌ಐ ಗಣಪತಿ ಮತ್ತು ಸಿಬ್ಬಂದಿ ಅಂಬಾರಾಯ ಅವರು ದಾಳಿ ನಡೆಸಿ ಜಾವೀದಮಿಯಾ ತಂದೆ ಅಬ್ದುಲ್ ಅಜೀಜ್ (61) ಎಂಬಾತನನ್ನು ಬಂಧಿಸಿ 2160 ರೂ.ನಗದು ಮತ್ತು ಎರಡು ಮಟಕಾ ಚೀಟಿ ಮತ್ತು ಒಂದು ಬಾಲ್ ಪೆನ್ ಜಪ್ತಿ ಮಾಡಿದ್ದಾರೆ. ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಬಾಕಿ ವೇತನಕ್ಕೆ ಆಗ್ರಹಿಸಿ ಪ್ರತಿಭಟನೆ

• ಉದಯವಾಹಿನಿ ಕಲಬುರಗಿ

ಜಿಲ್ಲೆಯಲ್ಲಿ ಮಹಾತ್ಮಾ ಗಾಂಧೀಜಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸ ಮಾಡಿದ ಕಲಬುರಗಿ ಜಿಲ್ಲೆಯ ಕೂಲಿಕಾರರ ಬಾಕಿ ವೇತನ ಹಣ 58,97,20,669 ರೂ. ಬಿಡುಗಡೆ ಮಾಡಲು ಹಾಗೂ ಬಿತ್ತನೆ ಪ್ರಾರಂಭವಾಗುವ ತನಕ ಕೂಲಿಕಾರರಿಗೆ ಕೆಲಸ ಕೊಡಲು, ಜಿರೊ ಎನ್ ಎಂ ಆರ್ ತೆಗೆದು ಬಾಕಿ ವೇತನ ಕೊಡಲು ಒತ್ತಾಯಿಸಿ, ಕರ್ನಾಟಕ ಪ್ರಾಂತ ರೈತ ಸಂಘದಿಂದ ಜಿಲ್ಲಾಪಂಚಾಯತ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಜಿಪಂ ಸಿಇಓ ಅವರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಶರಣಬಸಪ್ಪ ಮಮಶೆಟ್ಟಿ, ಸುಭಾಷ್ ಹೊಸಮನಿ, ಸಾಯಬಣ್ಣಾ ಗುಡುಬಾ, ದಿಲೀಪ್ ನಾಗೂರೆ,ಚಂದಪ್ಪಾ ಪೂಜಾರಿ, ದೇವು ಬಿರಾದಾರ, ರಾಯಪ್ಪಾ ಹುರುಮುಂಜಿ ಹಲವರಿದ್ದರು.

### ಕಾಮಗಾರಿ ಪರಿಶೀಲನೆ

• ಉದಯವಾಹಿನಿ ಬಾಗಲಕೋಟೆ

ಜಿಲ್ಲೆಯ ಹುನಗುಂದ ಮತ್ತು ಇಲಕಲ್ಲ ತಾಲ್ಲೂಕಿನ ವಿವಿದೆಡೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ವಿವಿಧ ಕಟ್ಟಡ ಕಾಮಗಾರಿ, ಶಾಲೆ, ಆಸ್ಪತ್ರೆ, ಚರಂಡಿ ನಿರ್ಮಾಣ ಕಾಮಗಾರಿ ಹಾಗೂ ವಸತಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹುನಗುಂದ ತಾಲ್ಲೂಕಿನ ಹೊನಗನಹಳ್ಳಿ ಗ್ರಾಮದಲ್ಲಿ ನೂತನ ಕಟ್ಟಡ, ಹಿರೇಬಾದವಾಡಗಿ ನೂತನ ಗ್ರಾಮ ಪಂಚಾಯತ ಕಟ್ಟಡ ಕಾಮಗಾರಿ, ಯಡಹಳ್ಳಿ ಗ್ರಾಮದ ಗ್ರಾ.ಪಂ ಕಟ್ಟಡ, ನಾಗೂರ ಗ್ರಾಮದ ಚರಂಡಿ ನಿರ್ಮಾಣ ಕಾಮಗಾರಿ, ಇಲ್ಲಾಳ ಗ್ರಾಮದ ಬಹು ಗ್ರಾಮ ಕುಡಿಯುವ ನೀರಿನ ಘಟಕಕ್ಕೆ ಭೇಟಿ ನೀಡಿ ವೀಕ್ಷಣೆ ಮಾಡಿ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿಕೊಂಡು ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಿದರು. ನಂತರ ಭೇವಿನಮಟ್ಟ ಗ್ರಾಮದ ಸರಕಾರಿ ಪ್ರೌಢಶಾಲೆಗೆ ಭೇಟಿ ನೀಡಿದ ಸಿಇಓ ಅವರು ಶಾಲಾ ಮಕ್ಕಳ ಜೊತೆ ಸಂವಾದ ನಡೆಸಿ ವಿಶ್ವ ಪರಿಸರ ದಿನದ ಪ್ರಯುಕ್ತ ಮಕ್ಕಳೊಂದಿಗೆ ಸಸಿ ನೆಟ್ಟರು.

### ಕೃಷ್ಣಾ ಭಾಗ್ಯ ಜಲ ನಿಗಮದ ಬಾಕಿ ಬಿಲ್ ಪಾವತಿಗೆ ಮನವಿ

• ಉದಯವಾಹಿನಿ ಆಲಮೇಲ

ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ವಿವಿಧ ದುರಸ್ತಿ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರ ಬಿಲ್ ಪಾವತಿ ಮಾಡುವಂತೆ ಕೃಷ್ಣಾ ಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮೋಹನರಾಜ್ ಅವರಿಗೆ ಮನವಿ ಸಲ್ಲಿಸಲಾಯಿತು. ಸಮೀಪದ ಕಲಹಳ್ಳಿ ಗ್ರಾಮದಲ್ಲಿ ಮಂಗಳವಾರ ಮನವಿ ಸಲ್ಲಿಸಿ ಮಾತನಾಡಿದ ಗುತ್ತಿಗೆದಾರ ಕಾಶಿನಾಥ ತೊರವಿ, 'ದುರಸ್ತಿ ಕಾಮಗಾರಿ ನಡೆಸಿ ಹಲವು ತಿಂಗಳು ಕಳೆದರೂ ಬಿಲ್ ಪಾವತಿ ಆಗಿಲ್ಲ. ಕಾಮಗಾರಿ ನಡೆಸಿದವರು ಸಣ್ಣ ಗುತ್ತಿಗೆದಾರರಾಗಿದ್ದಾರೆ. ಮಕ್ಕಳ ಶುಲ್ಕ ಭರಿಸಲೂ ಆಗುತ್ತಿಲ್ಲ. ಬಿಲ್ ಪಾವತಿ ಆಗದಿದ್ದರೆ ತೀವ್ರ ತೊಂದರೆ ಅನುಭವಿಸಬೇಕಾಗುತ್ತದೆ. ಹಾಗಾಗಿ, ಶೀಘ್ರವೇ ಪಾವತಿಸಬೇಕು' ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮೋಹನರಾಜ್, ಕಳೆದ ವರ್ಷದಿಂದ ಗುತ್ತಿಗೆದಾರರ ಹಣ ಪಾವತಿ ಬಾಕಿ ಇದ್ದು, ಹಿರಿತನದ ಆಧಾರದ ಮೇಲೆ ಹಣ ಪಾವತಿಸಲಾಗುತ್ತದೆ' ಎಂದು ಭರವಸೆ ನೀಡಿದರು. ಗುತ್ತಿಗೆದಾರರಾದ ಕಾಶಿನಾಥ ತೊರವಿ, ಡಿ.ಎಸ್. ಮುದೋಡಗಿ, ಡಿ.ಡಿ. ಬೊಮ್ಮಣಿ, ಗುಂಡು ಯಾಳವಾರ, ರಮೇಶ ದೇವರನಾವದಗಿ ಅಧೀಕ್ಷಕ ಎಂಜಿನಿಯರ್ ಮನೋಜ ಕುಮಾರ ಇದ್ದರು.

# ಹೊಸ ಚಿತ್ರ ಘೋಷಿಸಿದ ರವಿ



**ನಿರ್ಮಾಣ ರಂಗಕ್ಕಿಳಿದ ತಮಿಳು ನಟ**

ತಮಿಳು ಚಿತ್ರರಂಗದ ಪ್ರತಿಭಾನ್ವಿತ ನಟ ರವಿ ಮೋಹನ್ ಹೊಸ ಸಿನಿಮಾ ಘೋಷಣೆ ಮಾಡಿದ್ದಾರೆ. ಬ್ರೋಕೋಡ್ ಎಂಬ ಚಿತ್ರ ಅನೌನ್ಸ್ ಮಾಡಿರುವ ಅವರೀಗ, ನಿರ್ಮಾಣದ ಜವಾಬ್ದಾರಿ ಕೂಡ ಹೊತ್ತುಕೊಂಡಿದ್ದಾರೆ. ಇತ್ತೀಚೆಗಷ್ಟೇ ತಮ್ಮದೇ ನಿರ್ಮಾಣ ಸಂಸ್ಥೆ ಬಗ್ಗೆ ಮಾಹಿತಿ ನೀಡಿದ್ದ ರವಿ ಮೋಹನ್, ಆ ಸಂಸ್ಥೆಯ ಚೊಚ್ಚಲ ಚಿತ್ರ ಯಾವುದು ಎಂಬ ಕುತೂಹಲಕ್ಕೆ ತೆರೆ ಎಳೆದಿದ್ದಾರೆ. ರವಿ ಮೋಹನ್ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಬ್ರೋಕೋಡ್‌ಗೆ ಅವರೇ ನಾಯಕ ನಟನಾಗಿ ಕಾಣಿಸಿಕೊಳ್ಳಲಿದ್ದಾರೆ. ಡಿಕ್ಕಿಲೂನಾ ಮತ್ತು ವಡಕ್ಕುಪಟ್ಟಿ ರಾಮಸಾಮಿ ಚಿತ್ರದ ನಿರ್ದೇಶಕ ಕಾರ್ತಿಕ್ ಯೋಗಿ 'ಬ್ರೋಕೋಡ್' ಸಿನಿಮಾಗೆ ಆಕ್ಷನ್ ಕಟ್ ಹೇಳಲಿದ್ದಾರೆ. ರವಿ ಮೋಹನ್ ಜೊತೆಗೆ ಎಸ್.ಜೆ ಸೂರ್ಯ ಹಾಗೂ ನಾಲ್ವರು ಪ್ರಮುಖ ನಟಿಯರು ಈ ಚಿತ್ರದಲ್ಲಿ ಅಭಿನಯಿಸಲಿದ್ದಾರೆ. ಆ ನಾಲ್ವರು ನಟಿಯರು ಯಾರೆಂದು ಚಿತ್ರತಂಡ ಇನ್ನೂ ರಿವೀಲ್ ಮಾಡಿಲ್ಲ. ಪೊರ್ ತೋಝಿಲ್ ಚಿತ್ರದ ಮೂಲಕ ಹೆಸರುವಾಸಿಯಾದ ಕಲೈಸೆಲ್ವನ್ ಶಿವಾಜಿ ಅವರ ಛಾಯಾಗ್ರಹಣ ಈ ಚಿತ್ರಕ್ಕೆ ಇರಲಿದೆ. ಅನಿಮಲ್ ಮತ್ತು ಅರ್ಜುನ್ ರೆಡ್ಡಿಯಂತಹ ಹಿಟ್ ಸಾಂಗ್‌ಗಳ ಸಂಗೀತ ನಿರ್ದೇಶಕ ಹರ್ಷವರ್ಧನ್ ಮ್ಯೂಸಿಕ್, ಪ್ರದೀಪ್ ಇ. ರಾಘವ್ ಸಂಕಲನ, ಎ. ರಾಜೇಶ್ ಕಲಾ ನಿರ್ದೇಶನದಲ್ಲಿ 'ಬ್ರೋಕೋಡ್' ಸಿನಿಮಾ ಮೂಡಿಬರಲಿದೆ. ಇದೊಂದು ಪಕ್ಕಾ ಫ್ಯಾಮಿಲಿ ಎಂಟರ್‌ಟೈನಿಂಗ್ ಜೊತೆಗೆ ಕಾಮಿಡಿ ಜಾನರ್ ಕಥೆಯನ್ನು ಒಳಗೊಂಡಿದೆ.



# ಬಾಲಯ್ಯ ಜನ್ಮದಿನಕ್ಕೆ ಅಖಂಡ-2 ಟೀಸರ್ ರಿಲೀಸ್

ಗಾಡ್ ಆಫ್ ಮಾಸ್' ನಂದಮೂರಿ ಬಾಲಕೃಷ್ಣ ಇಂದು ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಬಾಲಯ್ಯ ಜನ್ಮದಿನಕ್ಕೆ ಅವರು ನಟಿಸುತ್ತಿರುವ ಬಹುನಿರೀಕ್ಷಿತ ಸಿನಿಮಾ 'ಅಖಂಡ-2' ಟೀಸರ್ ಬಿಡುಗಡೆ ಮಾಡಲಾಗಿದೆ. ನಂದಿ ಮುಖ ಇರುವ ತ್ರಿಶೂಲ ಹಿಡಿದು ಮಾಸ್ ಅವತಾರದಲ್ಲಿ ಬಾಲಯ್ಯ ಎಂಟ್ರಿ ಕೊಟ್ಟಿದ್ದಾರೆ. ಹಿಮದಿಂದ ಆವೃತವಾದ ಕೈಲಾಸಂ, ಭರ್ಜರಿ ಆಕ್ಷನ್ಸ್, ಎಸ್ ಥಮನ್ ಮ್ಯೂಸಿಕ್ 'ಅಖಂಡ-2' ಟೀಸರ್‌ನ ಹೈಲೆಟ್ಸ್ ಆಗಿದೆ. ಸಾಧು ಗೆಟಪ್‌ನಲ್ಲಿ ಎಂಟ್ರಿ ಕೊಡುವ ಬಾಲಯ್ಯ ದುಷ್ಟರನ್ನು ಸಂಹಾರ ಮಾಡುವ ರೀತಿಯೂ ಅಭಿಮಾನಿಗಳಿಗೆ ಸಖತ್ ಕಿಕ್ ನೀಡುತ್ತದೆ.

ಬಾಲಕೃಷ್ಣ ನಟನೆಯ 'ಅಖಂಡ' ಸಿನಿಮಾ 2021ರಲ್ಲಿ ಬಿಡುಗಡೆ ಆಗಿತ್ತು. ಈ ಚಿತ್ರದಲ್ಲಿ ಬಾಲಯ್ಯ ಅಘೋರಿಯ ಪಾತ್ರದಲ್ಲಿ ನಟಿಸಿದ್ದರು. ಇದೀಗ ಅದೇ ಸಿನಿಮಾದ ಎರಡನೇ ಭಾಗವೇ 'ಅಖಂಡ-2' ಆಗಿದೆ. 'ಅಖಂಡ' ಸಿನಿಮಾ ನಿರ್ದೇಶನ ಮಾಡಿದ್ದ ಬೊಯಪಾಟಿ ಶ್ರೀನು ಅವರೇ 'ಅಖಂಡ-2' ಸಿನಿಮಾವನ್ನು ನಿರ್ದೇಶನ ಮಾಡಲಿದ್ದಾರೆ. 'ಅಖಂಡ-2' ಸಿನಿಮಾದಲ್ಲಿಯೂ ಬಾಲಕೃಷ್ಣ ಅವರು ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎನ್ನಲಾಗುತ್ತಿದೆ. ಬೊಯಪಾಟಿ ಶ್ರೀನು ಹಾಗೂ ಬಾಲಕೃಷ್ಣ ಕಾಂಬಿನೇಷನ್‌ನ ನಾಲ್ಕನೇ ಸಿನಿಮಾ ಇದಾಗಿದೆ. ಈ ಹಿಂದೆ ಬಂದಿದ್ದ ಸಿಂಹ, ಲೆಜೆಂಡ್ ಹಾಗೂ 2021ರಲ್ಲಿ ಬಿಡುಗಡೆ ಆಗಿದ್ದ ಅಖಂಡ ಸಿನಿಮಾಗಳು ಭಾರಿ ಯಶಸ್ಸುಗಳಿಸಿವೆ. ಇದೀಗ 'ಅಖಂಡ-2'ರ ನಿರ್ದೇಶನದಲ್ಲಿ ಬೊಯಪಾಟಿ ತೊಡಗಿದ್ದಾರೆ. ಪ್ರತಿಷ್ಠಿತ 14 ರೀಲ್ಸ್ ಪ್ಲಸ್ ಬ್ಯಾನರ್ ಅಡಿಯಲ್ಲಿ ರಾಮ್ ಅಚಂತ ಮತ್ತು ಗೋಪಿಚಂದ್ ಅಚಂತ ನಿರ್ಮಿಸಿರುವ ಈ ಚಿತ್ರವನ್ನು ಎಂ ತೇಜಸ್ವಿನಿ ನಂದಮೂರಿ ಪ್ರಸ್ತುತಪಡಿಸಿದ್ದಾರೆ.



# ಚೆನ್ನೈಗೆ ನನ್ನ ಹೃದಯದಲ್ಲಿ ವಿಶೇಷ ಸ್ಥಾನ



**ನಾನು ಮೊದಲ ಕಲಿತ ಭಾಷೆ ತಮಿಳು**

ರಶ್ಮಿಕಾ ಮಂದಣ್ಣ ಅವರು ಚೆನ್ನೈನಲ್ಲಿ 'ಕುಬೇರ' ಚಿತ್ರದ ಪ್ರಚಾರ ಕಾರ್ಯಕ್ರಮದ ಫೋಟೋವನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದು ವೈರಲ್ ಆಗಿದೆ. ಈ ಫೋಟೋದಲ್ಲಿ ರಶ್ಮಿಕಾ ತಮ್ಮ ಬಾಲ್ಯದ ನೆನಪುಗಳನ್ನು ಹಂಚಿಕೊಂಡಿದ್ದಾರೆ. ಚೆನ್ನೈಗೆ ತಮ್ಮ ವಿಶೇಷ ಅನುಬಂಧದ ಬಗ್ಗೆ ರಶ್ಮಿಕಾ ಮಾತನಾಡಿದ್ದಾರೆ. ನಟಿ ರಶ್ಮಿಕಾ ಮಂದಣ್ಣ ಅವರ ಹೆಸರು ದೇಶಾದ್ಯಂತ ಚಾಲ್ತಿಯಲ್ಲಿ ಇದೆ. ಅವರು ಇತ್ತೀಚೆಗೆ 'ಪುಷ್ಪ 2' ಚಿತ್ರದಿಂದ ಅವರು ದೊಡ್ಡ ಗೆಲುವು ಪಡೆದರು. ಆ ಬಳಿಕ 'ಛಾವಾ' ರಿಲೀಸ್ ಆಗಿ ಸೂಪರ್ ಹಿಟ್ ಆಯಿತು. ಈಗ ರಶ್ಮಿಕಾ ಮಂದಣ್ಣ ಅವರು ತಮಿಳು ಚಿತ್ರರಂಗಕ್ಕೆ ಮರಳಿದ್ದಾರೆ. 'ವಾರಿಸು' ಬಳಿಕ ಅವರು ಮತ್ತೆ ತಮಿಳು ಪ್ರೇಕ್ಷಕರ ಎದುರು ಬರುತ್ತಿದ್ದಾರೆ. ರಶ್ಮಿಕಾ ಮಂದಣ್ಣ ಸೋಶಿಯಲ್ ಮೀಡಿಯಾದಲ್ಲಿ ಫೋಟೋ ಹಂಚಿಕೊಂಡಿದ್ದು, ಈಗ ವೈರಲ್ ಆಗಿದೆ. ಈ ಫೋಟೋಗೆ ಚೆನ್ನೈ ಹಾಗೂ ತಮಿಳು ಭಾಷೆ ಬಗ್ಗೆ ಹೊಗಳಿದ್ದಾರೆ. ರಶ್ಮಿಕಾ ಮಂದಣ್ಣ ಅವರಿಗೆ ಎಲ್ಲಾ ಹೀರೋಗಳ ಜೊತೆ ಒಳ್ಳೆಯ ನಂಟು ಬೆಳೆದಿದೆ. ಅದರಲ್ಲೂ ನಾಗಾರ್ಜುನ ಜೊತೆಗೆ ಅವರಿಗೆ ಒಳ್ಳೆಯ ನಂಟಿದೆ. ಈ ಮೊದಲು 'ದೇವದಾಸ' ಹೆಸರಿನ ಚಿತ್ರದಲ್ಲಿ ರಶ್ಮಿಕಾ ಹಾಗೂ ನಾಗಾರ್ಜುನ ಒಟ್ಟಿಗೆ ನಟಿಸಿದ್ದರು. ಇದರಿಂದ ಇಬ್ಬರ ಮಧ್ಯೆ ಒಳ್ಳೆಯ ಬಾಂಧವ್ಯ ಬೆಳೆಯಿತು. ಅದು ಈಗಲೂ ಮುಂದುವರಿದಿದೆ. 'ಕುಬೇರ' ಸಿನಿಮಾದಲ್ಲಿ ಮತ್ತೆ ಇವರಿಗೆ ತೆರೆ ಹಂಚಿಕೊಳ್ಳುವ ಅವಕಾಶ ದೊರೆತಿದೆ. ಈಗ ರಶ್ಮಿಕಾ ಅವರು ಸೋಶಿಯಲ್ ಮೀಡಿಯಾದಲ್ಲಿ ಫೋಟೋ ಒಂದನ್ನು ಹಂಚಿಕೊಂಡಿದ್ದಾರೆ. ಈ ಫೋಟೋದಲ್ಲಿ ನಾಗಾರ್ಜುನ ಕಾಲ ಬಳಿ ರಶ್ಮಿಕಾ ಕುಳಿತು ಏನನ್ನೂ ಚರ್ಚೆ ಮಾಡುತ್ತಿದ್ದಾರೆ. ಈ ಫೋಟೋ ವೈರಲ್ ಆಗಿದೆ. ಚೆನ್ನೈನಲ್ಲಿ ನಡೆದ ಗ್ರ್ಯಾಂಡ್ ಈವೆಂಟ್ ವೇಳೆ ತೆಗೆದ ಫೋಟೋ ಇದಾಗಿದೆ. ನಾಗಾರ್ಜುನ ಅವರು ರಶ್ಮಿಕಾ ಕೈ ಹಿಡಿದ್ದಾರೆ. ಈ ಫೋಟೋಗೆ ಅವರು ವಿಶೇಷ ಕ್ಯಾಪ್ಶನ್ ನೀಡಿದ್ದಾರೆ.

'ನಾವು ಕುಬೇರ ಚಿತ್ರದ ಪ್ರಮೋಷನ್‌ನ ಚೆನ್ನೈನಲ್ಲಿ ಆರಂಭಿಸಿದ್ದೇವೆ. ನನ್ನ ಬಾಲ್ಯ ಇಲ್ಲಿ ಕಳೆದ ಕಾರಣಕ್ಕೆ ಚೆನ್ನೈಗೆ ನನ್ನ ಹೃದಯದಲ್ಲಿ ವಿಶೇಷ ಸ್ಥಾನ ಇದೆ. ನನಗೆ ಖುಷಿ ಇದೆ.


# ಸ್ಕೂಲ್ ಆಫ್ ಬ್ಯಾಡ್ಮಿಂಟನ್ ಘೋಷಿಸಿದ ದೀಪಿಕಾ

ತಮ್ಮ ತಂದೆಯ 70ನೇ ವರ್ಷದ ಹುಟ್ಟುಹಬ್ಬದ ಸಂದರ್ಭದಲ್ಲಿರುವ ಬಾಲಿವುಡ್ ನಟಿ ದೀಪಿಕಾ ಪಡುಕೋಣೆ 'ಪಡುಕೋಣೆ ಸ್ಕೂಲ್ ಆಫ್ ಬ್ಯಾಡ್ಮಿಂಟನ್' ಪ್ರಾರಂಭಿಸುವುದಾಗಿ ಘೋಷಿಸಿದ್ದಾರೆ. ಹೌದು, ದೀಪಿಕಾ ಪಡುಕೋಣೆ ತಂದೆ ಪ್ರಕಾಶ್ ಪಡುಕೋಣೆ ಅವರ ಹುಟ್ಟುಹಬ್ಬದ ಸಂಭ್ರಮದಲ್ಲಿ ಈ ಕುರಿತು ತಮ್ಮ ಇನಸ್ಟಾಗ್ರಾಂ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ದೀಪಿಕಾ ಪಿಎಸ್‌ಬಿಯ ಸಂಸ್ಥಾಪಕಿಯಾಗಿರಲಿದ್ದು, ಪ್ರಕಾಶ್ ಪಡುಕೋಣೆ ಅವರು ಮಾರ್ಗದರ್ಶಕ ಹಾಗೂ ಸಲಹೆಗಾರರಾಗಿ ಕಾರ್ಯನಿರ್ವಹಿಸಲಿದ್ದಾರೆ. ಇನ್ನೂ ಬ್ಯಾಡ್ಮಿಂಟನ್ ಕಲಿಕೆಯ ಮೂಲಕ ಆರೋಗ್ಯದ ಕಡೆ ಗಮನಹರಿಸುವುದನ್ನು ಉತ್ತೇಜಿಸುವ ಗುರಿಯನ್ನು ಹೊಂದಿದ್ದಾರೆ.

ನನ್ನ ತಂದೆಯ ಬ್ಯಾಡ್ಮಿಂಟನ್ ಆಟವನ್ನು ನೋಡುತ್ತಾ, ಆಡುತ್ತಾ ಬೆಳೆದಿದ್ದೇನೆ. ಇದು ಓರ್ವ ವ್ಯಕ್ತಿಯ ಜೀವನವನ್ನು ದೈಹಿಕವಾಗಿ, ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಯಾವ ರೀತಿ ರೂಪಿಸುತ್ತದೆ ಎಂಬುದನ್ನು ನಾನು ನೇರವಾಗಿ ಕಂಡಿದ್ದೇನೆ. ಹೀಗಾಗಿ ಪಡುಕೋಣೆ ಸ್ಕೂಲ್ ಆಫ್ ಬ್ಯಾಡ್ಮಿಂಟನ್ ಮೂಲಕ ಜನರಿಗೆ ಹಂತ ಹಂತವಾಗಿ ಸಂತೋಷ ಮತ್ತು ಶಿಸ್ತಿನ ಪಾಠ ಮಾಡಲು ಬಯಸುತ್ತೇವೆ ಹಾಗೂ ಆರೋಗ್ಯದ ಕಡೆ ಹೆಚ್ಚಿನ ಗಮನ, ಕ್ರೀಡೆ ಯಾವ ರೀತಿ ಸ್ಫೂರ್ತಿ ನೀಡುತ್ತದೆ ಎನ್ನುವುದನ್ನು ತೋರಿಸುತ್ತೇವೆ ಎಂದು ತಿಳಿಸಿದ್ದಾರೆ. ಈ ಮೂಲಕ ಪಿಎಸ್‌ಬಿಯನ್ನು ಒಂದು ವರ್ಷದ ಅಂತ್ಯದೊಳಗೆ 100 ಕೇಂದ್ರಗಳಿಗೆ ಹಾಗೂ 3 ವರ್ಷದೊಳಗೆ 250 ಕೇಂದ್ರಗಳಿಗೆ ವಿಸ್ತರಿಸುವ ಗುರಿಯನ್ನು ಹೊಂದಿದ್ದೇವೆ. ನಾನು ಬ್ಯಾಡ್ಮಿಂಟನ್ ಆಟಗಾರ್ತಿಯಾಗಿರಬಹುದು, ಆದರೆ ನನಗೆ ಇಷ್ಟವಾದದ್ದು ಮಾಡಲಿಂಗ್.

# ಸೂರ್ಯ ಜೊತೆಗೆ ಬಿಗ್ ಬಜೆಟ್ ಸಿನಿಮಾಗೆ ಕಮಲ್ ಪ್ಲ್ಯಾನ್

**ಈ ಚಿತ್ರಕ್ಕೆ ಅರುಣ್ ನಿರ್ದೇಶನ**



ನಾಯಕನಲ್ಲದೇ ನಿರ್ಮಾಪಕನಾಗಿಯೂ ಕೆಲಸ ಮಾಡ್ತಿರೋ ಕಮಲ್ ಹಾಸನ್ ಈಗ ನಟ ರಾಕ್ಷಸ ಸೂರ್ಯ ಜೊತೆಗೆ ಬಿಗ್ ಬಜೆಟ್ ಸಿನಿಮಾವೊಂದಕ್ಕೆ ಪ್ಲ್ಯಾನ್ ಮಾಡಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದೆ. ಯೆಸ್ ಕಳೆದ ವರ್ಷ ಕಮಲ್ ತಮ್ಮ ರಾಜ್‌ಕಮಲ್ ಫಿಲ್ಮ್ ಇಂಟರ್‌ನ್ಯಾಷನಲ್ ಬ್ಯಾನರ್ ಅಡಿ ಅಮರನ್ ಚಿತ್ರ ನಿರ್ಮಿಸಿದ್ದರು. ಶಿವಕಾರ್ತಿಕೇಯನ್, ಸಾಯಿ ಪಲ್ಲವಿ ನಟನೆಯ ಹಾಗೂ ರಾಜ್‌ಕುಮಾರ್ ಪೆರಿಯಸಾಮಿ ನಿರ್ದೇಶನದ ಈ ಚಿತ್ರ ಸಕ್ಸಸ್ ಕಂಡಿತ್ತು. ಆ ಬಳಿಕ ಇದೇ ಬ್ಯಾನರ್ ಅಡಿಯಲ್ಲಿ ಮದ್ರಾಸ್ ಟಾಕೀಸ್ ನಿರ್ಮಿಸಿದ ಥಗ್ ಲೈಫ್ ಸಿನಿಮಾ ಇತ್ತೀಚೆಗಷ್ಟೇ ತೆರೆ ಕಂಡಿತ್ತು. ಆದ್ರೆ ಕರ್ನಾಟಕದಲ್ಲಿ ಈ ಚಿತ್ರಕ್ಕೆ ನಿಷೇಧ ಹೇರಿರೋದ್ರಿಂದ ಈ ಚಿತ್ರದ ಗಳಿಕೆಯೂ ಕುಸಿದಿದೆ. ಈ ಬೆನ್ನಲ್ಲೇ ಕಮಲ್ ಪ್ರಸಿದ್ಧ ಸ್ಟಂಟ್ ಮಾಸ್ಟರ್ ಅನ್ಬರಿವು ಚಿತ್ರದಲ್ಲಿ ನಾಯಕ ನಟನಾಗಿ ನಟಿಸಲು ತಯಾರಿ ನಡೆಸುತ್ತಿದ್ದಾರೆ. ಇದರ ನಡುವೆಯೇ ಮತ್ತೊಂದು ಬಿಗ್ ಬಜೆಟ್ ಸಿನಿಮಾ ನಿರ್ಮಾಣಕ್ಕೆ ಪ್ಲ್ಯಾನ್ ಮಾಡಿಕೊಂಡಿದ್ದಾರೆ ಅನ್ನೋದು ಗೊತ್ತಾಗಿದೆ. ಸದ್ಯ ಚಿತ್ರಕ್ಕೆ ಇನ್ನೂ ಟೈಟಲ್ ಫಿಕ್ಸ್ ಆಗಿಲ್ಲ, ಆದ್ರೆ ಯು. ಅರುಣ್‌ಕುಮಾರ್ ಈ ಚಿತ್ರವನ್ನು ನಿರ್ದೇಶನ ಮಾಡಲಿದ್ದಾರೆ. ಅರುಣ್ ಕುಮಾರ್ ಈಗಾಗಲೇ ನಿರ್ದೇಶಿಸಿರುವ ಸಿದ್ಧಾರ್ಥ್ ಅಭಿನಯದ ಚಿತ್ತ, ವಿಕ್ರಮ್ ನಟನೆಯ ವೀರ ಧೀರ ಸೂರನ್ ಚಿತ್ರಗಳು ಬ್ಲಾಕ್ ಬಸ್ಟರ್ ಹಿಟ್ ಆಗಿವೆ. ಇದೀಗ ಕಮಲ್ ನಿರ್ಮಾಣ ಸಂಸ್ಥೆಯ ಚಿತ್ರಕ್ಕೆ ಆಕ್ಷನ್ ಕಟ್ ಹೇಳಲು ಸಜ್ಜಾಗುತ್ತಿದ್ದಾರೆ. ಈ ಚಿತ್ರಕ್ಕೆ ನಟ ಸೂರ್ಯ ನಾಯಕನಾಗಿ ನಟಿಸಲಿದ್ದು, ಬಿಗ್ ಬಜೆಟ್ ಸಿನಿಮಾ ಇದಾಗಿರಲಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

# ಕೆಎಲ್ ರಾಹುಲ್ ಐಪಿಎಲ್ ಇತಿಹಾಸದ ಅತ್ಯಂತ ನತದೃಷ್ಟ ಆಟಗಾರ!

**ಟ್ರೋಫಿ ಗೆಲ್ಲದ ಆಟಗಾರ**

ಹೌದು, ಐಪಿಎಲ್ ಇತಿಹಾಸದ ನತದೃಷ್ಟ ಆಟಗಾರರ ಪಟ್ಟಿಯಲ್ಲಿ ಕನ್ನಡಿಗ ಕೆಎಲ್ ರಾಹುಲ್ ಈಗ ಮುಂಚೂಣಿಯಲ್ಲಿದ್ದಾರೆ. ಕಳೆದ 13 ಸೀಸನ್‌ಗಳಲ್ಲಿ 5 ತಂಡಗಳ ಪರ ಕಣಕ್ಕಿಳಿದಿರುವ ರಾಹುಲ್ ಒಟ್ಟು 5222 ರನ್ ಕಲೆಹಾಕಿದ್ದಾರೆ. ಇದಾಗ್ಯೂ, ಅವರು ಒಮ್ಮೆಯೂ ಟ್ರೋಫಿ ಗೆದ್ದಿಲ್ಲ. ಅಂದರೆ ಐಪಿಎಲ್‌ನಲ್ಲಿ ಅತ್ಯಧಿಕ ರನ್ ಪೇರಿಸಿ ಟ್ರೋಫಿ ಗೆಲ್ಲದ ಆಟಗಾರರ ಪಟ್ಟಿಯಲ್ಲಿ ಕೆಎಲ್ ರಾಹುಲ್ ಇದೀಗ ಅಗ್ರಸ್ಥಾನದಲ್ಲಿದ್ದಾರೆ.

ಕೆಎಲ್ ರಾಹುಲ್ ತಮ್ಮ ಐಪಿಎಲ್ ಕೆರಿಯರ್ ಆರಂಭಿಸಿದ್ದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಕಣಕ್ಕಿಳಿಯುವ ಮೂಲಕ ಎಂಬುದು ವಿಶೇಷ. 2013 ರಲ್ಲಿ ಆರ್‌ಸಿಬಿ 5 ಪಂದ್ಯಗಳನ್ನಾಡಿದ್ದ ರಾಹುಲ್ ಕೇವಲ 20 ರನ್ ಮಾತ್ರ ಕಲೆಹಾಕಿದ್ದರು. ಹೀಗಾಗಿ ಆರ್‌ಸಿಬಿ ಫ್ರಾಂಚೈಸಿ ಅವರನ್ನು ತಂಡದಿಂದ ರಿಲೀಸ್ ಮಾಡಿತ್ತು. ಐಪಿಎಲ್ 2014 ರಲ್ಲಿ ಕೆಎಲ್ ರಾಹುಲ್ ಅವರನ್ನು ಸನ್‌ರೈಸರ್ಸ್ ಹೈದರಾಬಾದ್ ಫ್ರಾಂಚೈಸಿ ಖರೀದಿಸಿತು. ಅದರಂತೆ 2014 ಮತ್ತು 2015 ರಲ್ಲಿ ಎಸ್‌ಆರ್‌ಹೆಚ್ ಪರ ಕಣಕ್ಕಿಳಿದ ರಾಹುಲ್ ಒಟ್ಟು 20 ಪಂದ್ಯಗಳನ್ನಾಡಿದ್ದರು. ಈ ವೇಳೆ ಒಟ್ಟು 308 ರನ್ ಕಲೆಹಾಕಿದ್ದರು.

2016 ರ ಹರಾಜಿಗೂ ಮುನ್ನ ಆರ್‌ಸಿಬಿ ಫ್ರಾಂಚೈಸಿಯು ಟ್ರಾನ್ಸ್‌ಫರ್ ಆಯ್ಕೆಯ ಮೂಲಕ ಕೆಎಲ್ ರಾಹುಲ್ ಅವರನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು. ಅದರಂತೆ ಎರಡು ಸೀಸನ್‌ಗಳಲ್ಲಿ (2016-17) ಆರ್‌ಸಿಬಿ ತಂಡದಲ್ಲಿ ಕಾಣಿಸಿಕೊಂಡಿದ್ದ ರಾಹುಲ್ ಒಟ್ಟು 28 ಪಂದ್ಯಗಳನ್ನಾಡಿದ್ದರು. ಈ ವೇಳೆ ಕಲೆಹಾಕಿದ್ದು 397 ರನ್‌ಗಳು.

2018 ರಲ್ಲಿ ಪಂಜಾಬ್ ಕಿಂಗ್ಸ್ ಪಾಲಾದ ಕೆಎಲ್ ರಾಹುಲ್ 4 ಸೀಸನ್ ಆಡಿದ್ದರು. ಈ ವೇಳೆ ಪಂಜಾಬ್ ಕಿಂಗ್ಸ್ ತಂಡದ ನಾಯಕರಾಗಿಯೂ ಕಾಣಿಸಿಕೊಂಡಿದ್ದರು. ಅದರಂತೆ 2018 ರಿಂದ 2021ರವರೆಗೆ ಪಂಜಾಬ್ ಪರ ರಾಹುಲ್ 55 ಪಂದ್ಯಗಳನ್ನಾಡಿದ್ದ ರಾಹುಲ್ 2548 ರನ್ ಕಲೆಹಾಕಿದ್ದರು.

2021 ರಲ್ಲಿ ಲಕ್ನೋ ಸೂಪರ್ ಜೈಂಟ್ಸ್ ತಂಡದ ನಾಯಕರಾಗಿ ಆಯ್ಕೆಯಾದ ಕೆಎಲ್ ರಾಹುಲ್ ಎಲ್‌ಎಸ್‌ಜಿ ಪರ ಒಟ್ಟು ಮೂರು ಸೀಸನ್ ಆಡಿದ್ದಾರೆ. ಈ ವೇಳೆ ಒಟ್ಟು 38 ಪಂದ್ಯಗಳಲ್ಲಿ 1410 ರನ್ ಕಲೆಹಾಕಿದ್ದಾರೆ. ಈ ಮೂಲಕ ಲಕ್ನೋ ಸೂಪರ್ ಜೈಂಟ್ಸ್ ಪರ ಅತ್ಯಧಿಕ ರನ್ ಕಲೆಹಾಕಿದ ಬ್ಯಾಟರ್ ಎನಿಸಿಕೊಂಡಿದ್ದಾರೆ. 2025 ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಪರ ಕಣಕ್ಕಿಳಿದಿರುವ ಕೆಎಲ್ ರಾಹುಲ್ 14 ಪಂದ್ಯಗಳಿಂದ ಕಲೆಹಾಕಿರುವುದು 539 ರನ್‌ಗಳು. ಈ ಮೂಲಕ ಐಪಿಎಲ್‌ನ 145 ಪಂದ್ಯಗಳಿಂದ ಒಟ್ಟು 5222 ರನ್ ಕಲೆಹಾಕಿದ್ದಾರೆ. ಅತ್ತ ಐದು ತಂಡಗಳ ಪರ ಕಣಕ್ಕಿಳಿದು 5200+ ರನ್‌ಗಳಿಸಿದರೂ ಕೆಎಲ್ ರಾಹುಲ್ ಪಾಲಿಗೆ ಐಪಿಎಲ್ ಟ್ರೋಫಿ ಎಂಬುದು ಮರೀಚಿಕೆಯಾಗಿಯೇ ಉಳಿದಿದೆ.



# ಅನುಚಿತ ವರ್ತನೆ: ರವಿಚಂದ್ರನ್ ಅಶ್ವಿನ್‌ಗೆ ದಂಡ..!



**9 ವಿಕೆಟ್‌ಗಳ ಭರ್ಜರಿ ಜಯ**

ತಮಿಳುನಾಡು ಪ್ರೀಮಿಯರ್ ಲೀಗ್‌ನ 5ನೇ ಪಂದ್ಯದಲ್ಲಿ ಅಂಪೈರ್ ಜೊತೆ ವಾಗ್ವಾದ ನಡೆಸಿದ್ದಕ್ಕಾಗಿ ದಿಂಡಿಗಲ್ ಡ್ರಾಗನ್ಸ್ ತಂಡದ ನಾಯಕ ರವಿಚಂದ್ರನ್ ಅಶ್ವಿನ್ ಅವರಿಗೆ ಪಂದ್ಯ ಶುಲ್ಕದ ಶೇ.30 ರಷ್ಟು ದಂಡ ವಿಧಿಸಲಾಗಿದೆ.

ಕೊಯಂಬತ್ತೂರಿನ ಎಸ್‌ಎನ್‌ಆರ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ತಿರುಪ್ಪೂರು ತಮಿಳನ್ಸ್ ಮತ್ತು ದಿಂಡಿಗಲ್ ಡ್ರಾಗನ್ಸ್ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಟಾಸ್ ಗೆದ್ದ ತಿರುಪ್ಪೂರು ತಮಿಳನ್ಸ್ ತಂಡದ ನಾಯಕ ಸಾಯಿ ಕಿಶೋರ್ ಬೌಲಿಂಗ್ ಆಯ್ದುಕೊಂಡಿದ್ದರು.

ದಿಂಡಿಗಲ್ ಡ್ರಾಗನ್ಸ್ ಪರ ಇನಿಂಗ್ಸ್ ಆರಂಭಿಸಿದ ರವಿಚಂದ್ರನ್ ಅಶ್ವಿನ್ ಹಾಗೂ ಶಿವಂ ಸಿಂಗ್ ತಂಡಕ್ಕೆ ಉತ್ತಮ ಆರಂಭ ಒದಗಿಸಿದ್ದರು. ಆದರೆ 5ನೇ ಓವರ್‌ನ 5ನೇ ಎಸೆತದಲ್ಲಿ ಅಶ್ವಿನ್ ಅವರನ್ನು ಎಲ್‌ಬಿಡಬ್ಲ್ಯೂ ಮಾಡುವಲ್ಲಿ ಸಾಯಿ ಕಿಶೋರ್ ಯಶಸ್ವಿಯಾದರು. ಇತ್ತ ಸಾಯಿ ಕಿಶೋರ್ ಎಲ್‌ಬಿ ವಿಕೆಟ್‌ಗೆ ಮನವಿ ಮಾಡುತ್ತಿದ್ದಂತೆ ಫೀಲ್ಡ್ ಅಂಪೈರ್ ಔಟ್ ನೀಡಿದರು. ಆದರೆ ಅಂಪೈರ್ ತೀರ್ಪಿನಿಂದ ಅಶ್ವಿನ್ ಸಂತುಷ್ಟರಾಗಿರಲಿಲ್ಲ. ಅಲ್ಲದೆ ನಾನು ನಾಟೌಟ್ ಎಂಬ ವಾದವನ್ನು ಮುಂದಿಟ್ಟು ಫೀಲ್ಡ್ ಅಂಪೈರ್ ಜೊತೆ ವಾಗ್ವಾದಕ್ಕಿಳಿದರು. ಇತ್ತ ಅಶ್ವಿನ್ ತಮ್ಮ ವಾದವನ್ನು ಮುಂದಿಟ್ಟರೂ, ಅತ್ತ ಅಂಪೈರ್ ಅವರೊಂದಿಗೆ ಚರ್ಚಿಸಲು ಮುಂದಾಗಲಿಲ್ಲ.

ಇದರಿಂದ ಮತ್ತಷ್ಟು ಕುಪಿತಗೊಂಡ ಅಶ್ವಿನ್ ಬ್ಯಾಟ್‌ನಿಂದ ಪ್ಯಾಡ್‌ಗೆ ಬಡಿಯುವ ಮೂಲಕ ತಮ್ಮ ಆಕ್ರೋಶವನ್ನು ಹೊರಹಾಕುತ್ತಾ ಪೆವಿಲಿಯನ್ ಕಡೆ ಹೆಜ್ಜೆ ಹಾಕಿದರು. ಅಶ್ವಿನ್ ಅವರ ಈ ನಡೆಯನ್ನು ಗಂಭೀರವಾಗಿ ಪರಿಗಣಿಸಿದ ಮ್ಯಾಚ್ ರೆಫರಿ, ಅಂಪೈರ್ ನಿರ್ಧಾರವನ್ನು ಆಕ್ಷೇಪಿಸಿದ್ದಕ್ಕಾಗಿ ಪಂದ್ಯ ಶುಲ್ಕದ ಶೇ. 10 ರಷ್ಟು ಹಾಗೂ ಕ್ರಿಕೆಟ್ ಉಪಕರಣಗಳ ದುರುಪಯೋಗಕ್ಕಾಗಿ ಶೇ. 20 ರಷ್ಟು ದಂಡ ವಿಧಿಸಿದ್ದಾರೆ.

**ಗೆದ್ದು ಬೀಗಿದ ತಿರುಪ್ಪೂರು ತಮಿಳನ್ಸ್:** ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ದಿಂಡಿಗಲ್ ಡ್ರಾಗನ್ಸ್ ತಂಡವು 16.2 ಓವರ್‌ಗಳಲ್ಲಿ 93 ರನ್‌ಗಳಿಸಿ ಆಲೌಟ್ ಆಯಿತು. ತಿರುಪ್ಪೂರು ತಮಿಳನ್ಸ್ ತಂಡದ ಪರ ಎಸಕ್ಕಿಮುತ್ತು 4 ಓವರ್‌ಗಳಲ್ಲಿ 26 ರನ್ ನೀಡಿ 4 ವಿಕೆಟ್ ಪಡೆದರೆ, ಮತಿವನ್ನನ್ 3 ವಿಕೆಟ್ ಕಬಳಿಸಿ ಮಿಂಚಿದರು. ಇನ್ನು 94 ರನ್‌ಗಳ ಗುರಿ ಬೆನ್ನತ್ತಿದ ತಿರುಪ್ಪೂರು ತಮಿಳನ್ಸ್ ಪರ ತುಷಾರ್ ರಹೇಜಾ 39 ಎಸೆತಗಳಲ್ಲಿ 5 ಭರ್ಜರಿ ಸಿಕ್ಸ್ ಹಾಗೂ 6 ಫೋರ್‌ಗಳೊಂದಿಗೆ ಅಜೇಯ 65 ರನ್ ಬಾರಿಸಿದರೆ, ಎಸ್ ರಾಧಾಕೃಷ್ಣನ್ ಅಜೇಯ 14 ರನ್ ಕಲೆಹಾಕಿದರು. ಈ ಮೂಲಕ ತಿರುಪ್ಪೂರು ತಮಿಳನ್ಸ್ ತಂಡವು 11.5 ಓವರ್‌ಗಳಲ್ಲಿ 94 ರನ್ ಬಾರಿಸಿ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು.

# ಕಠಿಣ ನಿಯಮ ಜಾರಿಗೂ ಮುನ್ನ ಆರ್‌ಸಿಬಿ ತಂಡ ಮಾರಾಟ



ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಕಠಿಣ ನಿಯಮವೊಂದು ಜಾರಿಯಾಗುವ ಸಾಧ್ಯತೆಯಿದೆ. ಈ ನಿಯಮ ಜಾರಿಯಾದರೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಸಂಕಷ್ಟ ಎದುರಾಗುವುದು ಖಚಿತ. ಅದಕ್ಕೂ ಮುನ್ನವೇ ಆರ್‌ಸಿಬಿ ಫ್ರಾಂಚೈಸಿಯನ್ನು ಮಾರಾಟ ಮಾಡಲು ಡಿಯಾಜಿಯೋ ಕಂಪೆನಿ ಸಮಾಲೋಚಿಸಿದೆ ಎಂದು ವರದಿಯಾಗಿದೆ.

ಅಷ್ಟಕ್ಕೂ ಐಪಿಎಲ್‌ನಲ್ಲಿ ಜಾರಿಯಾಗಲಿರುವ ಹೊಸ ನಿಯಮವೆಂದರೆ ತಂಬಾಕು ಮತ್ತು ಆಲ್ಕೋಹಾಲ್ ಬ್ರ್ಯಾಂಡ್‌ಗಳ ಜಾಹೀರಾತು ನಿಷೇಧ. ಅಂದರೆ ಟೂರ್ನಿಯಲ್ಲಿ ತಂಬಾಕು ಮತ್ತು ಮದ್ಯ ಜಾಹೀರಾತಿನ ಪ್ರಚಾರ ನಿಷೇಧಿಸಲು ಆರೋಗ್ಯ ಸಚಿವಾಲಯ ಚಿಂತಿಸುತ್ತಿದೆ. ಈ ನಿಯಮ ಜಾರಿಯಾದರೆ ಆರ್‌ಸಿಬಿ ತಂಡಕ್ಕೆ ಸಮಸ್ಯೆ ಎದುರಾಗಲಿದೆ.

ಏಕೆಂದರೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು ಡಿಯಾಜಿಯೋ ಕಂಪೆನಿಯ ಒಡೆತನದಲ್ಲಿದೆ. ಬ್ರಿಟನ್ ಮೂಲದ ಡಿಯಾಜಿಯೋ ತನ್ನ ಭಾರತೀಯ ಘಟಕವಾದ ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಎಂಬ ಆಲ್ಕೋಹಾಲ್ ಕಂಪನಿಯ ಮೂಲಕ ಆರ್‌ಸಿಬಿ ಫ್ರಾಂಚೈಸಿಯನ್ನು ಹೊಂದಿದೆ. ಇತ್ತ ಐಪಿಎಲ್‌ನಲ್ಲಿ ಅನಾರೋಗ್ಯಕರ ವಸ್ತುಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪ್ರಚಾರ ಮಾಡದಂತಹ ನಿಯಮವನ್ನು ಜಾರಿಗೆ ತರುವ ಬಗ್ಗೆ ಚಿಂತಿಸಲಾಗಿದೆ.

ಈ ನಿಯಮ ಜಾರಿಯಾದರೆ, ಆರ್‌ಸಿಬಿ ಫ್ರಾಂಚೈಸಿಯು ಐಪಿಎಲ್‌ನಲ್ಲಿ ಕಾಣಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಆರ್‌ಸಿಬಿ ಫ್ರಾಂಚೈಸಿಯ ಮಾಲೀಕತ್ವ ಹೊಂದಿರುವುದು ಆಲ್ಕೋಹಾಲ್ ಕಂಪೆನಿಯ ಒಡೆತನದಲ್ಲಿ. ಇದೇ ಕಾರಣದಿಂದಾಗಿ ಇದೀಗ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು ತನ್ನ ಷೇರು ಮಾರಾಟ ಮಾಡಲು ಅಥವಾ ಸಂಪೂರ್ಣ ಫ್ರಾಂಚೈಸಿಯನ್ನು ಸೇಲ್ ಮಾಡಲು ಚರ್ಚಿಸಿದೆ ಎಂದು ವರದಿಯಾಗಿದೆ.

ಪ್ರಸ್ತುತ ವರದಿ ಪ್ರಕಾರ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯ ಮೌಲ್ಯ ಸುಮಾರು 2 ಬಿಲಿಯನ್ ಡಾಲರ್. ಅಂದರೆ ಭಾರತೀಯ ರೂಪಾಯಿ ಮೌಲ್ಯ ಬರೋಬ್ಬರಿ 17 ಸಾವಿರ ಕೋಟಿ ರೂ. ಈ ಮೊತ್ತಕ್ಕೆ ಆರ್‌ಸಿಬಿ ತಂಡವನ್ನು ಖರೀದಿಸಲು ಯಾರಾದರೂ ಮುಂದಾದರೆ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಹೊಸ ಮಾಲೀಕರ ಪಾಲಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

# ಪಾಕ್ ವಿರುದ್ಧ ಒಂದೇ ಒಂದು ಟೆಸ್ಟ್ ಆಡದ ರೋಹಿತ್, ವಿರಾಟ್

ಭಾರತೀಯ ಕ್ರಿಕೆಟ್ ಲೋಕದ ದಂತಕಥೆ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಇತ್ತೀಚೆಗೆ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು. ಇದಕ್ಕೂ ಮೊದಲು, ಆಸ್ಟ್ರೇಲಿಯಾ ಪ್ರವಾಸದ ಸಮಯದಲ್ಲಿ ರವಿಚಂದ್ರನ್ ಅಶ್ವಿನ್ ಕೂಡ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದರು. ಈ ಕ್ರಿಕೆಟಿಗರು ಪ್ರಪಂಚದಾದ್ಯಂತ ಅನೇಕ ಕ್ರಿಕೆಟ್ ಪಂದ್ಯವನ್ನು ಆಡಿದ್ದಾರೆ, ಆದರೆ ಇವರು ಪಾಕಿಸ್ತಾನಿ ನೆಲದಲ್ಲಿ ಅಥವಾ ಪಾಕಿಸ್ತಾನ ವಿರುದ್ಧ ಮಾತ್ರ ಒಂದೇ ಒಂದು ಪಂದ್ಯವನ್ನು ಆಡಿಲ್ಲ. ತಮ್ಮ ವೃತ್ತಿಜೀವನದಲ್ಲಿ ಪಾಕಿಸ್ತಾನ ವಿರುದ್ಧ ಒಂದೇ ಒಂದು ಟೆಸ್ಟ್ ಪಂದ್ಯವನ್ನು ಆಡದ ಐದು ಪ್ರಮುಖ ಭಾರತೀಯ ಆಟಗಾರರು ಯಾರೆಲ್ಲ ಎಂಬುದನ್ನು ನೋಡೋಣ.



**ಪಿಯೂಷ್ ಕೂಡ ಪಾಕ್ ವಿರುದ್ಧ ಆಡಿಲ್ಲ**

**ರೋಹಿತ್ ಶರ್ಮಾ ಪಾಕ್ ವಿರುದ್ಧ ಆಡಿಲ್ಲ**

ರೋಹಿತ್ ಶರ್ಮಾ ಕೆಲವು ದಿನಗಳ ಹಿಂದೆ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು. ರೋಹಿತ್ ತಮ್ಮ ವೃತ್ತಿಜೀವನದಲ್ಲಿ 67 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ, ಆದರೆ ಅವರು ಪಾಕಿಸ್ತಾನಿ ನೆಲದಲ್ಲಿ ಅಥವಾ ಪಾಕಿಸ್ತಾನ ವಿರುದ್ಧ ಒಂದೇ ಒಂದು ಟೆಸ್ಟ್ ಪಂದ್ಯವನ್ನು ಆಡಿಲ್ಲ. ಈ ಸ್ವರೂಪದಲ್ಲಿ ಅವರು 12 ಶತಕಗಳು ಮತ್ತು 18 ಅರ್ಧಶತಕಗಳನ್ನು ಗಳಿಸಿದ್ದಾರೆ. ವಿರಾಟ್ ಕೊಹ್ಲಿ ಪಾಕಿಸ್ತಾನ ವಿರುದ್ಧ ಹಲವು ಸ್ಮರಣೀಯ ಇನ್ನಿಂಗ್ಸ್‌ಗಳನ್ನು ಆಡಿದ್ದಾರೆ. ವಿರಾಟ್ ಏಕದಿನ ಮತ್ತು ಟಿ20ಗಳಲ್ಲಿ ಈ ಸಾಧನೆ ಮಾಡಿದ್ದಾರೆ. ಆದರೆ ವಿರಾಟ್ ಪಾಕಿಸ್ತಾನ ವಿರುದ್ಧ ಒಂದೇ ಒಂದು ಟೆಸ್ಟ್ ಪಂದ್ಯವನ್ನು ಆಡಿಲ್ಲ. ವಿರಾಟ್ 123 ಟೆಸ್ಟ್ ಪಂದ್ಯಗಳಲ್ಲಿ 30 ಶತಕ ಮತ್ತು 31 ಅರ್ಧಶತಕಗಳನ್ನು ಗಳಿಸಿದ್ದಾರೆ. ಆದರೆ ಇವುಗಳಲ್ಲಿ ಯಾವುದೂ ಪಾಕಿಸ್ತಾನ ವಿರುದ್ಧ ಬಂದಿಲ್ಲ.

**ರವಿಚಂದ್ರನ್ ಅಶ್ವಿನ್ ಕೂಡ ನಿವೃತ್ತರಾದರು**

ಆಸ್ಟ್ರೇಲಿಯಾ ಪ್ರವಾಸದ ಮಧ್ಯದಲ್ಲಿ ರವಿಚಂದ್ರನ್ ಅಶ್ವಿನ್ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದರು. ಈ ಆಟಗಾರ ತಮ್ಮ ವೃತ್ತಿಜೀವನದಲ್ಲಿ 500 ಕ್ಕೂ ಹೆಚ್ಚು ವಿಕೆಟ್‌ಗಳನ್ನು ಪಡೆದಿದ್ದಾರೆ ಮತ್ತು 100 ಕ್ಕೂ ಹೆಚ್ಚು ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ. ಆದರೆ ವಿರಾಟ್ ಮತ್ತು ರೋಹಿತ್‌ರಂತೆ ಅಶ್ವಿನ್ ಕೂಡ ಪಾಕಿಸ್ತಾನದಲ್ಲಿ ಅಥವಾ ಪಾಕ್ ವಿರುದ್ಧ ಯಾವುದೇ ಟೆಸ್ಟ್ ಪಂದ್ಯಗಳನ್ನು ಆಡಲಿಲ್ಲ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**